
ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ



ಸಂಪುಟ 21 ಸಂಚಿಕೆ 11 | ಮಾರ್ಚ್ 9-15, 1998 | ರೂ.2.00

ಬಿಜೆಪಿಯ ಅಜೆಂಡಾಕ್ಕೆ ಮತ್ತೊಮ್ಮೆ ಜನತೆಯ ಕಡಿವಾಣ

ಅರವತ್ತು ಕೋಟಿ ಭಾರತೀಯ ಮತದಾರರ ತೀರ್ಪು ಬಂದಿದೆ. ವಿಧ- ವಿಧದ ಜನ ಇದನ್ನು ವಿಧ-ವಿಧವಾಗಿ ತಮ್ಮ ಅಗತ್ಯಕ್ಕೆ ತಕ್ಕಂತೆ ವಿವರಿಸುತ್ತಿದ್ದಾರೆ. ಬುದ್ಧಿಜೀವಿಗಳು ಇದು ಕುಂಠಿತ ತೀರ್ಪು, ಬಿರುಕು ಬಿಟ್ಟ ತೀರ್ಪು ಎಂದೆಲ್ಲಾ ಖೇದ ವ್ಯಕ್ತಪಡಿಸುತ್ತಿದ್ದಾರೆ. ಬಿಜೆಪಿ ಸಿಕ್ಕ-ಸಿಕ್ಕವರ ಕೈ ಹಿಡಿದು, ತತ್ವ, ಸಿದ್ಧಾಂತ, ನೀತಿ, ಮೌಲ್ಯಗಳಿಗೆಲ್ಲಾ ತಿಲಾಂಜಲಿ ನೀಡಿ ಒಂದು ನಿಜವಾದ ಖಿಚಡಿಯನ್ನು ರಚಿಸಿಕೊಂಡು, ದೇಶದ ದೊಡ್ಡ ಬಂಡವಾಳಿಗರ ಭಾರೀ ಬೆಂಬಲವನ್ನು ಪಡೆದೂ ಕೂಡ ಸ್ಪಷ್ಟ ಜನಾದೇಶ ಪಡೆಯುವಲ್ಲಿ ಮತ್ತೆ ವಿಫಲ ವಾಗಿದೆ. ಏನೆಂದೂ ಸಾಮ್ಯವಿಲ್ಲದ, ಕೆಲವು ವಿಷಯಗಳಲ್ಲಂತೂ ಕಡುವಿರೋಧ ವಿರುವ ಕೆಲವು ಪಕ್ಷಗಳ ಹೆಗಲ ಮೇಲೇರಿ ೨೫೦ ಸ್ಥಾನಗಳಲ್ಲಿ ಬೆಂಬಲ ಪಡೆದೂ, ಸ್ಪಷ್ಟ ಜನಾದೇಶಕ್ಕೆ ೨೧ ಸ್ಥಾನಗಳಷ್ಟು ದೂರವಿದ್ದರೂ ಇದನ್ನೇ ಜನಾದೇಶ ಎಂದು ಪರಿಗಣಿಸಬೇಕು ಎಂದು ಬಿಜೆಪಿ ಮುಖಂಡರು, ಅವರ ಬೆಂಬಲಿಗರು ಮಾಧ್ಯಮಗಳಲ್ಲಿ ಹುಯಿಲೆಬ್ಬಿಸುತ್ತಿದ್ದಾರೆ, ಇತರರು ಮುಖ್ಯವಾಗಿ ಸಿಪಿಐ(ಎಂ) ನವರು ಅಧಿಕಾರ ನಡೆಸುವ ತಮ್ಮ 'ಹಕ್ಕನ್ನು ವಂಚಿಸುತ್ತಿದ್ದಾರೆ' ಎಂದು ಬೊಬ್ಬಿಡುತ್ತಿದ್ದಾರೆ. ವಿವಿಧ ರಾಜ್ಯಗಳ ಜನಗಳು ತಂತಮ್ಮ ಆಳುವ ಪಕ್ಷಗಳ ನೀತಿಗಳಿಂದ ಬೇಸತ್ತು ಕೆಲವೆಡೆ ಬಿಜೆಪಿಯ 'ಸ್ಥಿರತೆಯ' 'ಸಾಮರ್ಥ್ಯ'ದ ಘೋಷಣೆಗೆ ಮರುಳಾದರೂ ಒಟ್ಟಾರೆಯಾಗಿ ಅವರಿಗೆ ನಿಚ್ಚಳ ಬಹುಮತ ನೀಡಲು ವಾಸ್ತವವಾಗಿ ಜನತೆಯೇ ನಿರಾಕರಿಸಿದೆ, ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳಲ್ಲಿ ಚಂಚಲತೆ ಹಾಗೂ ಅನೈತಿಕತೆಯಿಂದಾಗಿಯಷ್ಟೇ ಇಷ್ಟಾದರೂ ಸ್ಥಾನ ಪಡೆಯಲು ಸಾಧ್ಯವಾಯಿತು ಎಂಬುದನ್ನು ಬಿಜೆಪಿ ಮುಖಂಡರು ಹಾಗೂ ಅವರ ಬೆಂಬಲಿಗರು ಮರೆಮಾಚಲು ಪ್ರಯತ್ನಿಸುತ್ತಿದ್ದಾರೆ. ಅದಕ್ಕಾಗಿ ಇನ್ನಷ್ಟು ಕರ್ಕಶವಾಗಿ ಬೊಬ್ಬಾಟ ನಡೆಸಿದ್ದಾರೆ.

ಕರ್ನಾಟಕ, ತಮಿಳುನಾಡು, ಅಸ್ಸಾಂ, ಬಿಹಾರ ಹಾಗೂ ಸ್ವಲ್ಪ ಮಟ್ಟಿಗೆ ಆಂಧ್ರ ಪ್ರದೇಶದಂತಹ ಸಂಯುಕ್ತ ರಂಗ ಪಕ್ಷಗಳ ಆಳ್ವಿಕೆಯ ರಾಜ್ಯಗಳಲ್ಲೂ ಆಳುವ ಪಕ್ಷಗಳು ಕಾಂಗ್ರೆಸ್ಸಿಗಿಂತ ಭಿನ್ನವಾದ ಆರ್ಥಿಕ ನೀತಿಯನ್ನು ಅನುಸರಿಸದೇ ಜನಗಳ ಸಂಕಟಗಳಿಗೆ ತಮ್ಮ ಮಿತಿಯೊಳಗಾದರೂ ಪರಿಹಾರ ನೀಡಲು ಪ್ರಯತ್ನಿಸದೇ ಇದ್ದುದರ ಫಲವಾಗಿ ಭ್ರಮನಿರಸನ ಗೊಂಡು 'ಈ ಬಾರಿ' ಬಿಜೆಪಿಗೆ ಅವಕಾಶ ಕೊಡೋಣ ಎಂದು ನಿರ್ಧರಿಸಿದಂತಿದ್ದರೆ, ಕಳೆದ ಬಾರಿ ಇಂತಹ ಅವಕಾಶ ಕೊಟ್ಟ ರಾಜ್ಯಗಳ ಜನ ಅವರ ಒಂದೇ ಬಾರಿಯ ಆಳ್ವಿಕೆಯಿಂದ ತೀವ್ರ ಭ್ರಮನಿರಸನ ಗೊಂಡಿದ್ದಾರೆ ಎಂಬುದೂ ಅಷ್ಟೇ ಸ್ಪಷ್ಟ. ಕೇವಲ ಎಡನೇತೃತ್ವದ ಪಶ್ಚಿಮಬಂಗಾಳ, ಕೇರಳ ಹಾಗೂ ತ್ರಿಪುರಾಗಳಷ್ಟೇ ಈ ಪ್ರವೃತ್ತಿಗೆ ಮತ್ತೊಮ್ಮೆ ಅಪವಾದವಾಗಿ ಮುಂದೆ ಬಂದಿವೆ. ಅಲ್ಲಿಯ ಜನಗಳು ತಮ್ಮ ಸ್ಪಷ್ಟ ನಿರ್ಧಾರವನ್ನು ಮತ್ತೊಮ್ಮೆ ಸಾರಿ ಹೇಳಿದ್ದಾರೆ. ಇದು ಏನನ್ನು ತೋರಿಸುತ್ತದೆ? ದೇಶವನ್ನು ಈಗಿನ ಬಿಕ್ಕಟ್ಟಿನಿಂದ ಪಾರು ಮಾಡಬಲ್ಲ ಏಕೈಕ ರಾಜಕೀಯ ದಾರಿಯೆಂದರೆ ಎಡಪಕ್ಷಗಳು ತೋರಿರುವ ದಾರಿಯೆಂದು ಇದರಿಂದ ಸ್ಪಷ್ಟವಾಗುತ್ತಿಲ್ಲವೇ? ಆದರೂ ಆಳುವ ವರ್ಗಗಳ ಹಿತಾಸಕ್ತಿಗಳನ್ನೇ ದೇಶದ ಹಿತಾಸಕ್ತಿ ಎಂದು ನಂಬಿರುವ ನಮ್ಮ ಹಲವಾರು ಬುದ್ಧಿಜೀವಿಗಳಿಗೆ ಇದು ಕಾಣಿಸುತ್ತಿಲ್ಲ. ಇವನ್ನೆಲ್ಲಾ ವಿವರಿಸಲು ಏನೇನೋ ಸೂತ್ರ-ಸಿದ್ಧಾಂತಗಳನ್ನು ಘೋಷಿಸುತ್ತಿದ್ದಾರೆ, ಆದರಿಂದಾಗಿ ನೀತಿ, ಸಂವಿಧಾನ ಇತ್ಯಾದಿ ಕುರಿತಂತೆ ಇಬ್ಬಂದಿತನವನ್ನು ಪ್ರದರ್ಶಿಸುತ್ತಿದ್ದಾರೆ.

ಈ ನಡುವೆ ಒಂದು ದಶಕದ ಹಿಂದೆ ರಕ್ತಸಿಕ್ತ ರಥಯಾತ್ರೆಯಿಂದ ಆರಂಭಿಸಿದ ದಿಲ್ಲಿ ಗದ್ದುಗೆಯ ಯಾತ್ರೆ ಕೊನೆಗೂ ತನ್ನ ಲಕ್ಷ್ಯವನ್ನು ಸೇರುತ್ತಿದೆ ಎಂದು ಕಾವಿಪಡೆಗಳ ಮಂದಿ ಉತ್ಸುಕರಾಗಿದ್ದಾರೆ. ಆದರೆ ಅದೇ ವೇಳೆಗೆ ಮಿತ್ರಪಕ್ಷಗಳ ಆಕ್ಷೇಪದಿಂದ ತಪ್ಪಿಸಿಕೊಳ್ಳಲು ತಮ್ಮ ಚುನಾವಣಾ ಪ್ರಣಾಳಿಕೆಯನ್ನು ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಕೊನೆಯ ದಿನಾಂಕದ ನಂತರ ಪ್ರಕಟಿಸಿ ಅದರಲ್ಲಿ ಶಿವಸೇನೆ ಬಿಟ್ಟು ಬೇರಾವ ಪಕ್ಷವೂ ಒಪ್ಪದ ರಾಮಮಂದಿರ, ಇತ್ಯಾದಿ ವಿವಾದಾತ್ಮಕ ಅಂಶಗಳನ್ನು ಸೇರಿಸಿದ್ದರೂ ಈಗ ಅವನ್ನು ಕೈ ಬಿಡಬೇಕಾದ ಪರಿಸ್ಥಿತಿ ಬಂದುದಕ್ಕೆ ಒಳಗೊಳಗೇ ಮರುಗುತ್ತಿದ್ದಾರೆ. ಹೇಗಾದರೂ ಅಧಿಕಾರ ಗಿಟ್ಟಿಸುವ ಅವಕಾಶ ಕೈಬಿಟ್ಟು ಹೋಗದಂತೆ ತಡೆಯಲು ತಮ್ಮ ಮೂಲ ಭೂತ ಅಜೆಂಡಾವನ್ನು 'ಬದಿಗಿಟ್ಟು' 'ರಾಷ್ಟ್ರೀಯ ಅಜೆಂಡಾ' ತಯಾರಿಸುತ್ತಿದ್ದಾರಂತೆ. ಸಮ್ಮಿಶ್ರ ಸರಕಾರವನ್ನು ಖಿಚಡಿಯೆಂದವರು ನಿಜವಾದ ಖಿಚಡಿ ತಯಾರಿಸುವುದರೊಂದಿಗೆ, ಹೊರಗಿನಿಂದ ಬೆಂಬಲವನ್ನು ಬೇಜವಾಬ್ದಾರಿತನವೆಂದವರು, ತಮಗೆ ಸುಮಾರು 40 ಕ್ಕೂ ಹೆಚ್ಚು ಸ್ಥಾನಗಳನ್ನು ಕೊಡಿಸಿದ ಎಐಎಡಿಎಂಕೆ ಹಾಗೂ ತೃಣಮೂಲ ಕಾಂಗ್ರೆಸ್ಸಿನ ಮುಖಂಡರು ಹೊರಗಿನಿಂದ ಬೆಂಬಲ ಮಾತ್ರ ಕೊಡುವುದಾಗಿ ಹೇಳಿದರೂ, ಕಳೆದ ಬಾರಿ ಚುನಾವಣಾ ನಂತರ ಪರಸ್ಪರ ವಿರೋಧವಾಗಿ ಸ್ಪರ್ಧಿಸಿದವರು ಒಟ್ಟು ಸೇರುವುದನ್ನು ಸಮಯಸಾಧಕತನ ಎಂದು ವಿರೋಧಿಸಿದವರು ಈ ಬಾರಿ ತಮ್ಮನ್ನು ವಿರೋಧಿಸಿ ಗೆದ್ದ ಹರ್ಯಾಣ ಲೋಕದಳದ ಬೆಂಬಲ ಪಡೆದು, ಇತರ ಇಂತಹ ಪಕ್ಷಗಳ, ವ್ಯಕ್ತಿಗಳ ಬೆಂಬಲ ಯಾಚಿಸುತ್ತಾ ಸರಕಾರ ರಚಿಸಲು ಮುಂದಾಗಿದ್ದಾರೆ.

ಇಷ್ಟು ಘೋರವಾದ ಗೋಸುಂಬೆ ತನವೂ ಸಾಲದೆಂಬಂತೆ ಇದೇ ವೇಳೆಯಲ್ಲಿ ಹಿಮಾಚಲ ಪ್ರದೇಶದಲ್ಲಿ ಈ ಹಿಂದೆ ತಾವು ಬಲವಾಗಿ ವಿರೋಧಿಸಿದ್ದ ಬೃಹತ್ ಟೆಲಿಕಾಂ ಹಗರಣದ ಕುಖ್ಯಾತಿಯ ಸುಖ್‌ರಾಂ ಬೆಂಬಲದಿಂದ ರಾಜ್ಯ ಸರಕಾರ ಮಾಡಲು ಅವಕಾಶ ನೀಡದ್ದಕ್ಕೆ ಹುಯಿಲೆಬ್ಬಿಸುತ್ತಿದ್ದಾರೆ. ಅದೇ ವೇಳೆಗೆ ತಾವು ಅದ್ದೂರಿಯ ಸ್ವಾಗತ ನೀಡಿ ಸೇರಿಸಿಕೊಂಡ ಪಿ.ಕೆ.ತುಂಗನ್ ಮೇಲೆ ಸಿಬಿಐ ಚಾರ್ಜ್ ಶೀಟ್ ಹಾಕಿರುವ ಬಗ್ಗೆ ಮೌನವಾಗಿದ್ದಾರೆ. ಕಾಂಗ್ರೆಸ್ಸಿನ ಜನ-ವಿರೋಧಿ ನೀತಿಗಳಿಂದ ಬೇಸತ್ತ ಜನ ಕೋಟಿಗೆ ಬೇಕಾದ್ದು ಇಂತಹ ಪರ್ಯಾಯವೇ? ಖಂಡಿತಾ ಅಲ್ಲ ಎಂಬುದು ಸುಸ್ಪಷ್ಟ. ಕಾಂಗ್ರೆಸ್ಸಿನ ಬೂರ್ಜ್ವಾ -ಭೂಮಾಲಕ ಪರ ನೀತಿಗಳಿಂದ ಉಂಟಾದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ತಮ್ಮ ಪರ ತಿರುಗಿಸಿಕೊಳ್ಳುವಲ್ಲಿ ಬಿಜೆಪಿ ನೇತೃತ್ವದಲ್ಲಿ ಬಲಪಂಥೀಯ ಶಕ್ತಿಗಳು ತಾತ್ಕಾಲಿಕವಾಗಿ ಮೇಲುಗೈ ಪಡೆದಿವೆ ಎಂಬುದೂ ಸುಸ್ಪಷ್ಟ. ಪ್ರಜಾಪ್ರಭುತ್ವ ವಾದಿಗಳಿಗೆ, ಜನ-ಪರ ಧೋರಣೆಗಳಿಗಾಗಿ ಹೋರಾಡುವವರಿಗೆ ಇದೊಂದು ಪ್ರಬಲ ಸವಾಲು.

ಬಿಜೆಪಿ ಮತ್ತು ಮಿತ್ರ ಪಕ್ಷಗಳು		ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳು		ಸಂಯುಕ್ತ ರಂಗ		ಇತರರು	
ಬಿಜೆಪಿ	178	ಕಾಂಗ್ರೆಸ್	143	ಸಿಪಿಎಂ	32	ಬಿಎಸ್‌ಪಿ	5
ಎಡಿಎಂಕೆ	18	ಆರ್‌ಜೆಡಿ	17	ಸಿಪಿಐ	9	ಹೆಚ್‌ಎಲ್‌ಡಿ	4
ಸಮತಾ	12	ಆರ್‌ಪಿಐ	4	ಆರ್‌ಎಸ್‌ಪಿ	5	ಅರುಣಾಚಲ ಕಾಂ.	2
ಬಿಜು ಜ.ದ	9	ಮುಸ್ಲಿಂ ಲೀಗ್	2	ಫಾರ್ವರ್ಡ್ ಬ್ಲಾಕ್	2	ಸ.ಜ.ಪಾ	1
ಅಕಾಲಿ ದಳ	8	ಕೇರಳ ಕಾಂಗ್ರೆಸ್(ಎಂ)	1	ಎಸ್‌ಪಿ	21	ಎಸ್‌ಡಿಎಫ್	1
ತೃಣಮೂಲ ಕಾಂ.	7			ತೆಲುಗುದೇಶಂ	12	ಆರ್‌ಜೆಪಿ	1
ಶಿವಸೇನೆ	6	ಒಟ್ಟು	167	ಡಿಎಂಕೆ	6	ಎಎಸ್‌ಡಿಸಿ	1
ಪಿಎಂಕೆ	4			ಟಿಎಂಸಿ	3	ಎಂಐಎಂ	1
ಎಂಡಿಎಂಕೆ	3			ಜನತಾದಳ	6	ಪಕ್ಷೇತರ	6
ಲೋಕಶಕ್ತಿ	3						
ಹೆಚ್.ವಿ.ಪಿ	1			ಒಟ್ಟು	96	ಒಟ್ಟು	22
ಜನತಾ ಪಾರ್ಟಿ	1						
ಒಟ್ಟು	250						

ವಿಧಾನಸಭೆ ವಿಸರ್ಜನೆಯ ಬೇಡಿಕೆ ಅತಿರೇಕದ್ದು

ಲೋಕಸಭಾ ಚುನಾವಣೆಯ ಫಲಿತಾಂಶದ ಹಿನ್ನೆಲೆಯಲ್ಲಿ ಕರ್ನಾಟಕ ವಿಧಾನಸಭೆಯನ್ನು ವಿಸರ್ಜಿಸಬೇಕೆಂಬ ಬೇಡಿಕೆಯು ಅನಗತ್ಯ ಹಾಗೂ ಅತಿರೇಕ ವೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿಪ್ರಾಯಪಟ್ಟಿದೆ.

ಉದಾರೀಕರಣದ ಆರ್ಥಿಕ ನೀತಿಗಳನ್ನು ಅನುಸರಿಸಿ ಜನತೆಗೆ ಸಂಕಷ್ಟಗಳನ್ನು ಹೇರಿದ ಬಹುತೇಕ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಪಕ್ಷಗಳನ್ನು ಜನತೆಯು ತಿರಸ್ಕರಿಸಿದ್ದಾರೆ. ಇಂತಹ ದಿವಾಳಿಕೋರ ಆರ್ಥಿಕ ನೀತಿಗಳ ಧಾಳಿಗಳಿಂದ ಜನತೆಯನ್ನು ಸಂರಕ್ಷಿಸಿ ಪರ್ಯಾಯ ಜನಪರ ನೀತಿಗಳನ್ನು ಅನುಸರಿಸಿದ ಎಡರಂಗ ಸರ್ಕಾರದ ಪಕ್ಷಗಳಿಗೆ ಜನತೆ ಬೆಂಬಲಿಸಿದ್ದಾರೆ.

ಹೀಗಿರುವಾಗ ವಿಧಾನಸಭೆಯನ್ನು ವಿಸರ್ಜಿಸಬೇಕೆಂದು ಆಗ್ರಹಿಸುತ್ತಿರುವ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಆಡಳಿತ ನಡೆಸುತ್ತಿರುವಲ್ಲಿ ವಿಧಾನಸಭೆಯನ್ನು ವಿಸರ್ಜಿಸಲು ಮುಂದಾಗುತ್ತಿರುವರೇ? ಎಂದು ಸಿಪಿಐ(ಎಂ) ಪ್ರಶ್ನಿಸಿದೆ. ಸಾಧಾರಣವಾಗಿ ಲೋಕಸಭೆ ಹಾಗೂ ವಿಧಾನಸಭಾ ಚುನಾವಣೆಗಳಲ್ಲಿ ಪರಿಗಣಿಸುವ ಪ್ರಶ್ನೆಗಳು ಭಿನ್ನವಾಗಿರುತ್ತವೆ. ೧೯೮೫ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಯನ್ನು ಜನತೆ ಆರಿಸಿದರು. ಆದರೆ ವಿಧಾನಸಭೆಗೆ ಜನತಾ ಪಕ್ಷವನ್ನು ಬಹುಮತದಿಂದ ಆಯ್ಕೆಗೊಳಿಸಿದ್ದನ್ನು ಇಲ್ಲಿ ಗಮನಿಸಬಹುದೆಂದು ಸಿಪಿಐ(ಎಂ) ನೆನಪಿಸಿದೆ.

ಚುನಾವಣಾ ಫಲಿತಾಂಶಗಳ ಬಗ್ಗೆ ಅವಲೋಕಿಸಿದ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿಯು, ಪಿ.ವಿ. ನರಸಿಂಹರಾವ್‌ರವರು ಜಾರಿಗೊಳಿಸಿದ ಉದಾರೀಕರಣದ ಆರ್ಥಿಕ ನೀತಿಗಳ ಮುಂದುವರಿಕೆಯು ಜನತೆಯ ಪಾಲಿಗೆ ಅತೀವ ಸಂಕಷ್ಟಗಳ ಹೊರೆಯನ್ನು ಹೇರಿದೆ. ಆರೋಗ್ಯ, ಶಿಕ್ಷಣ, ಪಡಿತರ ವ್ಯವಸ್ಥೆ, ಮುಂತಾದ ಸಾಮಾಜಿಕ ರಂಗಕ್ಕೆ ಕೇಂದ್ರದ ಹಣಕಾಸು ಕಡಿತ, ಬೆಳೆ ಆಮದು ಹಾಗೂ ಅದಕ್ಕೆ ತೆರಿಗೆಗಳನ್ನು ತೆಗೆದು ಹಾಕಿದುದರಿಂದ ಬೆಳೆಗಳ ಬೆಲೆಗಳಲ್ಲಿ ಏರುಪೇರು ಉಂಟಾಗಿದ್ದು ಜೀವನ ವೆಚ್ಚದಲ್ಲಿ ಹೆಚ್ಚಳವಾಗಿದೆ. ಹೀಗಾಗಿ ರೈತರು ಸಂಕಷ್ಟಕ್ಕೆ ಈಡಾಗಿದ್ದಾರೆ. ಕೈಗಾರಿಕೆಗಳ ಮುಚ್ಚುವಿಕೆ, ಆಧುನಿಕ ತಂತ್ರಜ್ಞಾನದಿಂದ ನಿರುದ್ಯೋಗದ ಹೆಚ್ಚಳವಾಗಿದೆ. ಸಂಯುಕ್ತರಂಗ ಸರ್ಕಾರವೂ ಸಹ ಈ ನೀತಿಗಳನ್ನು ಬದಲಾಯಿಸಲು ಯತ್ನಿಸಿಲ್ಲ.

ಹಾಗೆಯೇ ಕರ್ನಾಟಕದಲ್ಲಿಯೂ ಜನತಾದಳದ ಸರ್ಕಾರ ಇಂತಹ ದಿವಾಳಿಖೋರ ಆರ್ಥಿಕ ನೀತಿಗಳಿಂದ ಜನತೆ ಸಂಕಷ್ಟ ಪಡುವಾಗ, ಅವರನ್ನು ರಕ್ಷಿಸಲು ಸೂಕ್ತವಾದ ಕ್ರಮ ವಹಿಸಲಿಲ್ಲ. ಹೀಗಾಗಿ ಜನತೆಯಲ್ಲಿ ವಿರೋಧ ಬೆಳೆದು ಬಂದಿದೆ.

ಜನತಾದಳದ ಸರ್ಕಾರವೂ ಸಹ ಜನತೆಯ ಭಾವನೆಗಳಿಗೆ ಸ್ಪಂದಿಸದೇ ಹೋಗಿದ್ದು ಅದರಲ್ಲೂ ಬರಗಾಲ, ಬೆಳೆನಾಶ ಆದಾಗ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದ ಸಹಾಯ ಪಡೆಯಲು ಮುಂದಾಗದೇ ನಿರ್ಲಕ್ಷಿಸಿದ ಜಿಡ್ಡು ಗಟ್ಟಿದ ಆಡಳಿತ ಯಂತ್ರವನ್ನು ಜನಪರವಾಗಿ ಚುರುಕುಗೊಳಿಸುವಲ್ಲಿ ವೈಫಲ್ಯತೆ, ದುಡಿಯುವ ವರ್ಗದ ಜನರ ಹಿತಗಳ ಕಡೆಗಣಿಸುವಿಕೆ ಹಾಗೂ ರಾಜಕೀಯ ನಿಷ್ಕ್ರಿಯತೆ-ಇವು ಜನತಾದಳದ ಸೋಲಿಗೆ ಕೆಲವು ಕಾರಣಗಳು.

ರಾಮಕೃಷ್ಣ ಹೆಗ್ಗಡೆಯವರನ್ನು ಉಚ್ಚಾಟಿಸಿದ ಬಳಿಕ ಅವರು ಸಂಯುಕ್ತರಂಗದ ಮೇಲೆ ರಾಜ್ಯಾದ್ಯಂತ ಧಾಳಿ ನಡೆಸುತ್ತಿದ್ದಾಗ ಅದಕ್ಕೆ ಪ್ರತಿಯಾಗಿ ಉತ್ತರಿಸಿ ಜನತೆಯ ಬಳಿಗೆ ಹೋಗಲು ಪ್ರಯತ್ನಿಸಲಿಲ್ಲ.

ಹೆಗ್ಗಡೆಯವರ ರಾಜಕೀಯ ಸಂಚುಗಳನ್ನು ಜನರ ಎದುರು ಬಯಲುಗೊಳಿಸಲಿಲ್ಲ. ಸಂಯುಕ್ತರಂಗದ ಕನಿಷ್ಠ ಕಾರ್ಯಕ್ರಮದ ತಿರುಳನ್ನು ಜನತೆಗೆ ಕೊಂಡೊಯ್ಯಲಿಲ್ಲ. ಉತ್ತಮ ಸಾಧನೆಗಳನ್ನು ಜನರಿಗೆ ಸಮರ್ಥವಾಗಿ ವಿವರಿಸಿ, ಕೋಮುವಾದದ ಅಪಾಯಗಳನ್ನು ಬಯಲಿಗೆಳೆಯಲಿಲ್ಲ. ಇಂತಹ ಹೋರಾಟದಲ್ಲಿ ಸಂಯುಕ್ತರಂಗದ ಅಂಗ ಪಕ್ಷಗಳಾದ ಎಡಪಕ್ಷಗಳೊಂದಿಗೆ ಸೇರಿ ರಾಜಕೀಯ ಆಂದೋಲನವನ್ನು ಸಂಘಟಿಸಲು ಯಾವುದೇ ಗಮನ ನೀಡಲಿಲ್ಲ. ಇಂತಹ ಸ್ಥಿತಿಯಲ್ಲಿ ತಮ್ಮದೇ ಶಕ್ತಿಯನ್ನು ಅತಿಯಾಗಿ ಉತ್ಪ್ರೇಕ್ಷಿಸಿಕೊಂಡಂತಹ ರಾಜಕೀಯ ಸಂವೇದನಾ ಶೂನ್ಯತೆ, ದಳದ ಈ ಸ್ಥಿತಿಗೆ ಕಾರಣಗಳಲ್ಲಿ ಕೆಲವು ಅಂಶಗಳು ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ.

ಚುನಾವಣಾ ಫಲಿತಾಂಶದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಮುಂದಿನ ಕಾರ್ಯ ಯೋಜನೆ ರೂಪಿಸಲು ಇದೇ ಮಾರ್ಚ್ ೧೪ ಮತ್ತು ೧೫ ರಂದು ಸಿಪಿಐ(ಎಂ)ನ ರಾಜ್ಯ ಸಮಿತಿ ಸಭೆ ಬೆಂಗಳೂರಿನಲ್ಲಿ ಸೇರಲಿದೆ.



ಭಾರತೀಯ ವಿಮೋಚನಾ ಸಮರ

(೧೭೫೭-೧೯೪೭) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಸುಭಾಶ್ ಚಂದ್ರ ಬೋಸ್ ಕಾಂಗ್ರೆಸ್ ಅಧ್ಯಕ್ಷರಾದಾಗ 1938ರಲ್ಲಿ ಕಾಂಗ್ರೆಸ್ ಒಂದು ರಾಷ್ಟ್ರೀಯ **ಯೋಜನಾ ಆಯೋಗವನ್ನು** ರಚಿಸಿತು. ಜವಹರಲಾಲ್ ಅದರ ಅಧ್ಯಕ್ಷರಾಗಿ ನೇಮಕಗೊಂಡರು.



ಯೋಜನಾ ಆಯೋಗದ ಸಭೆಯಲ್ಲಿ ಸುಭಾಶ್ ಚಂದ್ರ ಬೋಸ್

ಸ್ವಾತಂತ್ರ್ಯದ ನಂತರ ಭಾರತದ ತ್ವರಿತ ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವುದು ಇದರ ರಚನೆಯ ಉದ್ದೇಶವಾಗಿತ್ತು. ಪ್ರಸಿದ್ಧ ವಿಜ್ಞಾನಿಗಳಾದ ಡಾ. ಮೇಘನಾಥ್ ಸಾಹಾ, ಪ್ರೊ.ಕೆ.ಟಿ.ಸಾಹಾ, ಪ್ರಸಿದ್ಧ ಇಂಜಿನಿಯರ್ ವಿಶ್ವೇಶ್ವರಯ್ಯ, ಗಾಂಧೀವಾದಿ ಆರ್ಥಿಕ ತಜ್ಞ ಜೆ.ಸಿ.ಕುಮಾರಪ್ಪ ಈ ಆಯೋಗದಲ್ಲಿದ್ದರು. ಈ ಆಯೋಗ ಕಾಂಗ್ರೆಸ್ ಅಧ್ಯಕ್ಷರಿಗೆ 26 ಸಂಪುಟಗಳ ವರದಿಯನ್ನು ಒಪ್ಪಿಸಿತು.

1939 ರಲ್ಲಿ ತ್ರಿಪುರಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ **ಸುಭಾಶ್ ಚಂದ್ರ ಬೋಸ್** ಮತ್ತೆ ಅಧ್ಯಕ್ಷರಾಗಿ ಆಯ್ಕೆಗೊಂಡರು. ಬಲಪಂಥೀಯ ಕಾಂಗ್ರೆಸ್ಸಿಗರ ಅಭ್ಯರ್ಥಿ ಪಟ್ಟಾಭೀಸೀತಾರಾಮಯ್ಯನವರನ್ನು ಸೋಲಿಸಿ ಗೆದ್ದರು. ಎಡಪಂಥೀಯರ ಒಟ್ಟು ಪ್ರಯತ್ನದಿಂದ ಅವರು ಗೆದ್ದರು. ಆದರೆ ಬಲಪಂಥೀಯ ಕಾಂಗ್ರೆಸ್ಸಿಗರು ಅವರು ರಾಜೀನಾಮೆ ನೀಡುವಂತೆ ಮಾಡಿದರು. ಸುಭಾಶ್ ಹೊಸ ಎಡಪಂಥೀಯ ಗುಂಪು **ಫಾರ್ವರ್ಡ್ ಬ್ಲಾಕ್** ರಚಿಸಿದರು. ಇದರ ನಂತರ ಕಮ್ಯುನಿಸ್ಟರು, ಕಾಂಗ್ರೆಸ್ ನ ಸಮಾಜವಾದಿಗಳು, ರಾಯ್ ವಾದಿಗಳು, ಸ್ವಾಮಿ ಸಹಜಾನಂದ, ಫಾರ್ವಡ್ ಬ್ಲಾಕ್ ಸೇರಿಕೊಂಡು **'ಎಡ ಸಮನ್ವಯ ಸಮಿತಿ'** ರಚಿಸಿದರು. ಇದು ಕಾಂಗ್ರೆಸ್ ಮುಖಂಡತ್ವದ ಪ್ರಜಾಪ್ರಭುತ್ವ-ವಿರೋಧಿ ಕ್ರಮಗಳ ವಿರುದ್ಧ 'ಎಡದಿನ' ಆಚರಿಸಿತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅವರನ್ನು 6 ವರ್ಷಗಳ ಕಾಲ ಅಮಾನತು ಮಾಡಿತು.



ಎಡ ಸಮನ್ವಯ ಸಮಿತಿಯ ಮುಖಂಡರು ಸುಭಾಶ್ ಬೋಸ್, ಸಹಜಾನಂದ ಸರಸ್ವತಿ ಮತ್ತಿತರರು



ಯುದ್ಧ-ವಿರೋಧಿ ಪ್ರದರ್ಶನಗಳಲ್ಲಿ ಕಾರ್ಮಿಕರು

ಸೆಪ್ಟೆಂಬರ್ 1,1939 ರಂದು ಎರಡನೇ ವಿಶ್ವ ಮಹಾಯುದ್ಧ ಭುಗಿಲೆದ್ದಿತು. ಜರ್ಮನಿ, ಪೋಲೆಂಡ್ ಮೇಲೆ ಧಾಳಿ ಮಾಡಿತು. ಎರಡು ದಿನಗಳ ನಂತರ ಬ್ರಿಟಿಶ್ ಮತ್ತು ಫ್ರಾನ್ಸ್ ಜರ್ಮನಿಯ ಮೇಲೆ ಯುದ್ಧ ಘೋಷಿಸಿದವು. ಬ್ರಿಟಿಶ್ ವೈಸರಾಯ್ ಭಾರತೀಯ ಮುಖಂಡರೊಡನೆ ಸಮಾಲೋಚನೆ ನಡೆಸದೆಯೇ ಭಾರತವನ್ನು ಯುದ್ಧಕ್ಕೆ ಸೆಳೆದರು.

ಅಕ್ಟೋಬರ್ 2, 1939 ರಂದು ಬ್ರಿಟಿಶ್ ಸರಕಾರದ ಈ ಸರ್ವಾಧಿಕಾರಿ ಶಾಹಿ ವರ್ತನೆಯನ್ನು ವಿರೋಧಿಸಿ 90000 ಕಾರ್ಮಿಕರು ಒಂದು ದಿನದ ರಾಜಕೀಯ ಮುಷ್ಕರ ನಡೆಸಿದರು.

ಅಕ್ಟೋಬರ್ 1939 ರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಿ ಕಾಂಗ್ರೆಸ್ ಮಂತ್ರಿ ಮಂಡಳಿಗೆ ರಾಜಿನಾಮೆ ನೀಡುವ ಸಲಹೆ ನೀಡಿತು.

ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಏರ್ಪಟ್ಟಿದ್ದ ಐಕ್ಯ ರಾಷ್ಟ್ರೀಯ ರಂಗ ಈಗ ಮೂರು ವಿಭಾಗಗಳಾಗಿ ಒಡೆಯಿತು.


I. ಕಾಂಗ್ರೆಸ್ ನೇತೃತ್ವದ ಆಗಸ್ಟ್ 1942 ರ ಕ್ವಿಟ್ ಇಂಡಿಯಾ ಚಳುವಳಿ
II. ಮೊದಲು ಜರ್ಮನಿಯಿಂದ ಮತ್ತು ನಂತರ ಜಪಾನಿನಿಂದ ಸುಭಾಶ್ ಚಂದ್ರ ಬೋಸ್ ನೇತೃತ್ವದಲ್ಲಿ ಆಝಾದ್ ಹಿಂದ್ ಸೇನೆಯ ಹೋರಾಟ
III. ಕಮ್ಯುನಿಸ್ಟ್ ಪಕ್ಷಸಂಘಟಿಸಿದ ಫ್ಯಾಸಿಸಂ-ವಿರೋಧಿ ಜನತಾ ಯುದ್ಧ ಆಂದೋಲನ.




ನಿರ್ಣಯ ಮಂಡಿಸುತ್ತಿರುವತ್ತಿರುವ ನೆಹರು

ಆಗಸ್ಟ್ 9, 1942 ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಭಾರೀ ಬಹುಮತದಿಂದ **'ಕ್ವಿಟ್ ಇಂಡಿಯಾ'** ನಿರ್ಣಯವನ್ನು ಅಂಗೀಕರಿಸಿತು. ಅದೇ ದಿನ ರಾತ್ರಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಬಂಧಿಸಿ ಆಗಾ ಖಾನ್ ಪ್ಯಾಲೇಸ್ ಹಾಗೂ ಅಹಮದ್ ನಗರ್ ಕೋಟೆಯಲ್ಲಿ ಇಡಲಾಯಿತು.

ಮರುದಿನವೇ ಬೃಹತ್ ಪ್ರಮಾಣದಲ್ಲಿ 'ಕ್ವಿಟ್ ಇಂಡಿಯಾ' ಆಂದೋಲನ ಪ್ರಾರಂಭವಾಯಿತು.



ಹುತಾತ್ಮರಾದ ಮಾತಂಗಿನಿ ಹಾಜ್ರಾ




ಕನಕಲತಾ

ಈ ಬೃಹತ್ ಆಂದೋಲನದಲ್ಲಿ ಹಲವು ಮಂದಿ ಹುತಾತ್ಮರಾದರು. ಬಂಗಾಳದ ಮಿಡ್ನಾಪುರದಲ್ಲಿ 72 ವರ್ಷ ವಯಸ್ಸಿನ **ಮಾತಂಗಿನಿ ಹಾಜ್ರಾ**, ಶಾಲಾ ವಿದ್ಯಾರ್ಥಿನಿ **ಕನಕಲತಾ ಬರುವಾ**, ಅಸ್ಸಾಮಿನ ಗೃಹಿಣಿ **ಭೋಗೇಶ್ವರಿ ಫುಕ್ನಾನಿ**, ಗುಜರಾತಿನ 16 ವರ್ಷಗಳ **ಶ್ರೀಷ್ ಕುಮಾರ್** - ಹೀಗೆ ಹುತಾತ್ಮರ ಒಂದು ದೊಡ್ಡ ಪಟ್ಟಿಗಳನ್ನೇ ತಯಾರಿಸಬಹುದು.



ಶ್ರೀಷ್ ಕುಮಾರ್



ಭೋಗೇಶ್ವರಿಫುಕ್ನಾನಿ

ಕ್ವಿಟ್ ಇಂಡಿಯಾ ಹೋರಾಟದಲ್ಲಿ ಭಾಗವಹಿಸಿದ್ದಕ್ಕೆ ಹಲವರನ್ನು ಗಲ್ಲಿಗೂ ಏರಿಸಲಾಯಿತು - ಅಸ್ಸಾಂನ **ಕುಶಲ್ ಕುನ್ವಾರ್**, ಒರಿಸ್ಸಾದ ಆದಿವಾಸಿ ಮುಖಂಡ **ಲಕ್ಷ್ಮಣ್ ನಾಯಕ್**, ಉತ್ತರ ಪ್ರದೇಶದ **ರಾಜ್‌ನಾರಾಯಣ ಮಿಶ್ರಾ**, ಸಿಂಧ್‌ನ ವಿದ್ಯಾರ್ಥಿಮುಖಂಡ **ಹೇಮು ಕಲಾನಿ** ಇತ್ಯಾದಿ. ಮಹದೇವ್ ದೇಸಾಯಿ, ಸತ್ಯಮೂರ್ತಿ, ಕಸ್ತೂರಿಬಾ ಗಾಂಧಿ ಬಂಧನದಲ್ಲಿ ಮೃತರಾದರು.



ಕುಶಲ್ ಕುನ್ವಾರ್



ಹೇಮುಕಲಾನಿ

1942 ರ ಅಂತ್ಯದ ವೇಳೆಗೆ ಸರಕಾರದ ಅಂದಾಜಿನ ಪ್ರಕಾರ 60229 ಮಂದಿಯನ್ನು ಬಂಧಿಸಲಾಯಿತು; 1800 ಮಂದಿಯನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಡಲಾಯಿತು; ಪೋಲೀಸ್, ಮಿಲಿಟರಿ ಬುಲೆಟ್‌ಗಳಿಗೆ 940 ಮಂದಿ ಬಲಿಯಾದರು; 1630 ಮಂದಿ ಗಂಭೀರವಾಗಿ ಗಾಯಗೊಂಡರು. ಆದರೆ ಇವು ಸರಕಾರದ ಅಂಕಿ-ಅಂಶಗಳು. ವಾಸ್ತವವಾಗಿ ಈ ಸಂಖ್ಯೆ ಇನ್ನೂ ಹೆಚ್ಚಿದೆಯೆಂದು ಹೇಳಲಾಗುತ್ತದೆ. 208 ಪೋಲೀಸ್ ಸ್ಟೇಶನ್‌ಗಳನ್ನು ಧ್ವಂಸ ಮಾಡಿದರು ಎಂದು ಬ್ರಿಟಿಶ್ ಸರ್ಕಾರ ಹೇಳಿಕೊಂಡಿತು. ಸರಕಾರ ಭೀಕರ ದಮನ ನಡೆಸಿತು. ವಿಮಾನಗಳಿಂದ ಗೋಳೀಬಾರು ನಡೆಸಿತು.

(ಮುಂದುವರಿಯುವುದು)



ಭಾರತದ ಗುಲಾಬಿಗೆ ಚುಚ್ಚಿದ ಪೇಟೆಂಟ್ ಮುಳ್ಳು

ಇದು ಉದಾರೀಕರಣದಿಂದಾಗಿ ಬಂದ ಹೊಸ ಆರ್ಥಿಕ ಚಟುವಟಿಕೆ. ಅದೇ ಹೂವು ಬೆಳೆವ ಉದ್ದಿಮೆ. ವಿದೇಶೀ ಮಾರುಕಟ್ಟೆಗೆ ರಫ್ತು ಮಾಡುವುದೇ ಈ ಉದ್ದಿಮೆ. ಭಾರತದಲ್ಲಿ ಉತ್ಪಾದನಾ ವೆಚ್ಚ ಕಡಿಮೆ ಇರುವುದರಿಂದ ಅಪಾರ ಲಾಭ ಮಾಡುವ ಅವಕಾಶ ಎಂದು ಉದಾರೀಕರಣ ವಾದಿಗಳ ವಾದ.

ಆದರೆ ಇಲ್ಲೂ ಹಲವು ಸಮಸ್ಯೆಗಳಿವೆ. ಮುಖ್ಯವಾಗಿ ಈ ಬೆಳೆಗಳನ್ನು ಬೆಳೆವ ತಂತ್ರ ಜ್ಞಾನವನ್ನು ವಿದೇಶಗಳಿಂದಲೇ ಪಡೆಯ ಬೇಕೆಂಬುದು ಒಂದು ದೊಡ್ಡಸಮಸ್ಯೆ. ಹಾಗಾದರೆ ನಮ್ಮಲ್ಲಿ ಬೆಳೆ ಬೆಳೆವ ತಂತ್ರಜ್ಞಾನವಿಲ್ಲವೆ? ಇದೆ ಆದರೆ ನಮ್ಮಲ್ಲಿಂದ ಹೂವು ಕೊಳ್ಳುವವರು ಅಭಿವೃದ್ಧಿ ಹೊಂದಿದ ದೇಶಗಳವರು. ಅವರಿಗೆ ಬೇಕಾದದ್ದನ್ನು ನಾವು ಬೆಳೆಯಬೇಕು. ಇಲ್ಲವಾದರೆ ಅವರು ನಮ್ಮಿಂದ ಈ ಹೂವುಗಳನ್ನು ಕೊಳ್ಳುವುದಿಲ್ಲ.

ಆದ್ದರಿಂದ ಹೂವು ಬೆಳೆವ ತಂತ್ರ ಜ್ಞಾನವನ್ನು ಅವರಿಂದ ನಾವು ಕೊಳ್ಳುವಂತೆ ಅವರು ಮಾಡುತ್ತಾರೆ. ಅವರಿಗೆ ಕಡಿಮೆ ದರದಲ್ಲಿ ನಾವು ಹೂವು ಪೂರೈಸುವುದರ ಜೊತೆಗೆ ಅವರ ತಂತ್ರ ಜ್ಞಾನವನ್ನು ದುಬಾರಿ ದರ ತೆತ್ತು ನಾವು ಕೊಳ್ಳಬೇಕಾಗುತ್ತದೆ.

ಈ ವಿದೇಶಗಳು ಹೆಚ್ಚಾಗಿ ಬಯಸುವುದು ಗುಲಾಬಿ ಹೂವುಗಳನ್ನು. ವಿದೇಶೀಯರಿಗೆ ಬೇಕಾಗುವ ಗುಲಾಬಿ ಬೆಳೆಯಲು ಎರಡೂವರೆ ಎಕರೆಗೆ ಸುಮಾರು ಒಂದೂವರೆಯಿಂದ ಎರಡು ಕೋಟಿ ರೂಪಾಯಿಗಳನ್ನು ಹೂಡಬೇಕಾಗುತ್ತದೆ. ಗ್ರೀನ್ ಹೌಸ್‌ಗಳನ್ನು ನಿರ್ಮಿಸುವ ತಂತ್ರಜ್ಞಾನವನ್ನು ಈ ವಿದೇಶಿಯರಿಂದಲೇ ಕೊಳ್ಳಬೇಕಾಗುತ್ತದೆ. ಅವರೇ ನೀಡುವ ಹೂವಿನ ತಳಿಗಳನ್ನು ಕೊಳ್ಳಬೇಕಾಗುತ್ತದೆ. ಈ ಹೂವಿನ ಗಿಡಗಳನ್ನು ಬೆಳೆಯಲು ಅವರಿಗೆ ಗೌರವ ಧನ ನೀಡಬೇಕು. ಯಾಕೆಂದರೆ ಈ ತಳಿಗಳನ್ನು ಅವರು ಅಭಿವೃದ್ಧಿ ಪಡಿಸಿದ್ದು.

ಈ ಸಾರಿ ವಾಲೆಂಟೈನ್ ದಿನದ ವೇಳೆಗೆ ಯುರೋಪಿನ ಮಾರುಕಟ್ಟೆಯಲ್ಲಿ ಭಾರತದಿಂದ ಹೋದ ಒಂದೆರಡು ಗುಲಾಬಿ ಪೆಟ್ಟಿಗೆಗಳಲ್ಲಿ ಫ್ರೆಂಚ್ ತಳಿಗಳಿದ್ದವು. ಮಿಲ್ಲೆಂಡ್ ಸ್ಟಾರ್ ರೋಸ್ ಎಂಬ ಕಂಪನಿ ಅಭಿವೃದ್ಧಿ ಪಡಿಸಿದ ಈ ತಳಿಗಳನ್ನು ಬೆಳೆಯಲು ಗೌರವಧನ ನೀಡಿರಲಿಲ್ಲ, ದೊಡ್ಡ ಗಲಾಟೆಯಾಯಿತು. ಈಗ ಅಲ್ಲಿನ ಕಂಪನಿಗಳ ಪ್ರತಿನಿಧಿಗಳು ಬಂದಿದ್ದಾರೆ. ತಂತ್ರಜ್ಞಾನವನ್ನು ಭಾರತೀಯರಿಗೆ ಮಾರುವ ಮಾತನ್ನಾಡುತ್ತಿದ್ದಾರೆ. ಅದೇ ಸಮಯಕ್ಕೆ ಯುರೋಪಿನ ದೇಶಗಳು ಭಾರತದ ಹೂವುಗಳಿಗೆ ತಡೆ ಹಾಕುವ ಬೆದರಿಕೆ ಹಾಕುತ್ತಿದ್ದಾರೆ. ತಳಿ ಅಭಿವೃದ್ಧಿ ಪಡಿಸಿದವರ ಹಕ್ಕುಗಳನ್ನು ಕಾಯುವ ಕ್ರಮಗಳನ್ನು ಕೈಗೊಳ್ಳಲು ಇಲ್ಲವಾದರೆ ನಮ್ಮ ಮಾರುಕಟ್ಟೆ ನಿಮಗಲ್ಲ ಎನ್ನುತ್ತಿದ್ದಾರೆ ಅವರು.

ಹೇಗಿದೆ ಈ ಉದಾರೀಕರಣದ ಫಲ?.

ಎರಡನೇ ನರಸಿಂಹನ ಕರಾಮತ್ತುಗಳು

ಯಾರೀತ ಎರಡನೇ ನರಸಿಂಹ ಎಂದಿರಾ? ಹಣಕಾಸು ವಲಯದ ಸುಧಾರಣೆಗಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಮಾಜಿ ಉಪ ಗವರ್ನರ್ ನರಸಿಂಹಂ ಎಂಬುವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಸರ್ಕಾರ ನೇಮಿಸಿತ್ತು. ಈ ಸಮಿತಿಯ ವರದಿಯ ಆಧಾರದ ಮೇಲೆ ಹಣಕಾಸು ವಲಯದ ಅದರಲ್ಲೂ ಮುಖ್ಯವಾಗಿ ಬ್ಯಾಂಕಿಂಗ್ ವಲಯದ ಸುಧಾರಣೆಗಳನ್ನು ಮಾಡಲಾಯಿತು. ಖಾಸಗಿ ಬ್ಯಾಂಕುಗಳ ಮುಕ್ತ ಪ್ರವೇಶ, ವಿದೇಶೀ ಬ್ಯಾಂಕುಗಳಿಗೆ ಪ್ರವೇಶ, ಆದ್ಯತೆಯ ವಲಯಕ್ಕೆ ಹಣಕಾಸು ನೆರವಿನಲ್ಲಿ ಕಡಿತ ಇತ್ಯಾದಿಗಳನ್ನೆಲ್ಲಾ ಸರ್ಕಾರ ಈ ವರದಿಯ ಆಧಾರದ ಮೇಲೇ ಮಾಡಿತ್ತು.

ಈಗ ಈ ವಲಯದ ಇನ್ನು ಹೆಚ್ಚಿನ ಸುಧಾರಣೆಗಾಗಿ ವರದಿ ನೀಡುವಂತೆ ಅದೇ ನರಸಿಂಹಂ ಅವರ ಎರಡನೇ ಸಮಿತಿ ನೇಮಿಸಲಾಗಿದೆ. ಈ ಎರಡನೇ ಸಮಿತಿ ಈಗ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳ ಪುನರ್ರಚನೆ ವಿಲೀನ ಇತ್ಯಾದಿ ಗಳನ್ನು ವಿವಿಧ ಬ್ಯಾಂಕ್, ಹಣಕಾಸು ಸಂಸ್ಥೆ ಗಳ ಮುಖ್ಯಸ್ಥರೊಂದಿಗೆ ಚರ್ಚಿಸುತ್ತಿದೆ.

ಇಲ್ಲಿ ಮುಖ್ಯವಾಗಿ ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳ ವಲಯವನ್ನು ದೊಡ್ಡ ಬಂಡವಾಳಿಗರಿಗೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ನೆರವಾಗುವಂತೆ ಪುನರ್ರಚಿಸುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ.

ಎನ್ರಾನ್‌ನಂತಹ ಕಂಪನಿಯ ಧಾಬೋಲ್ ಯೋಜನೆಗೆ, ಕೊಜೆಂಟ್ರಿಕ್ಸ್ ನ 'ನಂದಿಕೂರು ಯೋಜನೆಗೆ' ಸಾಲ ನೀಡುವ ಗಾತ್ರದ ಬ್ಯಾಂಕು ಹಣಕಾಸು ಸಂಸ್ಥೆಗಳು ನಮ್ಮಲ್ಲಿರಬೇಕು ಎಂಬುದು ಅದರ ಉದ್ದೇಶ. ಅದಕ್ಕಾಗಿ ಈ ಸುಧಾರಣೆಯ ಪ್ರಯತ್ನ. ಈ ಪುನರ್ರಚನೆ ಆದರೆ ಭಾರತದ ರೈತರಿಗೆ ಮತ್ತು ಸಣ್ಣ ಕೈಗಾರಿಕೋದ್ಯಮಿಗಳಿಗೆ ಹಣಕಾಸು ನೆರವು ದೊರೆಯುವುದು ಕಷ್ಟವಾಗುತ್ತಾ ಹೋಗುತ್ತದೆ.

ಈಶಾನ್ಯ ಏಶಿಯಾ ಬಿಕ್ಕಟ್ಟು: ಕೊಯಮತ್ತೂರಿನಲ್ಲಿ ಪ್ರತಿಫಲನ

ಈಶಾನ್ಯ ಏಶಿಯಾದ ಬಿಕ್ಕಟ್ಟು ಭಾರತದ ಆರ್ಥಿಕದ ಮೇಲೆ ಯಾವುದೇ ಪರಿಣಾಮ ಬೀರದು ಎಂದು ಉದಾರೀಕರಣವಾದಿಗಳು ಹೇಳುತ್ತಲೇ ಬಂದಿದ್ದಾರೆ. ಆದರೆ ಭಾರತದ ಆರ್ಥಿಕದ ಒಂದೊಂದು ಕ್ಷೇತ್ರದ ಮೇಲೂ ಅದು ದುಷ್ಪರಿಣಾಮ ಬೀರುತ್ತಿರುವುದು ಈಗ ಬೆಳಕಿಗೆ ಬರುತ್ತಿದೆ.

ಕೊಯಮತ್ತೂರಿನ ಹತ್ತಿನೂಲಿನ ಗಿರಣಿಗಳು ಈಗ ಈ ಬಿಕ್ಕಟ್ಟಿನಿಂದಾಗಿ ಒದ್ದಾಡತೊಡಗಿವೆ. ಅಲ್ಲಿ ಸುಮಾರು 12 ದೊಡ್ಡ ಗಿರಣಿಗಳು ಮತ್ತು 25-30 ಸಣ್ಣ ಗಿರಣಿಗಳು ಆಗಲೇ ಮುಚ್ಚಿವೆಯಂತೆ. ಒಟ್ಟಾರೆ ಹತ್ತಿನೂಲಿನ ಉದ್ದಿಮೆಯಲ್ಲಿ ಶೇ 10-15 ರಷ್ಟು ಕಾರ್ಮಿಕರನ್ನು ಕೈ ಬಿಡುವ ಸಾಧ್ಯತೆ ಉಂಟಾಗಿದೆಯಂತೆ, ಹತ್ತಿನೂಲಿಗೆ ಮಾರುಕಟ್ಟೆಯೇ ಇಲ್ಲದಿರುವುದನ್ನು ಕಾರಣವಾಗಿ ನೀಡಲಾಗುತ್ತಿದೆ. ***ಈಶಾನ್ಯ ಏಶಿಯಾದ ಬಿಕ್ಕಟ್ಟು ನಮಗೇನೂ ಮಾಡದೆ? ನೀವೇ ಹೇಳಿ..***

ಹಾಲೂ ರಫ್ತು

ರಫ್ತು ಸುಧಾರಿಸುವ ಹತಾಶೆ ಕೇಂದ್ರ ಸರ್ಕಾರ ಕೈಗೊಳ್ಳುವ ಕ್ರಮಗಳಲ್ಲಿ ಕಾಣಿಸುತ್ತಿದೆ. ಈಗ ಕೃಷಿ ಉತ್ಪನ್ನಗಳಾದ ಹಾಲು, ಎಣ್ಣೆ ಬೀಜಗಳು ಮತ್ತು ಗೋಧಿ ಉತ್ಪನ್ನಗಳ ಮೇಲಿನ ರಫ್ತು ನಿರ್ಬಂಧಗಳನ್ನು ಅದು ತೆಗೆದು ಹಾಕಿದೆ ಕೃಷಿ ಉತ್ಪನ್ನಗಳ ವ್ಯಾಪಾರದಲ್ಲಿ ಸುಧಾರಣೆ ಉಂಟಾಗುತ್ತದೆ ಎಂದು ಅದು ಹೇಳುತ್ತಿದೆ.

ದೇಶದಾದ್ಯಂತ ಪೌಷ್ಟಿಕಾಂಶದ ಕೊರತೆಯಿಂದಾಗಿ ನರಳುವ ಕೋಟಿ ಕೋಟಿಗಟ್ಟಲೆ ಜನರಿದ್ದಾರೆ. ಹಾಲನ್ನೇ ಕಾಣದ ಹಸುಗೂಸುಗಳು ನಮ್ಮಲ್ಲಿ ಬೇಕಾದಷ್ಟಿವೆ. ಈ ಸಮಸ್ಯೆಯನ್ನು ಪರಿಹರಿಸುವ ಕ್ರಮಗಳೇನಿಲ್ಲ. ಆದರೆ ಹಾಲಿನಂತಹ ಅತ್ಯಂತ ಪೌಷ್ಟಿಕ ಸಂಪೂರ್ಣ ಆಹಾರವನ್ನು ರಫ್ತು ಮಾಡುವ ಕ್ರಮ ಈ ಸರ್ಕಾರದ್ದು.

ಹಾಗೆಯೇ ಎಣ್ಣೆ ಬೀಜಗಳ ಉತ್ಪಾದನೆಯೂ ನಮ್ಮ ಅವಶ್ಯಕತೆಗಳಿಗೆ ತಕ್ಕಂತೆ ಬೆಳೆದಿಲ್ಲ. ಅಂದರೆ ದೇಶದೊಳಗೆ ಎಣ್ಣೆ ಕಾಳುಗಳ ಕೊರತೆ ಇದೆ. ಹೀಗಿರುವಾಗ ಇದನ್ನು ರಫ್ತು ಮಾಡುವ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ.

ಗೋಧಿಯ ವಿವಿಧ ಉತ್ಪನ್ನಗಳು ದೇಶದ ಬಹುತೇಕ ಜನರ ಆಹಾರ ಈ ವಿಷಯದಲ್ಲೂ ನಾವು ಸಫಲತೆ ಹೊಂದಿಲ್ಲ. ಕೊಳ್ಳುವ ಸಾಮರ್ಥ್ಯವೇ ಇಲ್ಲದವರು ವಸ್ತುಗಳಿದ್ದರೂ ಕೊಂಡಾರು ಹೇಗೆ?

ಜನರ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಿ ಕಡಿಮೆ ಬೆಲೆಗೆ ಆಹಾರ ಪದಾರ್ಥಗಳು ದೊರೆಯುವಂತೆ ಮಾಡುವುದು ವಿವೇಚನೆಯುಳ್ಳ ಸರ್ಕಾರ ಮಾಡಬೇಕಾದ ಕೆಲಸ. ಆದರೆ ನಮ್ಮ ಸರ್ಕಾರ ಇದಕ್ಕೆ ತದ್ವಿರುದ್ಧವಾದದ್ದನ್ನೇ ಮಾಡುತ್ತಿದೆ. *ಇದಲ್ಲವೇ ಉದಾರೀಕರಣದ ಅರ್ಥ?*

ಟೆಲ್ಕೊ ತತ್ತರ

ಟೆಲ್ಕೊ ಎಂಬ ಟಾಟಾಗಳ ಮೋಟಾರು ವಾಹನಗಳನ್ನು ಉತ್ಪಾದಿಸುವ ಕಂಪನಿ ಈಗ ತತ್ತರಿಸುತ್ತಿದೆ ಕಾರಣ ಅದರ ವಾಹನಗಳ ಮಾರಾಟ ತೀವ್ರ ಕುಸಿದಿದೆ ವಾಹನಗಳ ಮಾರಾಟ ಕಡಿಮೆಯಾಗಿದೆ ಎನ್ನುವುದಕ್ಕೆ ಅಷ್ಟೇ ಅರ್ಥವಿರುವುದಿಲ್ಲ. ಆರ್ಥಿಕ ತೀವ್ರ ಬಿಕ್ಕಟ್ಟಿನಲ್ಲಿದೆ ಎಂಬುದರ ಸೂಚನೆ ಇದು.

ಆರ್ಥಿಕ ಬೆಳವಣಿಗೆ ಆಗುತ್ತಲೇ ಇದ್ದರೆ ಈ ವಾಹನಗಳ ಮಾರಾಟದ ಬೆಳವಣಿಗೆ ಯೂ ಆಗಬೇಕು. ಅಂತಹ ಬೆಳವಣಿಗೆ ಆಗುತ್ತಿಲ್ಲ ಎಂಬುದನ್ನು ಮಾರಾಟದ ಕುಸಿತ ತೋರಿಸುತ್ತಿದೆ. ಇದಲ್ಲದೆ ಆರ್ಥಿಕ ಹಲವು ತರಹದ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ ಎಂಬುದಕ್ಕೆ ಇನ್ನು ಹಲವು ಕ್ಷೇತ್ರಗಳಲ್ಲಿ ಹಲವು ರೀತಿಯ ಸೂಚನೆಗಳು ಸಿಗುತ್ತಿವೆ.

ಜೈ ಉದಾರೀಕರಣ ಏನ್ನೋಣವೇ?

ಬಂಡವಾಳಿಗರ ಕೊಡುಗೆಯನ್ನು ತಿರಸ್ಕರಿಸಿದ ಸಿ.ಪಿ.ಐ.(ಎಂ)

ದಿಟ್ಟ ಸಿಪಿಐ(ಎಂ) ಎಂಬ ಸಂಪಾದಕೀಯವನ್ನೇ ಎಕನಾಮಿಕ್ ಟೈಮ್ಸ್ ಎಂಬ ಇಂಗ್ಲೀಷ್ ಹಣಕಾಸು ಪತ್ರಿಕೆ ಬರೆಯಿತು. ಈ ಬಗ್ಗೆ ಇಂತಹ ದಿಟ್ಟ ಮತ್ತು ತತ್ವನಿಷ್ಠ ನಿಲುವು ಕೈಗೊಳ್ಳಲಾಗದ ಹಲವು ಪತ್ರಿಕೆಗಳು, ಹಲವು ರಾಜಕೀಯ ಪಕ್ಷಗಳು ಇದರಲ್ಲೂ ಕೊಂಕು ತೆಗೆಯುವ ಪ್ರಯತ್ನ ಮಾಡಿದವು, 'ಕಳ್ಳನ ಮನಸ್ಸು ಹುಳ್ಳಗೆ' ಎನ್ನುತ್ತಾರಲ್ಲ ಹಾಗೆ ಇವರ ಸ್ಥಿತಿ.

ವಿಷಯವೇನೆಂದು ಕೇಳಿದಿರಾ ವಿಷಯವಿಷ್ಟೇ. ಟಾಟಾ ಎಂಬ ದೊಡ್ಡ ಬಂಡವಾಳಿಗರ ಗುಂಪು ಕಂಪನಿ ಟಾಟಾ ಎಲೆಕ್ಟೋರಲ್ ಟ್ರಸ್ಟ್ ಎಂಬ ಟ್ರಸ್ಟನ್ನು ಸ್ಥಾಪಿಸಿದೆ. ಇದರ 'ಮೇಲ್ಪಂಕ್ತಿ'ಯನ್ನು ಮಾದರಿಯಾಗಿಟ್ಟುಕೊಂಡು ಇನ್ನೂ ಹಲವು ಕಂಪನಿಗಳು ಇಂತಹ ಟ್ರಸ್ಟ್ ಸ್ಥಾಪಿಸಿವೆ. ಅವುಗಳ ಉದ್ದೇಶ ಚುನಾವಣೆಗಾಗಿ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವುದು. ಇಲ್ಲಿಯವರೆಗೆ ಈ ಕಂಪನಿಗಳು ಹಣಕಾಸು ನೀಡುತ್ತಿ ರಲಿಲ್ಲವೆ? ನೀಡುತ್ತಿದ್ದರು ಲೆಕ್ಕವಿಡದ ಅಂದರೆ ಕಾಳ ಮಾರ್ಗದಲ್ಲಿ ನೀಡುತ್ತಿದ್ದರು ಈಗ ಎಲ್ಲವೂ ರಾಜಾರೋಷವಾಗಿ ಆಗ ಬೇಕು ಎಂಬ ಉದ್ದೇಶ ಅಷ್ಟೇ. ಈಗಲೂ ರಾಜಾರೋಷ ಮಾರ್ಗವನ್ನಷ್ಟೇ ಬಂಡವಾಳಿಗರು ಬಳಸುತ್ತಾರೆಂದೇನೂ ಅಲ್ಲ ಇರಲಿ.

ಇಲ್ಲಿನ ವಿಷಯವಿಷ್ಟು! ಟಾಟಾ ಎಲೆಕ್ಟೋರಲ್ ಟ್ರಸ್ಟು, ಸಿಪಿಐ(ಎಂ)ಗೆ 19 ಲಕ್ಷ ರೂಪಾಯಿಗಳ ದೇಣಿಗೆಯನ್ನು ಕಳುಹಿಸಿತ್ತು. ಸಿಪಿಐ(ಎಂ) ಈ ಹಣವನ್ನು ಸ್ವೀಕರಿಸದೇ ವಾಪಸು ಕಳುಹಿಸಿತು. ಅದೇ ಸುದ್ದಿ ಮತ್ತು ವಿಷಯ. ಅದಕ್ಕೆ ಬಂದ ಪ್ರತಿಕ್ರಿಯೆ ಅಂತಹದ್ದು ಹಾಗೆ ಎಕನಾಮಿಕ್ ಟೈಮ್ಸ್ ಪತ್ರಿಕೆ ಎಡಪಂಥೀಯ ವಿಚಾರಗಳಿಗೇ ವಿರುದ್ಧವಾದ ಪತ್ರಿಕೆ. ಸದಾ ಬಂಡವಾಳಿಗರ ಹಿತಾಸಕ್ತಿ ಕಾಯುವ ಪತ್ರಿಕೆ ಸಿಪಿಐ(ಎಂ) ನ ಮೇಲೆ ಸದಾ ವಿಷ ಕಾರುವ ಪತ್ರಿಕೆ ಅಂತಹ ಪತ್ರಿಕೆಯೂ ಒಮ್ಮೆ ಸಿಪಿಐ(ಎಂ) ಅನ್ನು ಹೊಗಳಿದೆ.

"ಈ ಬಾರಿ ......" ಕರ್ನಾಟಕದಲ್ಲಿ

ಬೀದರ್(ಮೀ)

ಬಿಜೆಪಿಯ ರಾಮಚಂದ್ರ, ವೀರಪ್ಪ ಆಯ್ಕೆಯಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಶೇ 48.28 ರಷ್ಟು ಮತ ಪಡೆದಿದ್ದ ವೀರಪ್ಪ ಈ ಬಾರಿ ಲೋಕಶಕ್ತಿಯ ಬೆಂಬಲದಿಂದ ಶೇ 5 ರಷ್ಟು ಹೆಚ್ಚು ಮತಗಳಿಸಿರುವುದು ಗಮನಾರ್ಹ. ಜನತಾದಳ ಶೇ 21.79 ಮತ ಪಡೆದು ಕಳೆದ ಬಾರಿಗಿಂತ ಶೇ 7 ರಷ್ಟು ಹೆಚ್ಚು ಮತ ಪಡೆದು 2ನೇ ಸ್ಥಾನದಲ್ಲಿದೆ. ಕಳೆದ ಬಾರಿ 2 ನೇ ಸ್ಥಾನದಲ್ಲಿದ್ದ ಕಾಂಗ್ರೆಸ್ 3ನೇ ಸ್ಥಾನಕ್ಕಿಳಿದಿದೆ.

ಗುಲ್ಬರ್ಗ

ಮತೀಯ ಭಾವನೆ ಕೆರಳಿಸಿ ಜೊತೆಗೆ ಲೋಕಶಕ್ತಿಯ ಬೆಂಬಲದಿಂದ ಬಿಜೆಪಿಯ ಬಸವರಾಜು ಪಾಟೀಲ್ ಸೇಡಂ ಆಯ್ಕೆಗೊಂಡಿದ್ದಾರೆ. ಕಳೆದ ಬಾರಿ ವಿಜಯಿಯಾಗಿದ್ದ ಕಮರುಲ್ ಇಸ್ಲಾಂ ಶೇ 26.24 ರಷ್ಟು ಮತಗಳಿಸಿ 2 ನೇ ಸ್ಥಾನದಲ್ಲಿದ್ದಾರೆ. ಜನತಾದಳ ಒಳಜಗಳ ಬಿಟ್ಟು ಒಮ್ಮತದಿಂದ ಕೆಲಸ ಮಾಡಿದ್ದರೆ ಜನತಾದಳಕ್ಕೆ ಜಯ ಸಾಧ್ಯವಿತ್ತೋನೋ. ಕಳೆದ ಬಾರಿಯಂತೆಯೇ ಕಾಂಗ್ರೆಸ್ 3 ನೇ ಸ್ಥಾನಕ್ಕೆ ತೃಪ್ತಿಪಟ್ಟಿದೆ.

ರಾಯಚೂರು

ರಾಯಚೂರಿನಲ್ಲಿ ಕಾಂಗ್ರೆಸ್‌ನ ವೆಂಕಟೇಶ್ ನಾಯ್ಕ ಆಯ್ಕೆಯಾಗಿ ದ್ದಾರೆ. ಕಳೆದ ಬಾರಿ ವಿಜಯಿಯಾಗಿದ್ದ ಜನತಾದಳದ ರಾಜಾರಂಗಪ್ಪನಾಯ್ಕರಿಗೆ ಕಳೆದ ಬಾರಿಗಿಂತ ಶೇ.5 ರಷ್ಟು ಕಡಿಮೆ ಮತ ಪಡೆದು 2 ನೇ ಸ್ಥಾನದೊರೆತಿದೆ. ಬಿಜೆಪಿ ಮತ್ತು ಲೋಕಶಕ್ತಿಯ ಸಮರ್‌ಸಿದ್ದಿಕಿ ಬಿಜೆಪಿಯ ವಾಜಪೇಯಿ ಗಾಳಿ ಹಾಗೂ ರಾಮಕೃಷ್ಣ ಹೆಗ್ಗಡೆ ಶಕ್ತಿ ಸೇರಿದರೂ 3 ನೇ ಸ್ಥಾನಕ್ಕಿಳಿದಿದ್ದಾರೆ.

ಕೊಪ್ಪಳ

ಹೊಸ ಜಿಲ್ಲೆ ಕೊಪ್ಪಳದಲ್ಲಿ ಕಾಂಗ್ರೆಸ್‌ನ ಹೆಚ್.ಜಿ.ರಾಮುಲು ಆಯ್ಕೆಯಾಗಿದ್ದಾರೆ. ಕಳೆದ ಬಾರಿ ಗೆದ್ದಿರುವ ಜನತಾದಳದ ಬಸವರಾಜರಾಯರೆಡ್ಡಿ 2ನೇ ಸ್ಥಾನದಲ್ಲಿದ್ದಾರೆ. ಬಿಜೆಪಿ-ಲೋಕಶಕ್ತಿಯ ಅಭ್ಯರ್ಥಿ ವಿರುಪಾಕ್ಷ ಸಂಗಣ್ಣನವರ ನೆಲೆ ಭದ್ರ ಪಡಿಸುವ ಕನಸು ಕನಸಾಗೆ ಉಳಿದು 3 ನೇ ಸ್ಥಾನ ಪಡೆದಿದ್ದಾರೆ. ಕೆ.ವಿ.ಪಿ.ಯ ವೈ.ಎನ್.ಸಿದ್ದನಗೌಡರು ಗಮನೀಯ ಮತ ಗಳಿಸಿ 4 ನೇ ಸ್ಥಾನದಲ್ಲಿದ್ದಾರೆ.

ಬಿಜಾಪುರ

ಮೂವರು ಪಾಟೀಲ್‌ಗಳು ಸ್ಪರ್ಧಿಸಿದ್ದ ಬಿಜಾಪುರದಲ್ಲಿ ಕಾಂಗ್ರೆಸ್‌ನ ಪಾಟೀಲ ಮಲ್ಲನಗೌಡ ಬಸವನಗೌಡ ಜಯಶಾಲಿ ಆಗಿದ್ದಾರೆ. ಬಿಜೆಪಿಯ ಪಾಟೀಲ ಬಸವನ ಗೌಡರಿಗೆ ಬಿಜೆಪಿಯ ಅಲೆಯಲ್ಲಿ ತೇಲಲಾಗಲಿಲ್ಲ. ಕಳೆದ ಬಾರಿ ಗೆದ್ದಿರುವ ಜನತಾದಳದ ಬಿ.ಆರ್ ಪಾಟೀಲ್ ಬದಲಿಗೆ ಸ್ಪರ್ಧಿಸಿದ್ದ ಪಾಟೀಲ್ ರವಿಕಾಂತ ಶಂಕರಪ್ಪ 3 ನೇ ಸ್ಥಾನದಲ್ಲಿದ್ದಾರೆ.

ಬಾಗಲಕೋಟೆ

ಜನತಾದಳ ಸರ್ಕಾರದಲ್ಲಿ ಯುವಜನ ಕ್ರೀಡಾ ಸಚಿವರಾಗಿದ್ದು, ಸಕಲ ಸವಲತ್ತು ಪಡೆದು ಕೊನೆಯಲ್ಲಿ ವ್ಯಕ್ತಿನಿಷ್ಠೆ ಪ್ರದರ್ಶಿಸಿ ಲೋಕಶಕ್ತಿಯಿಂದ ಸ್ಪರ್ಧಿಸಿದ್ದ ಅಜಯ ಕುಮಾರ್ ಸರ್‌ನಾಯಕ್ ಬಿಜೆಪಿಯ ಬೆಂಬಲದಿಂದ ಆಯ್ಕೆಯಾಗಿದ್ದಾರೆ. ಗೆಲ್ಲುವ ಅವಕಾಶ ಇದ್ದ ಕಾಂಗ್ರೆಸ್‌ನ ಸಿದ್ದನ್ಯಾಮಗೌಡ ಇವರಿಗೆ ಪ್ರಬಲ ಸ್ಪರ್ಧೆ ನೀಡಿದರು. ಕಳೆದ ಬಾರಿ ಗೆದ್ದಿರುವ ಜನತಾದಳದ ಹೆಚ್. ವೈ.ಮೇಟಿ 3 ನೇ ಸ್ಥಾನಕ್ಕೆ ಇಳಿದಿದ್ದಾರೆ.

ಬೆಳಗಾವಿ

ಕಳೆದ ಲೋಕ ಸಭಾ ಚುನಾವಣೆ ಸಮಯದಲ್ಲಿ ರೈತ ಸಂಘಕ್ಕೆ ಶಾಲು ಹೊದಿಸಿ ಬಿಜೆಪಿ ಚಿಡ್ಡಿ ತೊಟ್ಟು ಸ್ಪರ್ಧಿಸಿದ್ದ ಬಾಬು ಗೌಡ ಪಾಟೀಲ್ ಜಯಗಳಿಸಿದ್ದಾರೆ. ಕಳೆದ ಬಾರಿ ಗೆದ್ದಿರುವ ಜನತಾದಳದ ಕೌಜಲಗಿ 3ನೇ ಸ್ಥಾನ ಗಳಿಸಿದ್ದಾರೆ. ಕಾಂಗ್ರೆಸ್‌ನ ಸಿದ್ನಾಳ್ 2 ನೇ ಸ್ಥಾನದಲ್ಲಿದ್ದಾರೆ.

ಚಿಕ್ಕೋಡಿ(ಮೀ)

ಜನತಾದಳ ಸರ್ಕಾರದಲ್ಲಿ ಸರ್ವ ಅಧಿಕಾರ ಉಂಡು, 2 ವರ್ಷಗಳ ನಂತರ 'ಜ್ಞಾನೋದಯ' ಪಡೆದು ಸ್ವಾಮಿನಿಷ್ಠೆ ಪ್ರದರ್ಶಿಸಿ ಲೋಕಶಕ್ತಿಯಿಂದ ಸ್ಪರ್ಧಿಸಿದ್ದ ರಮೇಶ್ ಜಗಜಿಣಗಿ ಆಯ್ಕೆಗೊಂಡರೆ, ಹಳೆಯ ಕಾಂಗ್ರೆ ಬಿ.ಶಂಕರಾನಂದ ಮತ್ತೊಮ್ಮೆ ಸೋಲುಂಡಿದ್ದಾರೆ. ಕಳೆದ ಬಾರಿ ಜನತಾದಳ ದಿಂದ ಗೆದ್ದಿದ್ದ ರತ್ನಮಾಲಾ ಸವಣೂರು ಬದಲಿಗೆ ಸ್ಪರ್ಧೆಗಿಳಿದಿದ್ದ ಮತ್ತೊಬ್ಬ ಮಹಿಳಾ ಅಭ್ಯರ್ಥಿ ಚೌಗುಲೆ ಶಕುಂತಲ ತುಕಾರಾಂ 3 ನೇ ಸ್ಥಾನಕ್ಕಿಳಿದಿರುವುದು, ಮಹಿಳಾ ಪ್ರಾತಿನಿಧ್ಯತೆಯ ಸನ್ನಿವೇಶದಲ್ಲಿ ಗಮನಾರ್ಹ.

ಧಾರವಾಡ ದಕ್ಷಿಣ

ಲೋಕಶಕ್ತಿಯ ಬಿ.ಎಂ. ಮೇಣಸಿನ ಕಾಯಿ ಜಯಗಳಿಸಿದ್ದಾರೆ. ಕಾಂಗ್ರೆಸ ಪ್ರೊ॥.ಐ.ಜಿ.ಸನದಿ 2 ನೇ ಸ್ಥಾನದಲ್ಲಿದ್ದಾರೆ. ಗೆಲ್ಲಬಹುದಾಗಿದ್ದ ಜನತಾದಳದ ಅಭ್ಯರ್ಥಿ ಸಚಿವ ಶಿವಣ್ಣನವರು 3ನೇ ಸ್ಥಾನ ಪಡೆದಿದ್ದು, ರಾಜ್ಯ ಸರ್ಕಾರ ಜನಪರ ಆಡಳಿತ ನೀಡುವಂತೆ ಜನತೆ ಆದೇಶಿಸಿದಂತಾಗಿದೆ.

ಧಾರವಾಡ ಉತ್ತರ

ಕಳೆದ ಬಾರಿ ಜಯಪಡೆದಿದ್ದ ಬಿಜೆಪಿ ವಿಜಯ ಸಂಕೇಶ್ವರ ಲೋಕಶಕ್ತಿಯ ಬೆಂಬಲದಿಂದಾಗಿ ಮತ್ತೆ ವಿಜಯಿಯಾಗಿದ್ದಾರೆ. ರಾಜ್ಯ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಡಿ.ಕೆ. ನಾಯ್ಕರ್ ಶೇ 30 ರಷ್ಟು ಮತ ಪಡೆದು 2 ನೇ ಸ್ಥಾನದಲ್ಲಿದ್ದಾರೆ. 2ನೇ ಸ್ಥಾನದಲ್ಲಿದ್ದ ಜನತಾದಳದ ಮುನುವಳ್ಳಿ 3 ನೇ ಸ್ಥಾನ ಪಡೆದಿರುವುದು ಜನತಾದಳ ಕೋಮುವಾದಿ ನಿಜಬಣ್ಣ ಬಯಲು ಗೊಳಿಸುವಲ್ಲಿ ವಿಫಲವಾಗಿರುವುದಕ್ಕೆ ಸಾಕ್ಷಿ.

ಕೆನರಾ

ಕ್ರಿಮಿನಲ್ ಕೇಸ್ ಇರುವ ಸ್ಪರ್ಧಿಗಳಲ್ಲಿ ಪ್ರಮುಖವಾಗಿದ್ದ ಬಿಜೆಪಿಯ ಅನಂತ ಕುಮಾರ್‌ಹೆಗಡೆ ಚಕ್ರ ಬಿಟ್ಟು ತೆಂಗಿನ ಮರ ಏರಿದ ದೇಶಪಾಂಡೆ ಬೆಂಬಲದಿಂದಾಗಿ ಮತ್ತೊಮ್ಮೆ ಜಯದ ಹೊಸಿಲು ಮೆಟ್ಟಿದ್ದಾರೆ. ಕಾಂಗ್ರೆಸ್ಸಿನ ಏಕೈಕ ಮಹಿಳಾ ಅಭ್ಯರ್ಥಿ ಮಾರ್ಗರೇಟ್ ಆಳ್ವ 2 ನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು. ಕಳೆದ ಚುನಾವಣೆಯಲ್ಲಿ ಪ್ರಬಲ ಸ್ಪರ್ಧೆ ನೀಡಿದ್ದ ಜನತಾದಳದ ಅಭ್ಯರ್ಥಿ ಪ್ರಮೋದ್ ಹೆಗಡೆ ಲೋಕಶಕ್ತಿ, ದೇಶಪಾಂಡೆ ಕೊನೆಗಳಿಗೆಯಲ್ಲಿ ಹೆಗಡೆಯತ್ತ ಹೋಗಿದ್ದದ್ದರಿಂದಾಗಿ ಜನತಾದಳ 3 ನೇ ಸ್ಥಾನ ಪಡೆಯುವಂತಾಯಿತು.

ಮಂಗಳೂರು

ಬಿಜೆಪಿಯ ಧನಂಜಯ ಕುಮಾರ್ ತಮ್ಮ ಗೆಲುವಿನ ಅಂತರದಲ್ಲಿ ಋಣಾತ್ಮಕದತ್ತ ನಡೆದು ಕಾಂಗ್ರೆಸ್ಸಿನ ಬಿ.ಜನಾರ್ಧನ ಪೂಜಾರಿಯವರಿಂದ ಕೊದಲೆಳೆಯ ಅಂತರದಲ್ಲಿ ಸ್ಥಾನ ಉಳಿಸಿ ಕೊಂಡಿದ್ದಾರೆ. ಕಾಂಗ್ರೆಸ್ ಗೆಲ್ಲಬಹುದಾಗಿದ್ದ ಕ್ಷೇತ್ರಗಳಲ್ಲಿ ಅದು ಒಂದಾಗಿತ್ತು. ಕಳೆದ ಸಾರಿಯಂತೆ ಜನತಾದಳ ನಂತರದ ಸ್ಥಾನದಲ್ಲೆ ಉಳಿದಿದೆ. ಮತ ಗಳಿಕೆ ಇನ್ನಷ್ಟು ಇಳಿದಿದೆ.

ಉಡುಪಿ

ಕಾಂಗ್ರೆಸ ಆಸ್ಕರ್ ಫರ್ನಾಂಡಿಸ್‌ರವರಿಂದ ಬಿಜೆಪಿಯ ಜಯರಾಮ ಶೆಟ್ಟಿ ಜಯ ಗಳಿಸಿದ್ದಾರೆ. ಕಳೆದ ಬಾರಿಗಿಂತ ಹೆಚ್ಚು ಮತ ಪಡೆದರೂ ಸ್ಥಾನ ಉಳಿಸಿಕೊಳ್ಳುವಲ್ಲಿ ಅಸ್ಕರ್ ಆಯಾಸಗೊಂಡರೆ, ಜನತಾದಳ ರಾಜ್ಯದಲ್ಲಿ ಅಧಿಕಾರದಲ್ಲಿದ್ದರೂ 3 ನೇ ಜಾಗಬಿಟ್ಟು ಕದಲಲಿಲ್ಲ.

ಚಿಕ್ಕಮಗಳೂರು

ಜನತಾದಳದ ರಾಜ್ಯ ಅಧ್ಯಕ್ಷರಾದ ಬಿ.ಎಲ್.ಶಂಕರ್‌ರಿಂದ ಬಿಜೆಪಿಯ ಶ್ರೀಕಂಠಪ್ಪ ಸ್ಥಾನ ಕಸಿದಿದ್ದಾರೆ. ಕಾಂಗ್ರೆಸ ಮಾಜಿ ಮುಖ್ಯ ಮಂತ್ರಿ ವೀರಪ್ಪ ಮೊಯ್ಲಿ ಕೊನೆ ಗಳಿಗೆಯಲ್ಲಿ ತಾರಾದೇವಿಗೆ ಕೊಕ್ ನೀಡಿ ಗೆದ್ದೇ ಗೆಲ್ಲುತ್ತೇನೆಂದು ಟಿಕೆಟ್ ಪಡೆದು 2 ನೇ ಸ್ಥಾನ ಪಡೆದರೆ, ಕೋಮುವಾದಿಗಳು ಹಾಗೂ ಭ್ರಷ್ಟಾಚಾರಗಳ ವಿರುದ್ಧದ ಹೋರಾಟದಲ್ಲಿ ಎಡಪಕ್ಷಗಳನ್ನು ಕಡೆಗಣಿಸಿದ್ದರ ಅಹಂನಿಂದಾಗಿ ಬಿ.ಎಲ್.ಶಂಕರ್ 3 ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ. ಇದು ಜನತಾದಳ ನಾಯಕರಿಗೆ ಎಚ್ಚರಿಕೆಯಾಗಿ ಬಿ.ಎಲ್. ಶಂಕರ್ ಕೊರಳಿಗೆ ಮತದಾರ ಎಚ್ಚರಿಕೆಯ ಗಂಟೆ ಕಟ್ಟಿದ್ದಾರೆ. ಸಿಪಿಐನ ರೇಣುಕಾರಾಧ್ಯ ಗಣನೀಯ ಮತಗಳಿಸಿ ನಾಲ್ಕನೇ ಸ್ಥಾನದಲ್ಲಿದ್ದಾರೆ.

ದಾವಣಗೆರೆ

ತಮ್ಮ ಭದ್ರಕೋಟೆಯೆಂದು ಭಾವಿಸಿದ್ದ ಬಿಜೆಪಿಗೆ ದಾವಣಗೆರೆ ಮತದಾರರು ಗೇಟ್ ಪಾಸ್ ನೀಡಿ ಎಚ್ಚರಿಸಿದ್ದಾರೆ. ಕಾಂಗ್ರೆಸ ಶಾಮನೂರು ಶಿವಶಂಕರಪ್ಪ ಇಲ್ಲಿ ಶೇ 41.53 ಮತ ಪಡೆದು ಆಯ್ಕೆಯಾಗಿದ್ದಾರೆ. ದಳದ ಎಚ್.ಎಸ್.ಪಟೇಲ್ 3ನೇ ಸ್ಥಾನಕ್ಕೆ ಇಳಿದಿದ್ದಾರೆ. ಇದು ಜೆ.ಹೆಚ್ ಪಟೇಲ್ ಕಾರ್ಮಿಕ ವಿರೋಧಿ ನಿಲುವಿಗೆ ಕೊಟ್ಟ ಕೊಡುಗೆಯಾಗಿದೆ.

ಚಿತ್ರದುರ್ಗ

ಚಕ್ರದ ಸಹಾಯದಿಂದ ಕಳೆದ ಬಾರಿ ದೆಹಲಿ ಸೇರಿದ್ದ ಪಿ.ಕೋದಂಡ ರಾಮಯ್ಯ ಆರ್.ಎಸ್.ಎಸ್ ಲಾಠಿ ಸಹಾಯದಿಂದ ಮತ್ತೆ ದೆಹಲಿಯತ್ತ ಹೋಗಲು ಲೋಕಶಕ್ತಿಯಿಂದ ಸ್ಪರ್ಧಿಸಿ ಕಾಂಗ್ರೆಸ ಮೂಡಲ ಗಿರಿಯಪ್ಪನವರಿಂದ ಪರಾಭವಗೊಂಡಿದ್ದಾರೆ. ಜನತಾದಳ ಇಲ್ಲಿಯೂ ಸುಧಾರಣೆಗೊಳ್ಳದೆ 3ನೇ ಸ್ಥಾನದಲ್ಲಿದೆ.

ಶಿವಮೊಗ್ಗ

ಬಂಗಾರಪ್ಪನವರ ಅಹಂಗೆ ಮತದಾರ ಪೆಟ್ಟು ನೀಡಿದ್ದರಿಂದಾಗಿ ಹಾಗೂ ಕಾಂಗ್ರೆ, ಜನತಾದಳ ಮತದಾರರ ಮನ ಮುಟ್ಟುವಲ್ಲಿ ನಿಷ್ಕ್ರಿಯವಾದ್ದರಿಂದ ಬಿಜೆಪಿಯ ಆಯನೂರು ಮಂಜುನಾಥ ಜಯಗಳಿಸಿ, ಕಾಂಗ್ರೆಸ ಡಿ.ಬಿ ಚಂದ್ರೇಗೌಡ ಸ್ಪರ್ಧೆ ನೀಡಿದರೆ, ಹೊಂದಾಣಿಕೆಗಾಗಿ ಬಿಜೆಪಿ ಮತ್ತು ದಳದ ಜೊತೆ ಮಾತುಕಥೆ ನಡೆಸಿ ವಿಫಲಗೊಂಡು ತನ್ನ ಹೊಸ ಕೆ.ವಿ.ಪಿ. ಪಕ್ಷದಿಂದ ಸ್ಪರ್ಧಿಸಿ ಬಂಗಾರಪ್ಪ 1.5 ಲಕ್ಷಗಳ ಅಂತರದಿಂದ ಪರಾಭಗೊಂಡಿರುವುದು ವೈಯಕ್ತಿಕ ಪ್ರತಿಷ್ಠೆ ಬಿಟ್ಟು ಹಿಂದುಳಿದ ವರ್ಗಗಳ ಬಗ್ಗೆ ನೈಜವಾದ ಕಾಳಜಿ ಹೊಂದುವಂತೆ ಮಾಡಿದೆ. ಬಂಗಾರಪ್ಪ ಕಳೆದಬಾರಿ ಆಯ್ಕೆ ಗೊಂಡಿದ್ದರು.

ಹಾಸನ

ಕರ್ನಾಟಕದ ಕುರುಕ್ಷೇತ್ರವೆಂದೇ ಕರೆಯಲ್ಪಡುವ ಹಾಸನದಲ್ಲಿ ಸಂಯುಕ್ತ ರಂಗದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಉತ್ತಮ ಆಡಳಿತ ನೀಡುತ್ತಿದ್ದ ಸಂಯುಕ್ತ ರಂಗಕ್ಕೆ ಪದೇ ಪದೇ ಬೆಂಬಲ ವಾಪಸು ಪಡೆದ ಕಾಂಗ್ರಸ್ಸಿನ ಅಭ್ಯರ್ಥಿ ಹೆಚ್.ಸಿ. ಕಂಠಯ್ಯನವರನ್ನು ಪರಾಭವಗೊಳಿಸಿದ್ದಾರೆ. 'ಗೆಲುವು ನಮ್ಮದೆ' ದೇವೇಗೌಡರನ್ನು ಸೋಲಿಸಿ ತೀರುತ್ತೇವೆಂದು ಬೀಗುತ್ತಿದ್ದ ಬಿಜೆಪಿ ಕಳೆದ ಬಾರಿಗಿಂತ ಶೇಕಡವಾರು ಕಡಿಮೆ ಮತ ಪಡೆದು 3 ನೇ ಸ್ಥಾನದಲ್ಲೇ ಇದೆ. ಕಳೆದ ಬಾರಿ ಜನತಾದಳದ ರುದ್ರೇಶಗೌಡ ಆಯ್ಕೆಗೊಂಡಿದ್ದರು.

ಮಂಡ್ಯ

ಪ್ರಸಿದ್ಧ ಚಲನಚಿತ್ರ ನಟ ಅಂಬರೀಶ್ ಜನತಾದಳದ ಅಭ್ಯರ್ಥಿಯಾಗಿ ಗುರುವಿಗೆ ತಿರುಮಂತ್ರವೆಂಬಂತೆ ತನ್ನ ರಾಜಕೀಯ ಗುರು ಕಾಂಗ್ರೆಸ ಜಿ.ಮಾದೇಗೌಡರನ್ನು 1,80000 ಮತಗಳ ಅಂತರದಿಂದ ಸೋಲಿಸಿ, ರಾಜ್ಯದಲ್ಲಿ ಜನತಾದಳಕ್ಕೆ ಜನ ಬೆಂಬಲವಿದೆ ಎಂಬುದನ್ನು ಸಾಬೀತು ಪಡಿಸುವುದರ ಜೊತೆಗೆ ಸಂಯುಕ್ತ ರಂಗದ ಬಲ ಹೆಚ್ಚಿಸಿದ್ದಾರೆ. ಚುನಾವಣೆ ಸಮೀಪಿಸಿದಂತೆ ಬಿಜೆಪಿಯ ಅಲೆಯಲ್ಲಿ ದೆಹಲಿ ತಲುಪಲು ರೈತ ಸಂಘದ ಹಸಿರು ಶಾಲು ತೆಗೆದು ಕೇಸರಿ ಹೊದ್ದ ಎಚ್. ಶ್ರೀನಿವಾಸ್ ಶೇ 12 ರಷ್ಟು ಮತ ಪಡೆದು ಮೂರನೇ ಸ್ಥಾನದ ಜೊತೆ ಮಂಡ್ಯದಲ್ಲೇ ಉಳಿದಿದ್ದಾರೆ. ಕಳೆದ ಬಾರಿ ಜನತಾದಳದ ಕೃಷ್ಣ ವಿಜಯಿಯಾಗಿದ್ದರು.

ತುಮಕೂರು

ಬಿಜೆಪಿಯ ಎಸ್.ಮಲ್ಲಿಕಾರ್ಜುನಯ್ಯ ಜಯಗಳಿಸಿದ್ದಾರೆ. ಕಳೆದ ಬಾರಿ 3 ನೇ ಸ್ಥಾನದಲ್ಲಿದ್ದ ಕಾಂಗ್ರೆ ಚಿತರಿಸಿಕೊಂಡು 2 ನೇ ಸ್ಥಾನಕ್ಕೇರಿದೆ. ಜನತಾದಳದ ಸಂಸದ ಭಾಸ್ಕರಪ್ಪ 3ನೇ ಸ್ಥಾನಕ್ಕೆ ನೂಕಲ್ಪಟ್ಟಿದ್ದು ಜನತಾದಳದ ತನ್ನ ವೈಫಲ್ಯ ಸರಿಪಡಿಸಿಕೊಂಡು ಜನಪರ ಆಡಳಿತ ನೀಡುವುದು ಒಳ್ಳೆಯದು.

ಮೈಸೂರು

ಜನತಾದಳದ ಭದ್ರನೆಲೆಯೆಂದು ಕರೆಯಲಾಗುತ್ತಿದ್ದ ಮೈಸೂರಿನಲ್ಲಿ ಬಿಜೆಪಿಯ ವಿಜಯ ಶಂಕರ್ ಜಯಗಳಿಸಿದ್ದಾರೆ. ಕಾಂಗ್ರೆಸ ನವ ಅಭ್ಯರ್ಥಿ ಚಿಕ್ಕಮಾದು ಬಿಜೆಪಿಗೆ ಸ್ಪರ್ಧೆನೀಡಿದರೆ, ದಳದ ಜಿ.ವಿ. ದೇವೆಗೌಡ 3ನೇ ಸ್ಥಾನಕ್ಕಿಳಿದಿರುವುದು ಶೋಚನಿಯವೇ ಸರಿ. ರಾಜ್ಯ ಸರ್ಕಾರದ ಬೆಲೆ ಏರಿಕೆ, ಪಡಿತರ ಆಹಾರ ಧಾನ್ಯಗಳ ಕಡಿತದ ಪರಿಣಾಮವೆನ್ನಬಹುದು. ಕಳೆದ ಬಾರಿ ಕಾಂಗ್ರೆಸ ಶ್ರೀಕಂಠದತ್ತ ಒಡೆಯರು ಆಯ್ಕೆಯಾಗಿದ್ದರು.

ಚಾಮರಾಜ ನಗರ(ಮೀ)

ಜನತಾದಳದ ಎ.ಸಿದ್ದರಾಜು ಕಾಂಗ್ರೆಸ ಶ್ರೀನಿವಾಸ್‌ಪ್ರಸಾದರನ್ನು ಮತ್ತೊಮ್ಮೆ ಪರಾಭವ ಗೊಳಿಸಿ ಸತತ 2ನೇ ಬಾರಿಗೆ ಆಯ್ಕೆಯಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಶೇ 30 ರಷ್ಟು ಮತ ಪಡೆದಿದ್ದ ಸಿದ್ದರಾಜು ಈ ಬಾರಿ 46 ರಷ್ಟು ಮತಗಳಿಸಿ ಬಾರಿ ಜಯಗಳಿಸಿ ಜನತಾದಳದ ಸ್ಥಾನ ಉಳಿಸುವುದರ ಜೊತೆಗೆ ಕೋಮುವಾದಿಗಳನ್ನು ಹಿಮ್ಮೆಟ್ಟಿಸಿದ್ದಾರೆ. ಜನತಾದಳದ ಒಗ್ಗಟ್ಟಿಗೆ ಇದೊಂದು ಉದಾಹರಣೆಯಾಗಿದೆ.

ಕನಕಪುರ

ರಾಜ್ಯದ ಅತಿ ದೊಡ್ಡ ಕ್ಷೇತ್ರವಾಗಿರುವ ಕನಕಪುರದಲ್ಲಿ ಸಂಸದ ಹೆಚ್.ಡಿ.ಕುಮಾರ್ ಸ್ವಾಮಿಯಿಂದ ಕಸಿದ ಬಿಜೆಪಿಗೆ ಕಾಂಗ್ರೆಸ ಪ್ರೇಮಚಂದಸಾಗರ್ ಪ್ರಬಲ ಸ್ಪರ್ಧೆ ನೀಡಿ ಕಡಿಮೆ ಅಂತರದಲ್ಲಿ ಸೋಲುಂಡಿದ್ದಾರೆ. ಜನತಾದಳ ಮೂರನೇ ಸ್ಥಾನಕ್ಕಿಳಿದಿದೆ. ಇದು

ಪುಟ 8 ನೋಡಿ

ಕ್ಷೇತ್ರ	ಮತದಾನ (ಶೇ.)	ಗೆದ್ದ ಅಭ್ಯರ್ಥಿಗಳು	ಕಾಂಗ್ರೆಸ್ (ಶೇ.)	ಬಿಜೆಪಿ (ಶೇ.)	ಜನತಾ ದಳ(ಶೇ.)	ಇತರೆ (ಶೇ.)
		ಜನತಾದಳ				
1. ಹಾಸನ	73	ದೇವೇಗೌಡ.ಹೆಚ್.ಡಿ	36	24	39	0.70(ಬಿಎಸ್‌ಪಿ)
2. ಮಂಡ್ಯ	75	ಅಂಬರೀಷ್	32	13	55	-
3. ಚಾಮರಾಜನಗರ(ಮಿ)	69	ಸಿದ್ದರಾಜು	37	10(ಲೋ.ಶ)	46	2.57(ಬಿಎಸ್‌ಪಿ)
		ಕಾಂಗ್ರೆ				
4. ರಾಯಚೂರು	60	ವೆಂಕಟೇಶ್ ನಾಯಕ್	45	20(ಲೋ.ಶ)	32	1.54(ಕೆ.ವಿ.ಪಿ)
5. ಕೊಪ್ಪಳ	60	ಹೆಚ್.ಜಿ.ರಾಮುಲು	41	25(ಲೋ.ಶ)	29	3.01(ಕೆವಿಪಿ)
6. ಬಿಜಾಪುರ	58	ಪಾಟೀಲ ಮಲ್ಲನಗೌಡ ಬಸವನಗೌಡ	41	33	24	0.88(ರೈ.ಸಂ)
7. ಬಳ್ಳಾರಿ	63	ಕೆ.ಸಿ.ಕೊಂಡಯ್ಯ	39	30(ಲೋ.ಶ)	25	1.42(ಕೆ.ವಿ.ಪಿ.)
8. ದಾವಣಗೆರೆ	70	ಶಾಮನೂರು ಶಿವಶಂಕರಪ್ಪ	42	41	12	-
9. ಬೆಂಗಳೂರು ಉತ್ತರ	58	ಸಿ.ಕೆ. ಜಾಫರ್ ಶರೀಫ್	42	34	22	0.51(ಜೆ.ಪಿ)
10. ಕೋಲಾರ(ಮೀಸಲು)	72	ಹೆಚ್. ಮುನಿಯಪ್ಪ	40	29	29	1.04(ಸಿ.ಪಿ.ಎಂ)
11. ಚಿಕ್ಕಬಳ್ಳಾಪುರು	72	ಆರ್.ಎಲ್. ಜಾಲಪ್ಪ	44	25(ಲೋ.ಶ)	29	0.72(ಬಿ.ಎಸ್.ಪಿ.)
12. ಚಿತ್ರದುರ್ಗ	58	ಸಿ.ಪಿ. ಮೂಡಲಗಿರಿಯಪ್ಪ	42	35	20	1.42(ಕೆ.ವಿ.ಪಿ.)
		ಲೋಕಶಕ್ತಿ				
13. ಬಾಗಲಕೋಟೆ	67	ಅಜಯಕುಮಾರ್ ಸರನಾಯಕ	38	50	10	0.45(ಕೆ.ವಿ.ಪಿ.)
14. ಚಿಕ್ಕೋಡಿ(ಮೀ)	65	ರಮೇಶ್ ಜಿಗಜಿಣಗಿ	34	53	11	0.76(ಪಕ್ಷೇತರ)
15. ಧಾರವಾಡ ದಕ್ಷಿಣ	68	ಬಿ.ಎಂ. ಮೆಣಸಿನಕಾಯಿ	34	46	18	1.11(ಕೆ.ವಿ.ಪಿ.)
		ಬಿ.ಜೆ.ಪಿ.				
16. ಬೀದರ್	51	ರಾಮಚಂದ್ರ ವೀರಪ್ಪ	17	53	22	5.13(ಬಿ.ಎಸ್.ಪಿ.)
17. ಕಲ್ಬುರ್ಗಿ	59	ಬಸವರಾಜ ಪಾಟೀಲ್ ಸೇಡಂ	20	45	27	7.39(ಬಿ.ಎಸ್.ಪಿ.)
18. ಬೆಳಗಾವಿ	61	ಬಾಬುಗೌಡ ಪಾಟೀಲ	32	45	15	6.01(ಪಕ್ಷೇತರ)
19. ಧಾರವಾಡ ಉತ್ತರ	64	ವಿಜಯಸಂಕೇಶ್ವರ	31	50	17	0.62(ಪಕ್ಷೇತರ)
20. ಕೆನರಾ	67	ಅನಂತಕುಮಾರ್ ಹೆಗಡೆ	39	51	5	3.69(ಕೆ.ವಿ.ಪಿ.)
21. ಮಂಗಳೂರು	74	ಧನಂಜಯ ಕುಮಾರ್	47	48	5	0.41(ಕೆ.ವಿ.ಪಿ.)
22. ಉಡುಪಿ	67	ಜಯರಾಮ ಶೆಟ್ಟಿ	42	51	4	1.03(ಕೆ.ವಿ.ಪಿ)
23. ಚಿಕ್ಕಮಗಳೂರು	69	ಡಿ.ಸಿ. ಶ್ರೀಕಂಠಪ್ಪ	37	44	17	1.66(ಸಿ.ಪಿ.ಐ)
24. ಶಿವಮೊಗ್ಗ	71	ಆಯನೂರ ಮಂಜುನಾಥ	25	45	5	25(ಕೆ.ವಿ.ಪಿ.)
25. ತುಮಕೂರು	67	ಎಸ್. ಮಲ್ಲಿಕಾರ್ಜುನಯ್ಯ	36	46	18	0.45(ಕೆ.ವಿ.ಪಿ.)
26. ಮೈಸೂರು	69	ವಿಜಯಶಂಕರ್	30	42	26	0.57(ಜೆ.ಪಿ.)
27. ಬೆಂಗಳೂರು ದಕ್ಷಿಣ	58	ಅನಂತ ಕುಮಾರ್	28	54	14	
28. ಕನಕಪುರ	64	ಶ್ರೀನಿವಾಸ್	38	39	22	1.2(ಬಿ.ಎಸ್.ಪಿ.)

ಬಿಜೆಪಿ ಮುಖಂಡರ ಹುಯಿಲು ತಮ್ಮ ದುಷ್ಟತನವನ್ನು ಮುಚ್ಚಿಕೊಳ್ಳಲಿಕ್ಕಾಗಿ

ಉತ್ತರ ಪ್ರದೇಶದ ಇತ್ತೀಚಿನ ಘಟನೆಯಲ್ಲಿ ರಾಜ್ಯಪಾಲರನ್ನು ಕುರಿತ ರಾಷ್ಟ್ರಪತಿಗಳ ಪತ್ರದ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರ ಹೇಳಿಕೆಯನ್ನು ವಿಕೃತಗೊಳಿಸಿ ಬಿಜೆಪಿಯ 'ಪ್ರಧಾನಿ ಅಭ್ಯರ್ಥಿ' ವಾಜಪೇಯಿಯವರು ಹಾಗೂ ಸಮತಾ ಪಕ್ಷದ ವಕ್ತಾರರು ಮತ್ತಿತರರು ಸುರ್ಜಿತ್ ಸಾರ್ವಜನಿಕ ಕ್ಷಮೆ ಕೋರಬೇಕೆಂದು ಬೊಬ್ಬೆ ಹಾಕಿದ್ದರು. ಬಿಜೆಪಿ ಮುಖಂಡರು ಮತ್ತು ಅವರ ಗೆಳೆಯರ ಈ ತಂತ್ರ ಹಾಗೂ ಬೊಬ್ಬೆ ಅಸಹಜವೇನಲ್ಲ. ಈ ಬಗ್ಗೆ ಸುರ್ಜಿತ್‌ರವರು ಫೆಬ್ರವರಿ 27 ರಂದು ನೀಡಿದ ಪತ್ರಿಕಾ ಹೇಳಿಕೆ ಈ ಮುಖಂಡರ ಗೋಸುಂಬೆತನವನ್ನು ಬಯಲಿಗೆಳೆದಿದೆ. ಈ ಹೇಳಿಕೆಯ ಪೂರ್ಣಪಾಠವನ್ನು ಇಲ್ಲಿ ಕೊಡಲಾಗಿದೆ.

ಶ್ರೀ ಅಟಲ್ ಬಿಹಾರಿ ವಾಜಪೇಯಿ ಮತ್ತು ಬಿಜೆಪಿ ವಕ್ತಾರರು ಉತ್ತರ ಪ್ರದೇಶದ ರಾಜ್ಯಪಾಲರ ಪ್ರಶ್ನೆಯ ಮೇಲೆ ರಾಷ್ಟ್ರಪತಿಗಳು ಪ್ರಧಾನಮಂತ್ರಿಗಳಿಗೆ ಬರೆದ ಪತ್ರ ಕುರಿತಂತೆ ನನ್ನ ಹೇಳಿಕೆಯನ್ನು ವಿಕೃತವಾಗಿ ಬಳಸಲು ಪ್ರಯತ್ನಿಸಿದ್ದಾರೆ. ನಾವು ಮುಂದಿಟ್ಟ ಸಂಗತಿಗಳನ್ನು ಸಂಪೂರ್ಣವಾಗಿ ಉಪೇಕ್ಷಿಸುತ್ತಾ ದೇಶದ ಅತ್ಯುನ್ನತ ಸ್ಥಾನಕ್ಕೆ ಅಗೌರವ ತೋರಿದ್ದಾರೆಎಂದು ಅವರು ಸುಳ್ಳು ಆಪಾದನೆ ಮಾಡಿದ್ದಾರೆ.

ಬಿಜೆಪಿಯಿಂದ ಇಂತಹ ವಿಕೃತಿಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ. ಏಕೆಂದರೆ ಬಿಜೆಪಿಗೆ ಈಗಿರುವ ಸಂಸದೀಯ ವ್ಯವಸ್ಥೆಯಿಂದ ತೃಪ್ತಿಯಿಲ್ಲ. ಅದು ಹಲವು ಬಾರಿ ಅಧ್ಯಕ್ಷೀಯ ಮಾದರಿಯ ಸರ್ಕಾರ ಬೇಕೆಂದು ಪ್ರತಿಪಾದಿಸಿದೆ.

ಫೆಬ್ರವರಿ 25, 1998 ರಂದು ನಾನು ನೀಡಿದ ಹೇಳಿಕೆಯ ಉದ್ದೇಶ ರಾಷ್ಟ್ರಪತಿಗಳು ಉತ್ತರ ಪ್ರದೇಶದ ರಾಜ್ಯಪಾಲರ ಪಾತ್ರಕ್ಕೆ ಸಂಬಂಧಿಸಿದ ಸಂಗತಿಯಲ್ಲಿ ಕೇಂದ್ರ ಮಂತ್ರಿ ಮಂಡಳದ ಸಲಹೆಯಂತೆ ನಡೆಯಲು ಬದ್ಧರಾಗಿದ್ದಾರೆ ಎಂಬ ಸಂವಿಧಾನದ ನಿಲುವನ್ನು ಒತ್ತಿಹೇಳುವುದು. ರಾಷ್ಟ್ರಪತಿಗಳು ಪ್ರಧಾನಮಂತ್ರಿಗಳಿಗೆ ಕಳಿಸಿದ ಸಂದೇಶ ಸೋರಿ ಹೋಗುವುದರ ಬಗ್ಗೆ ನಾನು ಆತಂಕವನ್ನು ವ್ಯಕ್ತಪಡಿಸಿದ್ದೆ. ಇದು ಯಾವ ರೀತಿಯಲ್ಲೂ ರಾಷ್ಟ್ರಪತಿ ಸ್ಥಾನಕ್ಕೆ ತೋರಿದ ಅಗೌರವವಲ್ಲ.

ಶ್ರೀ ಕೆ. ಆರ್.ನಾರಾಯಣನ್‌ರವರ ವ್ಯಕ್ತಿತ್ವದಿಂದಾಗಿಯೇ ಎಡಪಕ್ಷಗಳು ಮುತುವರ್ಜಿ ವಹಿಸಿ ಅವರ ಹೆಸರನ್ನು ಈ ಹಿಂದೆ ಉಪರಾಷ್ಟ್ರಪತಿಗಳ ಸ್ಥಾನಕ್ಕೆ, ನಂತರ ರಾಷ್ಟ್ರಪತಿಗಳ ಸ್ಥಾನಕ್ಕೆ ಸೂಚಿಸಲಾಗಿತ್ತು ಎಂಬುದು ಎಲ್ಲರಿಗೂ ಗೊತ್ತು.

ನಾನು ನನ್ನ ಹೇಳಿಕೆಯಲ್ಲಿ ನಾಲ್ಕು ಅಂಶಗಳನ್ನು ಹೇಳಿದ್ದೆ. ಬಿಜೆಪಿ ಇವುಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದೆ.

1. ಪತ್ರದ ಸೋರಿಕೆಗೆ ಕಾರಣ ಯಾರೇ ಇರಲಿ, ಇಂತಹ ರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳ ನಡುವಿನ ಪತ್ರ ವ್ಯವಹಾರ ಸದಾ ಗೋಪ್ಯವಾಗಿರಬೇಕು.

2. ಉತ್ತರ ಪ್ರದೇಶದ ಇತ್ತೀಚಿನ ಬೆಳವಣಿಗೆಗಳು ಸುಪ್ರೀಂ ಕೋರ್ಟ್ ನೀಡಿರುವ ಬೊಮ್ಮಾಯಿ ತೀರ್ಪಿನಲ್ಲಿರುವ ಕರ್ನಾಟಕದ ಘಟನೆಯಂತದ್ದಲ್ಲ. ಅಲ್ಲಿ ಒಂದು ಜನತಾದಳ ಸರಕಾರ ಇತ್ತು. ವಿಧಾನ ಸಭೆಯಲ್ಲಿ ಅದಕ್ಕೆ ಬಹುಮತವಿತ್ತು. ಜನತಾದಳ ಶಾಸಕಾಂಗ ಪಕ್ಷದಿಂದ ಕೆಲವು ಎಂ. ಎಲ್.ಎ.ಗಳು ಪಕ್ಷಾಂತರ ಮಾಡಲು ಪ್ರಯತ್ನಿಸಿ, ರಾಜ್ಯಪಾಲರ ಬಳಿಗೆ ಹೋದರು. ರಾಜ್ಯಪಾಲರು ಪಕ್ಷಾಂತರಿಗಳ ಮಾತುಗಳ ಪ್ರಕಾರ ವರ್ತಿಸದೆ ಮಂತ್ರಿ ಮಂಡಳಕ್ಕೆ ಸದನದಲ್ಲಿ ತನ್ನ ಬಹುಮತ ಪರೀಕ್ಷಿಸಲು ಅವಕಾಶ ನೀಡುವುದು ಅವರ ಕರ್ತವ್ಯ.

ಉತ್ತರ ಪ್ರದೇಶದಲ್ಲಿ ಕಲ್ಯಾಣ್‌ಸಿಂಗ್ ಸರ್ಕಾರ ಎರಡು ಪಕ್ಷಗಳು, ಬಿಜೆಪಿ ಹಾಗೂ ಬಿಎಸ್‌ಪಿಯ ಒಪ್ಪಂದದಿಂದ ರಚನೆಗೊಂಡಿತ್ತು. ಸದನದಲ್ಲಿ ಅದಕ್ಕೆ ಒಂದು ಬಹುಮತ ಇದ್ದುದು ಈ ಆಧಾರದ ಮೇಲೆ. ಒಂದು ಪಕ್ಷ ಬಿಎಸ್‌ಪಿ, ಅಕ್ಟೋಬರ್ 1997 ರಲ್ಲಿ ಬೆಂಬಲ ಹಿಂತೆಗೆದುಕೊಂಡಾಗ, ಬಿಜೆಪಿ ಸ್ಪಷ್ಟವಾಗಿ ಅಲ್ಪಮತದಲ್ಲಿತ್ತು. ಆಗಲೂ ಕಲ್ಯಾಣ್‌ಸಿಂಗ್ ಮುಖ್ಯಮಂತ್ರಿಯಾಗಿ ಮುಂದುವರೆಯಲು ಬಿಡಬಾರದು ಎಂದು ಸಿಪಿಐ(ಎಂ) ಒತ್ತಾಯಿಸಿತ್ತು. ಪಕ್ಷಾಂತರಗಳನ್ನು ನಡೆಸಿ ಒಂದು ಸರಕಾರ ರಚಿಸಲು ಅವರಿಗೆ ಅವಕಾಶ ನೀಡಲಾಯಿತು. ನಂತರ ಅವರು ಮತ್ತೆ ಪಕ್ಷಾಂತರ ಮಾಡಿದ್ದರಿಂದ ಬಹುಮತ ಕಳೆದುಕೊಂಡು ಮತ್ತೆ ಅವರ ಸರಕಾರ ಅಲ್ಪಮತಕ್ಕೆ ಬಂತು. ಇಂತಹ ಸನ್ನಿವೇಶದಲ್ಲಿ ಅವರು ತಕ್ಷಣ ರಾಜೀನಾಮೆ ನೀಡಬೇಕಾಗಿತ್ತು. ಹಾಗೆ ಮಾಡದಿದ್ದರೆ ಅವರನ್ನು ವಜಾ ಮಾಡಬೇಕಾಗಿತ್ತು. ಭಾರತದಲ್ಲಿ ಹೆಚ್ಚೆಚ್ಚು ಕಡೆ ಒಂದು ಪಕ್ಷ ಸರಕಾರ ರಚಿಸಲಾಗದೆ ಸಮ್ಮಿಶ್ರ ಸರಕಾರಗಳು ಬರಲಿವೆ. ಇಂತಹ ಸನ್ನಿವೇಶದಲ್ಲಿ ಪಕ್ಷಗಳು ಸಮ್ಮಿಶ್ರ ಸರಕಾರದ ಭಾಗಿದಾರರಿಗೆ ನೀಡಿದ ಬೆಂಬಲ ಹಿಂತೆಗೆದುಕೊಂಡರೆ ಹಾಗೆ ಆ ಪಕ್ಷದ ನಿರ್ಣಯವನ್ನು ಪ್ರಶ್ನಿಸುವ ಕೆಲಸ ರಾಜ್ಯಪಾಲರದ್ದಲ್ಲ. ಇದು ಒಂದು ಸಂಸದೀಯ ವ್ಯವಸ್ಥೆಯಲ್ಲಿ ಪಾರ್ಟಿ ವ್ಯವಸ್ಥೆಯನ್ನು ಹ್ರಾಸಗೊಳಿಸುತ್ತದೆ. ಆದ್ದರಿಂದ ಸದನದಲ್ಲೇ ಪರೀಕ್ಷಿಸಬೇಕೆಂಬ ನೀತಿ ಎಲ್ಲಾ ಸಂದರ್ಭಕ್ಕೂ ಅನ್ವಯವಾಗುವುದಿಲ್ಲ ಎಂದು ಸಿಪಿಐ(ಎಂ) ವಾದಿಸಿದೆ.

3. ವಿಧಾನಸಭಾ ಅಧ್ಯಕ್ಷರು ಪಕ್ಷಾಂತರ ಮಾಡಿ ಕಲ್ಯಾಣ್ ಸಿಂಗ್ ಸರಕಾರವನ್ನು ಬೆಂಬಲಿಸಿದ 12 ಬಿಎಸ್‌ಪಿ ಶಾಸಕರ ಸ್ಥಾನಮಾನದ ಬಗ್ಗೆ ತನ್ನ ತೀರ್ಪು ನೀಡಲು ಕಳೆದ ಐದು ತಿಂಗಳಿಂದಲೂ ಏಕೆ ನಿರಾಕರಿಸುತ್ತಿದೆ ಎಂಬ ಪ್ರಶ್ನೆಗೆ ನೈತಿಕವಾಗಿಯೂ, ಕಾನೂನಾತ್ಮಕವಾಗಿಯೂ ಉತ್ತರ ನೀಡುವುದನ್ನು ಬಿಜೆಪಿ ತಪ್ಪಿಸಿಕೊಂಡಿದೆ. ಈಗ ಈ ಸಂಖ್ಯೆ 18ಕ್ಕೇರಿದೆ. ಆದರೂ ಇದು ಪಕ್ಷಾಂತರನಿರೋಧ ಶಾಸನದ ಪ್ರಕಾರ ಒಂದು ವಿಭಜನೆ ಎಂದಾಗಲು ಬೇಕಾದ ಒಂದನೇ ಮೂರು ಅಂಶವಾಗುವುದಿಲ್ಲ. ನಿನ್ನೆ 12 ಬಿಎಸ್‌ಪಿ ಶಾಸಕರ ಸ್ಥಾನಮಾನದ ಬಗ್ಗೆ ತೀರ್ಪು ನೀಡಲು ಕೇಳಿದಾಗ ಅವರ ಪ್ರತ್ಯುತ್ತರ - "ನೀವು ಸುಪ್ರೀಂಕೋರ್ಟ್‌ಗೆ ಹೋಗಬಹುದು" ಎಂದು. ಇದನ್ನು ಒಪ್ಪಿಕೊಂಡರೆ ಪಕ್ಷಾಂತರವನ್ನು ತಡೆಯಲೆಂದು ಇರುವ ಸಂವಿಧಾನದ ಹತ್ತನೇ ಶೆಡ್ಯೂಲ್ ಅರ್ಥಹೀನ ಕಾನೂನಾಗಿ ಬಿಡುತ್ತದೆ. ಇದರ ಪ್ರಕಾರ ನಡೆಯುದಿದ್ದರೆ ಇದು ಪಕ್ಷ ವ್ಯವಸ್ಥೆಗೆ ಒಂದು ದೊಡ್ಡ ಹಿನ್ನಡೆ. ಸಂವಿಧಾನದ ಹಾಗೂ ಪ್ರಜಾಸತ್ತಾತ್ಮಕ ವಿಧಿವಿಧಾನಗಳನ್ನು ಬುಡಮೇಲು ಮಾಡಲಾಗುತ್ತದೆ ಎಂದು ಮಾತನಾಡುವವರೆಲ್ಲಾ ಈ ರೀತಿ ಸ್ಪೀಕರ್ ಪಕ್ಷಾಂತರಕ್ಕೆ ಕುಮ್ಮಕ್ಕು ನೀಡುತ್ತಿರುವ ಬಗ್ಗೆ ಮೌನವಾಗಿದ್ದಾರೆ.

4. ತಮ್ಮ ನೈತಿಕ ಮೌಲ್ಯಗಳು ಎಂತಹ ಮಟ್ಟಕ್ಕಿಳಿದಿದೆಯೆಂದರೆ ವಿವಿಧ ಪಕ್ಷಗಳಿಂದ ಪಕ್ಷಾಂತರ ನಡೆಸುವ ಮೂಲಕವಷ್ಟೇ ತಾವು ಅಧಿಕಾರಕ್ಕೆ ಅಂಟಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಬಿಜೆಪಿ ನಿರಾಕರಿಸಬಲ್ಲುದೇ? ಈ ಮಂದಿಯೇ ಪಕ್ಷಾಂತರ ಮಾಡಿ ಒಂದು ಹೊಸ ಸರಕಾರ ರಚಿಸುವ ದಾವೆ ಇಟ್ಟರು ಎಂಬುದು ಅವರಿಗೆ ಗೊತ್ತಿಲ್ಲವೇ? ಕಲ್ಯಾಣ್ ಸಿಂಗ್‌ಗೆ ಕೈಕೊಟ್ಟ ಹದಿನೇಳು ಮಂತ್ರಿಗಳೇ ಮತ್ತೆ ತಮ್ಮ ವಿಧೇಯತೆ ಬದಲಿಸಿ ನಿನ್ನೆ ಅವರ ಪರವಾಗಿ ಮತ ನೀಡಿದರು. ಎಡಪಕ್ಷಗಳು ಹೀಗೆ ಅಲ್ಪಮತಕ್ಕಿಳಿದಾಗ ಅಧಿಕಾರದಲ್ಲುಳಿಯಲು ಪಕ್ಷಾಂತರ ಹಾಗೂ ಕಸರತ್ತುಗಳಿಗೆ ಇಳಿದ ಒಂದಾದರೂ ಉದಾಹರಣೆಯನ್ನು ಬಿಜೆಪಿ ತೋರಿಸಬಲ್ಲುದೇ? ಕೇಂದ್ರದಲ್ಲಿನ ಸಂಯುಕ್ತ ರಂಗ ಸರಕಾರದ ವಿಷಯದಲ್ಲೂ ಇಂತಹ ಉದಾಹರಣೆ ಕೊಡಲು ಅದಕ್ಕೆ ಸಾಧ್ಯವಿಲ್ಲ. ಕಾಂಗ್ರೆಸ್ ಪಕ್ಷ ಬೆಂಬಲ ಹಿಂತೆಗೆದುಕೊಂಡಾಗ ಗುಜ್ರಾಲ್ ಸರಕಾರ ಬಿಜೆಪಿ ಪ್ರಯತ್ನಿಸಿದಂತೆ ಕುದುರೆ ವ್ಯಾಪಾರ ಕೈಗೊಳ್ಳುವ ಬದಲು ರಾಜೀನಾಮೆ ನೀಡಿತು. ಬಿಜೆಪಿ ಸಾಧ್ಯವಿದ್ದ ಯಾವುದೇ ವಿಧಾನ ಬಳಸಿ ಅಧಿಕಾರ ಗಿಟ್ಟಿಸುವುದೇ ತನ್ನ ಏಕೈಕ ಗುರಿ ಎಂದು ಸಾಕಷ್ಟು ಸ್ಪಷ್ಟಪಡಿಸಿದೆ. ನೀತಿಗಳು, ಮೌಲ್ಯಗಳನ್ನು ಹಿನ್ನೆಲೆಗೆ ನೂಕಲಾಗಿದೆ.

ಆದ್ದರಿಂದ ಈ ಎಲ್ಲಾ ಟೀಕೆಗಳು ತಮ್ಮ ದುಷ್ಟ ಆಟವನ್ನು ಮುಚ್ಚಿಹಾಕಲಿಕ್ಕಾಗಿಯಷ್ಟೇ.

ಒಂದಲ್ಲ, ಎರಡಲ್ಲ, ಹಲವು ಬಾರಿ......

'ಅಧಿಕಾರಸ್ಥರಿಗೆ ವಿರೋಧ' - ಇದು ರಾಜಕೀಯ ವಿಶ್ಲೇಷಕರ ಒಂದು ಸೂತ್ರ. ಅಂದರೆ ಅಧಿಕಾರದಲ್ಲಿರುವ ಪಕ್ಷದ ಬಗ್ಗೆ ಸಾಮಾನ್ಯ ಜನರಲ್ಲಿ ವಿರೋಧ-ಭಾವನೆ ಬೆಳೆದಿರುತ್ತದೆ, ಆದ್ದರಿಂದ ಆಳುವ ಪಕ್ಷಕ್ಕೆ ಒಂದು ಚುನಾವಣೆಯಲ್ಲಿ ಇದೊಂದು ಆರಂಭದ ತೊಂದರೆ ಎಂದು ಭಾವಿಸಲಾಗುತ್ತದೆ. ಬಹಳ ಮಿತಿಗಳೊಳಗೆ ಕೆಲಸ ಮಾಡುವ ರಾಜ್ಯ ಸರಕಾರಗಳ ವಿಷಯದಲ್ಲಿ ಒಂದು ರೀತಿಯಲ್ಲಿ ಇದು ನಿಜವಾದರೂ ಆಳುವ ವರ್ಗಗಳ ಪಕ್ಷಗಳ ಧೋರಣೆಗಳು ಸದಾ ಜನಸಾಮಾನ್ಯರ ಹಿತಾಸಕ್ತಿಗಳಿಗೆ ವಿರುದ್ಧವಾಗಿರುತ್ತವೆ ಎಂಬುದನ್ನು ಮರೆಮಾಚಲು ಈ ಸೂತ್ರವನ್ನು ಬಳಸಲಾಗುತ್ತಿದೆ. ಜನ-ಪರ ಧೋರಣೆಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತಂದಾಗ ಈ ಸೂತ್ರ ಕೆಲಸ ಮಾಡಲಾರದು ಎಂಬುದು ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಹಿಂದೆಯೂ ಕಂಡುಬಂದಿದೆ. ಈ ಬಾರಿ ಮತ್ತೊಮ್ಮೆ ಕಂಡು ಬಂದಿದೆ.

ಪಶ್ಚಿಮ ಬಂಗಾಳ: ಗ್ರಾಮೀಣ ನೆಲೆ ಭದ್ರ, ಕಲ್ಕತ್ತೆಯಲ್ಲಿ ಹಿನ್ನಡೆ

1996 ರಂತೆ ಎಡರಂಗದ ಅಭ್ಯರ್ಥಿ ಗಳು 42 ರಲ್ಲಿ 33 ಸ್ಥಾನಗಳಲ್ಲಿ ಗೆದ್ದಿದ್ದಾರೆ. ಕಾಂಗ್ರೆಸ್(ಐ)ನ ರಾಜ್ಯ ಘಟಕ ತನ್ನ 9 ಸ್ಥಾನಗಳಲ್ಲಿ ಒಂದನ್ನು ಮಾತ್ರ ಉಳಿಸಿಕೊಂಡಿದೆ. ತೃಣಮೂಲ ಕಾಂಗ್ರೆಸ್ ಬಿಜೆಪಿ ಕೂಟ ರಾಜ್ಯದಲ್ಲಿ ಪ್ರಮುಖ ಎಡ-ವಿರೋಧಿ ವೇದಿಕೆಯಾಗಿ ಮೂಡಿ ಬಂದಿದೆ-ಅನುಕ್ರಮವಾಗಿ ಇವು ಏಳು ಮತ್ತು ಒಂದು ಸ್ಥಾನಗಳನ್ನು ಗೆದ್ದಿವೆ. ಎಡರಂಗದ 33 ರಲ್ಲಿ ಸಿಪಿಐ(ಎಂ) ನದ್ದು 24 (ಕಳೆದ ಬಾರಿ 23), ಆರ್.ಎಸ್.ಪಿ. ತನ್ನ 4 ಸ್ಥಾನಗಳನ್ನು, ಸಿಪಿಐ ತನ್ನ 3 ಸ್ಥಾನ ಗಳನ್ನು ಉಳಿಸಿಕೊಂಡಿವೆ. ಫಾರ್ವರ್ಡ್ ಬ್ಲಾಕ್ ತನ್ನ 3 ಸ್ಥಾನಗಳಲ್ಲಿ ಒಂದು ಕಳ ಕೊಂಡಿದೆ. ಸಿಪಿಐ(ಎಂ) 1996 ರಲ್ಲಿ ಕಾಂಗ್ರೆಸ್‌ಗೆ ಕಳಕೊಂಡ ಎರಡು ಸ್ಥಾನಗಳನ್ನು ಮತ್ತೆ ಪಡೆದುಕೊಂಡಿದೆ. .. ಈ ಬಾರಿ ಒಂದನ್ನು ಕಳಕೊಂಡಿದೆ.

ಪ್ರದೇಶ ಕಾಂಗ್ರೆಸ್(ಐ) ನಿಂದ ಸಿಡಿದು ಹೋದ ಗುಂಪಾದರೂ ತೃಣಮೂಲ ಕಾಂಗ್ರೆಸ್ ಸಾಕಷ್ಟು ಉತ್ತಮ ಪ್ರದರ್ಶನ ನೀಡಿದೆ. ಬಿಜೆಪಿಯೊಂದಿಗೆ ಅದರ ಮೈತ್ರಿ ಎರಡಕ್ಕೂ ಪ್ರಯೋಜನಕಾರಿಯಾಗಿದೆ. ತೃಣಮೂಲ ಕಾಂಗ್ರೆಸ್‌ನ 7 ಸ್ಥಾನಗಳಲ್ಲಿ 6 ಕಳೆದ ಬಾರಿ ಕಾಂಗ್ರೆಸ್ ಗೆದ್ದ ಸ್ಥಾನಗಳು. ಅದು ಪಡೆದ ಇನ್ನೊಂದು ಸ್ಥಾನ ಕಳೆದ ಬಾರಿ ಫಾರ್ವರ್ಡ್ ಬ್ಲಾಕ್ ಗೆದ್ದ ಬಾರಾಸಾತ್ ಕ್ಷೇತ್ರ(24 ಪರಗಣ ಜಿಲ್ಲೆಯಲ್ಲಿ). ಕಾಂಗ್ರೆಸ್‌ನ ಘನಿಖಾನ್ ಚೌಧರಿ ತನ್ನ ಮೌಲಾ ಸ್ಥಾನವನ್ನು ಉಳಿಸಿ ಕೊಂಡಿದ್ದಾರೆ. ಬಿಜೆಪಿ ಡಂಡಂನಲ್ಲಿ ಸಿಪಿಐ(ಎಂ) ಅಭ್ಯರ್ಥಿಯನ್ನು ಸೋಲಿಸಿ ಗಮನಾರ್ಹ ವಿಜಯ ಪಡೆದಿದೆ. ಈ ಕ್ಷೇತ್ರವೂ 24 ಪರಗಣ ಜಿಲ್ಲೆಯಲ್ಲಿದೆ.

ಮತದಾನದ ವಿಧಾನವನ್ನು ಗಮನಿಸಿದಾಗ ಮೊದಲ ನೋಟಕ್ಕೆ ಕಾಣುವ ಅಂಶವೆಂದರೆ ಸಿಪಿಐ(ಎಂ) ಮತ್ತು ಎಡರಂಗ ತಮ್ಮ ಗ್ರಾಮೀಣ ನೆಲೆಗಳನ್ನು ಉಳಿಸಿ ಕೊಂಡಿವೆ, ಆದರೆ ಕಲ್ಕತ್ತ ಹಾಗೂ ಸುತ್ತಮುತ್ತಲ ಉಪನಗರಗಳಲ್ಲಿ ಅವುಗಳ ಜನನೆಲೆ ಇಳಿಮುಖವಾದಂತೆ ಕಾಣುತ್ತದೆ.

ಆದರೆ ಅಖಿಲ ಭಾರತ ಮಟ್ಟದಲ್ಲಿನ ಮತದಾನ ವಿಧಾನದ ಹಿನ್ನೆಲೆಯಲ್ಲಿಯೂ ಪಶ್ಚಿಮಬಂಗಾಳದಲ್ಲಿ ಎಡರಂಗ ತನ್ನ 33ರ ಸಂಖ್ಯೆಯನ್ನು ಉಳಿಸಿಕೊಳ್ಳಲು ಸಾಧ್ಯ ವಾಗಿದೆ ಎಂಬುದು ಗಮನಾರ್ಹ. ಎಡರಂಗದ ಅಧ್ಯಕ್ಷ ಶೈಲೇಶ್ ದಾಸ್‌ಗುಪ್ತಾ ಇದರಲ್ಲಿ ಮೂರು ಅಂಶಗಳನ್ನು ಗುರುತಿಸಿದ್ದಾರೆ-1. ತೃಣಮೂಲ ಕಾಂಗ್ರೆಸ್, ಬಿಜೆಪಿ ಮತ್ತು ಕಾಂಗ್ರೆಸ್ ಜತೆಗೆ ದೊಡ್ಡ ಬಂಡ ವಾಳಿಗರ ದೊಡ್ಡ ಪತ್ರಿಕೆಗಳು ನಡೆಸಿದ ಹೀನ ಅಪಪ್ರಚಾರದಿಂದಲೂ ವಿಚಲಿತರಾಗದೆ ಇಪ್ಪತ್ತು ವರ್ಷಗಳಿಂದ ಎಡರಂಗದ ಆಳ್ವಿಕೆಯನ್ನು ನೋಡುತ್ತಿರುವ ಜನಗಳ ಹೆಚ್ಚಿದ ರಾಜಕೀಯ ಪ್ರಜ್ಞೆಯಿಂದಾಗಿ ಸಿಪಿಐ(ಎಂ) ಮತ್ತು ಎಡರಂಗ ಬೇರೆಡೆಯ ಅಧಿಕಾರಸ್ಥ ಪಕ್ಷಗಳಂತೆ ತಮ್ಮ ಸ್ಥಾನಗಳನ್ನು ಕಳೆದುಕೊಳ್ಳಲಿಲ್ಲ. 2. ಎಡ-ವಿರೋಧಿ ರಾಜಕೀಯ ಶಕ್ತಿಗಳೆಲ್ಲಾ ಬಹುಶಃ ಒಂದು ಪೂರ್ವಯೋಜನೆಯಂತೆ ಒಟ್ಟಾದ್ದರಿಂದ ಎಡರಂಗಕ್ಕೆ ಇನ್ನೂ ಹೆಚ್ಚಿನ ಹಾನಿ ಉಂಟಾಗಬೇಕಿತ್ತು. ತೃಣಮೂಲ ಕಾಂಗ್ರೆಸ್ಸಿನ ಸಮಯಸಾಧಕತನದಿಂದಾಗಿ ಬಿಜೆಪಿ ರಾಜ್ಯದ ಮುಖ್ಯ ರಾಜಕೀಯ ಧಾರೆಗೆ ಬರುವಂತಾಗಿದೆ. ಇಲ್ಲವಾದರೆ ಎಡರಂಗ ಇನ್ನೂ ಹೆಚ್ಚಿನ ಸ್ಥಾನಗಳನ್ನು ಗೆಲ್ಲುತ್ತಿತ್ತು. 3. ಅಧಿಕಾರಸ್ಥ ಪಕ್ಷಗಳ ಬಗ್ಗೆ ಜನಗಳಲ್ಲಿ ವಿರೋಧ ಭಾವನೆಯಿತ್ತೆಂಬ ಪರಿಕಲ್ಪನೆ ದೇಶದ ಇತರೆಡೆಗಳಂತೆ ಎಡ ನೇತೃತ್ವದ ಪ.ಬಂಗಾಳ, ತ್ರಿಪುರಾ, ಕೇರಳಗಳಲ್ಲಿ ಮಾತ್ರ ಕೆಲಸ ಮಾಡಿಲ್ಲ.

ಎಡರಂಗ ತಾಮ್ಲುಕ್ ಮತ್ತು ಜುಹೀಪುರ್ ಕ್ಷೇತ್ರಗಳಲ್ಲಿ ಗಮನಾರ್ಹ ಬಹುಮತದೊಂದಿಗೆ ವಾಪಸು ಪಡೆ ಯಲು ಸಾಧ್ಯವಾಯಿತು, ಆದರೆ ಬಾರಾಸಾತ್ ಮತ್ತು ಇನ್ನೂ ಮುಖ್ಯವಾಗಿ ಡಂಡಂನ್ನು ಕಳಕೊಂಡಿದೆ ಎಂದು ದಾಸ್ ಗುಪ್ತಾ ಹೇಳಿದ್ದಾರೆ. ಈ ಫಲಿತಾಂಶಗಳ ವಿಮರ್ಶೆ ನಡೆಸಿ ಸೂಕ್ತ ಪಾಠಗಳನ್ನು ಕಲಿಯಬೇಕಾಗಿದೆ ಎಂದು ಅವರು ಹೇಳಿದರು. ಬಿಜೆಪಿ ಬಂಗಾಳದ ಮುಖ್ಯ ರಾಜಕೀಯ ಧಾರೆಯನ್ನು ಪ್ರವೇಶಿಸಿರುವುದು ಅಪಾಯಕಾರಿ, ಬಂಗಾಳದ ಜಾತ್ಯಾತೀತ ಪರಂಪರೆಯನ್ನು ಉಳಿಸಿಕೊಳ್ಳಲು ಮುಂಬರುವ ದಿನಗಳಲ್ಲಿ ಹೆಚ್ಚಿನ ಪ್ರಯತ್ನ ಅಗತ್ಯ ಎಂದೂ ಅವರು ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಲೋಕಸಭಾ ಚುನಾವಣಾ ಫಲಿತಾಂಶಗಳ ಬಗ್ಗೆ ಮಾತನಾಡುತ್ತಾ ಮುಖ್ಯಮಂತ್ರಿ ಜ್ಯೋತಿ ಬಸುರವರು ಕಾಂಗ್ರೆಸ್‌ನ ಚುನಾವಣಾ ಬೆಂಬಲದ ದೊಡ್ಡ ಭಾಗ ತೃಣಮೂಲ ಕಾಂಗ್ರೆಸ್-ಬಿಜೆಪಿ ಕಡೆ ವಾಲಿದ್ದರಿಂದ ಈ ಬಾರಿ ಎಡಪಕ್ಷಗಳ ಕೆಲಸ ಕಷ್ಟಕರವಾಗಿತ್ತು ಎಂದರು. ಎಡರಂಗ ಗೆದ್ದ 33 ಸ್ಥಾನಗಳಲ್ಲಿ 26 ರಲ್ಲಿ ಈ ಕೂಟ ಎರಡನೇ ಸ್ಥಾನ ಪಡೆದಿದೆ ಎಂಬುದನ್ನು ಗಮನಿಸಿದ ಜ್ಯೋತಿಬಸುರವರು ಈ ಬಾರಿ ಚುನಾವಣಾ ನಂತರದ ವಿಮರ್ಶೆಯಲ್ಲಿ ಬಂಗಾಳದಲ್ಲಿ ಮತದಾನ ವಿಧಾನವನ್ನು ಗಮನಿಸಬೇಕಾಗಿದೆ, ನಂತರ ಸೂಕ್ತ ಕಾರ್ಯಕ್ರಮಗಳನ್ನು ಆರಂಭಿಸಬೇಕಾಗಿದೆ ಎಂದಿದ್ದಾರೆ. ರಾಜ್ಯದ ಜನತೆ ಮತ್ತೊಮ್ಮೆ ಎಡರಂಗಕ್ಕೆ 33 ಸ್ಥಾನಗಳನ್ನು ನೀಡಿ ತಮ್ಮ ರಾಜಕೀಯ ಪ್ರೌಢತೆಯನ್ನು ಪ್ರದರ್ಶಿಸಿ ದ್ದಾರೆ ಎಂದು ಅವರು ಅಭಿನಂದಿಸಿದರು.

ಕೆಲವು ವಿಶಿಷ್ಟತೆಗಳು

● ರಾಜ್ಯದಲ್ಲಿ ಅತಿದೊಡ್ಡ ಅಂತರದಿಂದ ಗೆದ್ದ ಅಭ್ಯರ್ಥಿಯೆಂದರೆ ಸಿಪಿಐ(ಎಂ) ನ ರೂಪ್‌ಚಂದ್ ಮುರ್ಮು. ಝಾರ್‌ಗ್ರಾಂ ನಲ್ಲಿ ತೃಣಮೂಲ ಕಾಂಗ್ರೆಸ್ಸಿನ ಸಮರ ಮಂಡಿಯವರನ್ನು 295287 ಮತಗಳ ಅಂತರದಿಂದ ಸೋಲಿಸಿದರು. ಕಳೆದ ಬಾರಿ ಈ ಅಂತರ ಇನ್ನೂ ಹೆಚ್ಚಿತ್ತು - 347284

→

ತ್ರಿಪುರಾ; ನಾಲ್ಕನೇ ಬಾರಿ - ಮೂರನೇ ಎರಡು ಬಹುಮತದೊಂದಿಗೆ

ತ್ರಿಪುರಾ ವಿಧಾನಸಭಾ ಚುನಾವಣೆಗಳಲ್ಲಿ ಎಡರಂಗ ನಾಲ್ಕನೇ ಬಾರಿಗೆ ಮೂರನೇ ಎರಡು ಬಹುಮತ ಪಡೆದು ಗೆದ್ದಿದೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ 60 ರಲ್ಲಿ 59 ಸ್ಥಾನಗಳ ಫಲಿತಾಂಶ ಘೋಷಿತವಾಗಿದ್ದು ಎಡರಂಗ 41 ಸ್ಥಾನಗಳನ್ನು ಗೆದ್ದಿತ್ತು. ಸಿಪಿಐ(ಎಂ) 38, ಸಿಪಿಐ 1, ಆರ್. ಎಸ್.ಪಿ. 2) ಕಾಂಗ್ರೆಸ್ - ಟಿಯುಜೆಎಸ್ ಕೂಟಕ್ಕೆ 17 ಸ್ಥಾನಗಳು ದೊರೆತಿವೆ.(ಕಾಂಗ್ರೆಸ್ 12, ಟಿಯುಜೆಎಸ್ 4, ಟಿಎನ್‌ವಿ 1) ಹಾಗೂ ಒಂದು ಸ್ಥಾನ ಪಕ್ಷೇತರನಾಗಿ ಸ್ಪರ್ಧಿಸಿದ ಭಿನ್ನಮತೀಯ ಕಾಂಗ್ರೆಸ್ಸಿಗ ಗೆದ್ದಿದ್ದಾರೆ.

ಲೋಕಸಭಾ ಚುನಾವಣೆಗಳಲ್ಲಿ ಎರಡೂ ಸ್ಥಾನಗಳಲ್ಲಿ ಸಿಪಿಐ(ಎಂ) ಗೆದ್ದಿದೆ.

ಆರಂಭಿಕ ಅಂದಾಜುಗಳ ಪ್ರಕಾರ ಎಡರಂಗ 50% ಮತ ಪಡೆದಿದೆ. ಉತ್ತರ ಮತ್ತು ದಕ್ಷಿಣ ತ್ರಿಪುರಾ ಜಿಲ್ಲೆಗಳಲ್ಲಿ ಎಡರಂಗ ಭಾರೀ ಗೆಲುವು ಸಾಧಿಸಿದರೆ ಪಶ್ಚಿಮ ತ್ರಿಪುರಾ ಹಾಗೂ ಡಾಲೈನಲ್ಲಿ ಹಿಂಜರಿತ ಉಂಟಾಗಿದೆ. ಸಿಪಿಐ(ಎಂ) ಅಭ್ಯರ್ಥಿಗಳಾದ ಹಾಗೂ ಕೈಗಾರಿಕಾ ಮತ್ತು ಗ್ರಾಮೀಣ ಅಭಿವೃದ್ಧಿ ಮಂತ್ರಿ ತಪನ್ ಚಕ್ರವರ್ತಿ ಹಾಗೂ ಸಾರಿಗೆ ಮಂತ್ರಿ ರಂಜಿತ್ ದೇಬ್‌ನಾಥ್ ಹಾಗೂ ಫಾರ್ವರ್ಡ್ ಬ್ಲಾಕ್ ಅಭ್ಯರ್ಥಿ ಹಾಗೂ ಆಹಾರ ಮಂತ್ರಿ ಬ್ರಜಗೋಪಾಲ್ ರಾಯ್ ಸೋತಿದ್ದಾರೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಾಣಿಕ್ ಸರ್ಕಾರ್ ಹಾಗೂ ಮಾಜಿ ಎಂ.ಪಿ. ಬಾದಲ್ ಚೌಧರಿ ಗೆದ್ದವರಲ್ಲಿ ಪ್ರಮುಖರು. ಕಾಂಗ್ರೆಸ್ (ಐ)ನ ಮಾಜಿ ಮುಖ್ಯಮಂತ್ರಿ ಸುಧೀರ್ ರಂಜನ್ ಮಜುಂದಾರ್ ಹಾಗೂ ಪ್ರದೇಶ ಕಾಂಗ್ರೆ ಅಧ್ಯಕ್ಷ ಗೋಪಾಲ್ ರಾಯ್ ಪರಾಭವ ಅನುಭವಿಸಿದ ಪ್ರಮುಖರಲ್ಲಿ ಇದ್ದಾರೆ.

ಎಡರಂಗ ಎರಡು ಕ್ಷೇತ್ರಗಳಲ್ಲಿ ಹಿಂಜರಿತ ಅನುಭವಿಸಿದೆ. ಮೊದಲಿನದ್ದು ಉಗ್ರಗಾಮಿ ಪೀಡಿತ ಪ್ರದೇಶಗಳಲ್ಲಿ, ಎರಡನೆಯದಾಗಿ ರಾಜಧಾನಿ ಅಗರ್ತಲಾದಲ್ಲಿ. ಕಾಂಗ್ರೆಸ್(ಐ) - ಟಿಯುಜೆಎಸ್‌ನ ನೆರವು ಪಡೆದ ಉಗ್ರಗಾಮಿಗಳು ಚುನಾವಣೆ ಬಹಿಷ್ಕಾರದ ಕರೆ ನೀಡಿ ಮತದಾನ ಮಾಡಿದವರನ್ನು ಕೊಲ್ಲುವ ಬಹಿರಂಗ ಬೆದರಿಕೆಯನ್ನು ಹಾಕಿದ್ದರು. ದೂರ ಪ್ರದೇಶಗಳಲ್ಲಿರುವ ಎಡರಂಗ ಬೆಂಬಲಿಗರು ಮತದಾನ ಮಾಡ ದಂತೆಯೂ ತಡೆದರು. ಇಲ್ಲಿ ಎಡರಂಗದ ಅಭ್ಯರ್ಥಿಗಳು ಬಹಳ ಕಮ್ಮಿ ಅಂತರದಿಂದ ಸೋತಿದ್ದಾರೆ. ಆದರೆ ಅಗರ್ತಲಾ ಮತ್ತು ಸುತ್ತಮುತ್ತ ಒಂದು ಸ್ಥಾನ ಬಿಟ್ಟರೆ ಉಳಿದೆಲ್ಲಾ ಕಡೆ ಎಡರಂಗದ ಅಭ್ಯರ್ಥಿಗಳು ಸೋತಿದ್ದಾರೆ. ಇಲ್ಲಿ ಕಾಂಗ್ರೆಸ್ (ಐ) ಅಭ್ಯರ್ಥಿಗಳಲ್ಲಿ ಹಲವರು ಮಾಫಿಯಾ ಹಿನ್ನೆಲೆಯವರಿದ್ದರೂ ಗೆದ್ದಿದ್ದಾರೆ. ಇದಕ್ಕೆ ಕಾರಣ ದೊಡ್ಡ ಬಂಡವಾಳಶಾಹಿಗಳ ಹತೋಟಿಯಲ್ಲಿರುವ ಪೀತ ಪತ್ರಿಕೆಗಳ ಅಪಪ್ರಚಾರ. ಅಗರ್ತಲಾದ ಮಧ್ಯಮ ವರ್ಗಗಳನ್ನು ದಾರಿ ತಪ್ಪಿಸಲು ಅವು ಸರ್ವ ಪ್ರಯತ್ನ ನಡೆಸಿದರು.

ಈ ಎಲ್ಲಾ ಅಡ್ಡಿ ಆತಂಕಗಳನ್ನು ಎದುರಿಸಿಯೂ ಎಡರಂಗ ಮೂರನೇ ಎರಡು ಬಹುಮತವನ್ನು ಗಳಿಸಿದೆ. ಜನಗಳ ಭಾರೀ ಬೆಂಬಲ ಹಾಗೂ ಸಹಾನುಭೂತಿಯೊಂದಿಗೆ ಮತ್ತೆ ಅಧಿಕಾರಕ್ಕೆ ಬಂದಿದೆ. ಅಧಿಕಾರದಲ್ಲಿರುವ ಪಕ್ಷದ ಬಗ್ಗೆ ಜನಗಳ ವಿರೋಧ ಭಾವನೆ ದೇಶದ ಇತರ ಹಲವು ರಾಜ್ಯಗಳಲ್ಲಿ ಕಂಡು ಬಂದಂತೆ ಇಲ್ಲಿ ಕಂಡು ಬಂದಿಲ್ಲ. ಇಲ್ಲಿ ಜನ ಯಾವುದೇ ಸಂದೇಹ ಕೈಡೆಯಿಲ್ಲದಂತೆ ಹೀನ ಎಡವಿರೋಧಿ ಪಿತೂರಿಗಳ ವಿರುದ್ಧ ಶಾಂತಿ ಸಾಮರಸ್ಯ ಮತ್ತು ಅಭಿವೃದ್ಧಿಗಾಗಿ ಮತ ನೀಡಿದ್ದಾರೆ. ಎಡರಂಗದ ಈ ವಿಜಯದಲ್ಲಿ ಜನಗಳ ರಾಜಕೀಯ ಸಕ್ರಿಯತೆ ಹಾಗೂ ಪ್ರಜ್ಞಾಶೀಲತೆ ನಿರ್ಣಾಯಕ ಅಂಶವಾಗಿದೆ.

ತ್ರಿಪುರಾ ರಾಜ್ಯಾದ್ಯಂತ ಎಡರಂಗದ ಜಯಭೇರಿಯನ್ನು ಉತ್ಸಾಹದಿಂದ ಆಚರಿಸಲಾಗುತ್ತಿದೆ. ಆದರೆ 1988ರಲ್ಲಿ ಕಾಂಗ್ರೆಸ್(ಐ) ಟಿ.ಯು.ಜೆ.ಎಸ್. ವಿಜಯದ ಸಂದರ್ಭದಲ್ಲಿ ಕಂಡ ಗೂಂಡಾಗಿರಿಗೆ ತದ್ವಿರುದ್ಧವಾದ ವಾತಾವರಣದಲ್ಲಿ, ಜನ ಶಿಸ್ತಿನಿಂದ, ಸಭ್ಯ ರೀತಿಯಲ್ಲಿ ಎಡರಂಗದ ವಿಜಯೋತ್ಸವವನ್ನು ಆಚರಿಸುತ್ತಿದ್ದಾರೆ.



ಡೈಮಂಡ್ ಹಾರ್ಬರ್‌ನಲ್ಲಿ ಸಿಪಿಐ(ಎಂ) ಅಭ್ಯರ್ಥಿಯ ಗೆಲುವಿನ ಆಚರಣೆ ಆಚರಿಸುತ್ತಿರುವ ಯುವಜನ

→

● ಇವರಲ್ಲದೆ ಸಿಪಿಐ(ಎಂ) ನ ಸೋಮನಾಥ್ ಚಟರ್ಜಿ (ಬೋಲ್‌ಪುರ) ಹಾಗೂ ನಿಖಿಲಾನಂದ ಸರ್ (ಬರ್ದ್ವಾನ್), ಸಿಪಿಐನ ಇಂದ್ರಜಿತ್ ಗುಪ್ತಾ (ಮಿಡ್ನಾ ಪುರ್) 2 ಲಕ್ಷಕ್ಕೂ ಹೆಚ್ಚು ಅಂತರದಿಂದ ಗೆದ್ದಿದ್ದಾರೆ. ತೃಣಮೂಲ ಕಾಂಗ್ರೆಸ್ಸಿನ ಮಮತಾ ಬ್ಯಾನರ್ಜಿ ಕೂಡಾ ಈ ಪಟ್ಟಿಯಲ್ಲಿ ಸೇರುತ್ತಾರೆ.

● ದೇಶದಲ್ಲಿ ಅತಿ ಹೆಚ್ಚು ಅಂತರದಿಂದ ಗೆದ್ದ ಮೊದಲ ಹತ್ತು ಮಂದಿಯಲ್ಲಿ ಪಶ್ಚಿಮ ಬಂಗಾಳದ ನಾಲ್ವರ ಹೆಸರುಗಳಿವೆ. ಇವರೆಲ್ಲರೂ ಎಡರಂಗದ ಅಭ್ಯರ್ಥಿಗಳು

● ಈ ಬಾರಿ ಐವರು ಮಹಿಳಾ ಅಭ್ಯರ್ಥಿಗಳು ಗೆದ್ದಿದ್ದಾರೆ. ಸಿಪಿಐ(ಎಂ) ನ ಮಿನತಿ ಸೆನ್, ಸಂಧ್ಯಾ ಪೌರಿ, ಸಿಪಿಐ ನ ಗೀತಾ ಮುಖರ್ಜಿ ಹಾಗೂ ತೃಣಮೂಲ ಕಾಂಗ್ರೆಸ್‌ನ ಮಮತಾ ಬ್ಯಾನರ್ಜಿ ಮತ್ತು ಕೃಷ್ಣಾ ಬೋಸ್.

● ಇಂದ್ರಜಿತ್ ಗುಪ್ತಾ ಈಗ ಮಿಡ್ನಾಪುರ್ ನಿಂದ ಹತ್ತು ಬಾರಿ ಗೆದ್ದ ವಿಕ್ರಮವನ್ನು ಸ್ಥಾಪಿಸಿದ್ದಾರೆ. ಅಮರ್ ರಾಯ್ ಪ್ರಧಾನ್ ಏಳನೇ ಬಾರಿಗೆ ಕೂಚ್‌ಬೇಹಾರಿನಿಂದ ಗೆದ್ದಿದ್ದಾರೆ. ಸೋಮನಾಥ್ ಚಟರ್ಜಿ, ಬಾಸುದೇವ ಆಚಾರ್ಯ ಹಾಗೂ ಹನನ್ ಮುಲ್ಲಾ (ಎಲ್ಲಾ ಸಿಪಿಐ(ಎಂ), ಸನತ್ ಮಂಡಲ್(ಆರ್.ಎಸ್.ಪಿ) ಹಾಗೂ ಕಾಂಗ್ರೆಸ್ಸಿನ ಘನಿಖಾನ್ ಚೌಧರಿ 6ನೇ ಬಾರಿಗೆ ತಮ್ಮ ಸ್ಥಾನಗಳನ್ನು ಗೆದ್ದಿದ್ದಾರೆ.

● ಪಶ್ಚಿಮ ಬಂಗಾಳದಲ್ಲಿ ಮೊದಲ ಬಾರಿಗೆ ಲೋಕಸಭಾ ಪ್ರವೇಶಿಸುತ್ತಿರುವವರೆಂದರೆ ಸಿಪಿಐ(ಎಂ)ನ ಮಿನತಿ ಸೆನ್, ಅಬುಲ್ ಹಸ್ನತ್ ಖಾನ್, ಮೈನುಲ್ ಹಸನ್, ಲಕ್ಷ್ಮಣ್ ಸೇಠ್, ವಿಕಾಸ್ ಚೌಧರಿ ಹಾಗೂ ನಿಖಿಲನಂದ್ರ ಸರ್, ತೃಣಮೂಲ ಕಾಂಗ್ರೆಸ್ಸಿನ ರಂಜಿತ್ ಪಂಜಾ, ಸುದೀಪ್ ಬಂದೋಪಾಧ್ಯಾಯ ಹಾಗೂ ಬಿಕ್ರಾಂ ಸರ್ಕಾರ್ ಹಾಗೂ ಬಿಜೆಪಿಯ ತಪನ್ ಸಿಕ್ದರ್.

● 18 ಜಿಲ್ಲೆಗಳಲ್ಲಿ 12 ರಲ್ಲಿ ಎಡರಂಗ ಎಲ್ಲಾ ಸ್ಥಾನಗಳನ್ನು ಗೆದ್ದಿದೆ. ಕಲ್ಕತ್ತೆಯಲ್ಲಿ ಎಲ್ಲಾ 3 ಸ್ಥಾನಗಳನ್ನು ಕಳಕೊಂಡು ತೃಣಮೂಲ ಕಾಂಗ್ರೆಸ್ ಅದನ್ನು ಗೆದ್ದಿದೆ. ಉತ್ತರ 24 ಪರಗಣ ಜಿಲ್ಲೆಯಲ್ಲಿ 4 ರಲ್ಲಿ 2 ಹಾಗೂ ದಕ್ಷಿಣ ಪರಗಣ ಜಿಲ್ಲೆಯಲ್ಲಿ 4 ರಲ್ಲಿ 3 ನ್ನು ಎಡರಂಗ ಗೆದ್ದಿದೆ. ಹೌರಾದಲ್ಲಿ 2 ರಲ್ಲಿ 1 ಹಾಗೂ ಹೂಗ್ಲಿ ಜಿಲ್ಲೆಯಲ್ಲಿ 3 ರಲ್ಲಿ 2ನ್ನು ಎಡರಂಗ ಗೆದ್ದಿದೆ.

● ಎಡರಂಗ ಸೋತ 9 ಸ್ಥಾನಗಳಲ್ಲಿ ಎಂಟರಲ್ಲಿ ಸಿಪಿಐ(ಎಂ) ಎರಡನೇ ಸ್ಥಾನದಲ್ಲಿತ್ತು. ಒಂದರಲ್ಲಿ ಫಾರ್ವರ್ಡ್ ಬ್ಲಾಕ್ ಎರಡನೇ ಸ್ಥಾನ ಪಡೆಯಿತು. ತೃಣಮೂಲ ಕಾಂಗ್ರೆಸ್ 17 ರಲ್ಲಿ, ಬಿಜೆಪಿ 9 ರಲ್ಲಿ ಎರಡನೇ ಸ್ಥಾನ ಪಡೆಯಿತು. ತೃಣಮೂಲ ಬಿಜೆಪಿಯನ್ನು ಬೆಂಬಲಿಸಿದ ಸಮಾಜವಾದಿ ಫಾರ್ವಡ್ ಬ್ಲಾಕ್ ಒಂದುಕಡೆ 2ನೇ ಸ್ಥಾನ ಪಡೆಯಿತು. ○

12ನೇ ಲೋಕಸಭೆಯಲ್ಲಿ ಸಿಪಿಐ(ಎಂ) ಪ್ರತಿನಿಧಿಗಳು

1. ಮಿನತಿ ಸೆನ್	ಜಲಪಾಯ್‌ಗುರಿ
2. ಆನಂದ ಪಾಠಕ್	ಡಾರ್ಜಿಲಿಂಗ್
3. ಸುಬ್ರತೋ ಮುಖರ್ಜಿ	ರಾಯ್‌ಗಂಜ್
4. ಅಬುಲ್ ಹಸನತ್ ಖಾನ್	ಜಂಗೀಪುರ್
5. ಮೈನುಲ್ ಹಸನ್	ಮುರ್ಷಿದಾಬಾದ್
6. ಅಜಯ್ ಮುಖರ್ಜಿ	ಕೃಷ್ಣಾನಗರ
7. ಅಸೀಮ್ ಬಾಲಾ	ನವದ್ವೀಪ್(ಮೀಸಲು)
8. ರಾಧಿಕಾ ರಂಜನ್ ಪ್ರಾಮಾಣಿಕ್	ಮಥುರಾಪುರ್(ಮೀಸಲು)
9. ಶ್ರಮಿಕ್ ಲಹಿರಿ	ಡೈಮಂಡ್ ಹಾರ್ಬರ್
10. ತರಿತ್ ತೋಪ್‌ದಾರ್	ಬ್ಯಾರಕ್‌ಪುರ್
11. ಹನ್ನನ್ ಮೊಲ್ಲಾ	ಉಲುಬೆರಿಯಾ
12. ರೂಪ್‌ಚಂದ್ ಪಾಲ್	ಹೂಗ್ಲಿ
13. ಅನಿಲ್ ಬಸು	ಆರಾಂಬಾಗ್
14. ಲಕ್ಷ್ಮಣ್ ಸೇಠ್	ತಾಂಲೂಕ್
15. ಸುಧೀರ್ ಗಿರಿ	ಕೊಂತ್ಯಾ
16. ರೂಪ್‌ಚಂದ್ ಮುರ್ಮು	ಝಾರ್‌ಗ್ರಾಂ(ಎಸ್‌ಟಿ)
17. ಬಾಸುದೇವ ಆಚಾರ್ಯ	ಬಾಂಕೂರ
18. ಸಂಧ್ಯಾ ಬಾವರಿ	ವಿಷ್ಣುಪುರ್(ಎಸ್‌ಟಿ)
19. ಸುನೀಲ್ ಖಾನ್	ದುರ್ಗಾಪುರ್(ಮೀಸಲು)
20. ಬಿಕಾಶ್ ಚೌಧರಿ	ಅಸನ್‌ಸೋಲ್
21. ಮೆಹಬೂಬ್ ಝಹೆದಿ	ಕಟ್ವಾ
22. ಸೋಮನಾಥ್ ಚಟರ್ಜಿ	ಬೋಲ್‌ಪುರ್
23. ರಾಮಚಂದ್ರ ಡೋಂ	ಬೀರ್‌ಭೂಮ್(ಮೀಸಲು)
24. ನಿಖಿಲ್ ಸಾರ್	ಬರ್ದ್ವಾನ್
25. ಟಿ.ಗೋವಿಂದನ್	ಕಾಸರಗೋಡು
26. ಪ್ರೊ. ಎಂ.ಕೆ.ಪ್ರೇಮಜಂ	ಬಡಾಗರ
27. ಎ.ಅಜಯ ಕುಮಾರ್	ಒಟ್ಟಪಾಳಂ
28. ಎನ್.ಎನ್.ಕೃಷ್ಣದಾಸ್	ಪಾಲ್ಘಾಟ
29. ಕೆ.ಸುರೇಶ್ ಕುರುಪ್	ಕೊಟ್ಟಾಯಂ
30. ವರಕಳ ರಾಧಾಕೃಷ್ಣನ್	ಚಿರಯಂಕಿಲ್
31. ಸಮರ್ ಚೌಧರಿ	ಪಶ್ಚಿಮ ತ್ರಿಪುರ
32. ಬಜುಬಾನ್ ರಿಯಾಂಗ್	ಪೂರ್ವ ತ್ರಿಪುರ

ಕೇರಳ : ಮತ ಗಳಿಕೆಯಲ್ಲಿ ಮುನ್ನಡೆ

ಎಡ ಪ್ರಜಾಪ್ರಭುತ್ವ ರಂಗ ಅಥವಾ ಎಲ್.ಡಿ.ಎಫ್.ಗೆ ಕಳೆದ ಲೋಕಸಭಾ ಚುನಾವಣೆಗಳಿಗೆ ಹೋಲಿಸಿದರೆ ಒಂದು ಸ್ಥಾನ ಕಮ್ಮಿಯಾದರೂ, ಮತಗಳಿಕೆಯ ಶೇಕಡಾವನ್ನು ಅದು ಹೆಚ್ಚಿಸಿಕೊಂಡಿದೆ. ಸಿ.ಪಿ.ಐ.(ಎಂ) ತನ್ನ ಸ್ಥಾನಗಳನ್ನು ಹೆಚ್ಚಿಸಿಕೊಂಡಿದೆ. ಮೂರು ವಿಧಾನ ಸಭಾ ಉಪ ಚುನಾವಣೆಗಳಲ್ಲಿ ಎಲ್ಲವನ್ನು ಎಲ್‌ಡಿಎಫ್ ಗೆದ್ದು ಕೊಂಡಿದೆ. ಒಟ್ಟಾರೆಯಾಗಿ ಉತ್ತಮ ಪ್ರದರ್ಶನ ನೀಡಿದೆ. ಇತರ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಪಕ್ಷಗಳಿಗೆ ಜನ ನೀಡಿದ ತೀರ್ಪಿಗಿಂತ ಭಿನ್ನವಾದ ತೀರ್ಪನ್ನು ಜನ ಇಲ್ಲಿ ನೀಡಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲಿ ಯು.ಡಿ.ಎಫ್.ಗೆ ಭೀಷಣ ಸವಾಲು ನೀಡಲಾಗಿದೆ. ಎಲ್ಲಾ ಸ್ಥಾನಗಳಲ್ಲಿ ಮೂರು ವಿಧಾನಸಭಾ ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಬಿ.ಜೆ.ಪಿ.ಗೆ ದೊರೆತದ್ದು ದೊಡ್ಡ ಸೊನ್ನೆ. "ಸೋನಿಯಾ ಅಲೆ"ಯೂ ಇಲ್ಲಿ ಕೆಲಸ ಮಾಡಿಲ್ಲ.

ಎಲ್.ಡಿ.ಎಫ್. ಕಾಸರಗೋಡು, ಬಡಗರ, ಒಟ್ಟಪಾಳಂ, ಪಾಲಕ್ಕಾಡ್, ತ್ರಿಶೂರ್, ಕೊಳ್ಳಂ ಮತ್ತು ಚಿರ್‍ಯಾಂಕಿಲ್ ಲೋಕಸಭಾ ಸ್ಥಾನಗಳನ್ನು ಉಳಿಸಿಕೊಂಡಿದೆ. ಹಾಗೂ ಕೊಟ್ಟಾಯಂ ಮತ್ತು ಅಡೂರು ಸ್ಥಾನಗಳನ್ನು ಯು.ಡಿ.ಎಫ್. ನಿಂದ ಕಿತ್ತುಕೊಂಡಿದೆ. ಆದರೆ ಕೋಝಿಕ್ಕೋಡ್, ತಿರುವನಂತಪುರಂ ಹಾಗೂ ಎರ್ನಾಕುಳಂ ಈ ಬಾರಿ ಯು.ಡಿ.ಎಫ್. ಪಾಲಾಗಿದೆ.

ಕೊಟ್ಟಾಯಂನಲ್ಲಿ ಯುವ ಕಾಂಗ್ರೆಸ್‌ನ ಮಾಜಿ ಅಖಿಲ ಭಾರತ ಅಧ್ಯಕ್ಷ ರಮೇಶ್ ಚೆನ್ನಿತಲಾ ಕಳೆದ ಬಾರಿ 67048 ಮತಗಳಿಂದ ಗೆದ್ದಿದ್ದರು. ಈ ಬಾರಿ ಸಿ.ಪಿ.ಐ(ಎಂ)ನ ಸುರೇಶ್ ಕುರುಪ್ 5446 ಮತಗಳಿಂದ ಗೆದ್ದಿದ್ದಾರೆ.

ಅಡೂರು(ಮೀಸಲು) ಕ್ಷೇತ್ರದಲ್ಲಿ ಕಳೆದ ಬಾರಿ ಕಾಂಗ್ರೆಸ್(ಐ) ಅಭ್ಯರ್ಥಿ 66270 ಮತಗಳಿಂದ ಗೆದ್ದಿದ್ದರು. ಈ ಬಾರಿ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೋಡಿಕುನ್ನಿನ್ ಸುರೇಶ್‌ರವರನ್ನು ಸಿ.ಪಿ.ಐ. ಅಭ್ಯರ್ಥಿ ಚಂಗರಾ ಸುರೇಂದ್ರನ್ 17005 ಮತಗಳಿಂದ ಸೋಲಿಸಿದ್ದಾರೆ.

ರಾಜಧಾನಿ ತಿರುವನಂತಪುರಂನಲ್ಲಿ ಎಲ್.ಡಿ.ಎಫ್. ಕಳೆದ ಬಾರಿ 20802 ಮತಗಳಿಂದ ಗೆದ್ದಿತ್ತು. ಈ ಬಾರಿ ಮಾಜಿ ಮುಖ್ಯ ಮಂತ್ರಿ ಕೆ. ಕರುಣಾಕರನ್ ಸಿ.ಪಿ.ಐ.ನ ಕೆ.ವಿ. ಸುರೇಂದ್ರನಾಥ್ ಅವರನ್ನು 20802 ಮತಗಳಿಂದ ಸೋಲಿಸಿದ್ದಾರೆ.

ಕಾಂಗ್ರೆಸ್(ಐ) ಕೋಟೆಯೆಂದೇ ಎನಿಸಿಕೊಂಡ ಎರ್ನಾಕುಳಂನಲ್ಲಿ ಕಳೆದ ಬಾರಿ ಸಿ.ಪಿ.ಐ(ಎಂ)ನ ಬೆಂಬಲಿತ ಪಕ್ಷೇತರ ಅಭ್ಯರ್ಥಿ ಕ್ಸೇವಿಯರ್ ಅರಕ್ಕಲ್ ಉತ್ತಮ ಅಂತರದಿಂದ ಗೆದ್ದಿದ್ದರು. ಅವರ ನಿಧನದ ನಂತರ ಕಳೆದ ವರ್ಷ ನಡೆದ ಉಪ ಚುನಾವಣೆಗಳಲ್ಲಿ ಎಲ್.ಡಿ.ಎಫ್. ಅದನ್ನು ಉಳಿಸಿಕೊಂಡಿತ್ತು. ಆದರೆ ಈ ಬಾರಿ ಅದು ಮತ್ತೆ ಯು.ಡಿ.ಎಫ್. ಪಾಲಾಗಿದೆ.

ಅದೇ ವೇಳೆಗೆ ಕಾಂಗ್ರೆಸ್(ಐ) ಕೋಟೆಗಳೆನಿಸಿದ ಕಣ್ಣೂರು, ಮುಕುಂದಪುರಂ ಹಾಗೂ ಮಾವೇಲಿಕರದಲ್ಲಿ ಎಲ್.ಡಿ.ಎಫ್. ಭಾರೀ ಸವಾಲು ಒಡ್ಡಿದೆ. ಇಬ್ಬರು ಮಾಜಿ ಕಾಂಗ್ರೆಸ್(ಐ) ಮಂತ್ರಿಗಳು ಪಿ.ಜೆ. ಕುರಿಯನ್(ಮಾವೇಲಿಕರ) ಹಾಗೂ ಎಂ. ರಾಮಚಂದ್ರನ್(ಕಣ್ಣೂರು) ಅತಿ ಕಡಿಮೆ ಅಂತರದಿಂದ ಗೆದ್ದರು. ಕಳೆದ ಬಾರಿ 22078 ಹೆಚ್ಚು ಮತಗಳನ್ನು ಪಡೆದ ಕುರಿಯನ್‌ರ ಅಂತರವನ್ನು ಈ ಬಾರಿ ಕೇವಲ 1261ಕ್ಕಿಳಿಸುವಲ್ಲಿ ಎಲ್.ಡಿ.ಎಫ್. ಬೆಂಬಲಿತ ಪಕ್ಷೇತರರು ಹಾಗೂ ಪ್ರಸಿದ್ಧ ಮಾನವ ಹಕ್ಕು ಪ್ರತಿಪಾದಕರಾದ ಪ್ರೊ॥ ನೈನನ್ ಕೋಶಿ ಸಮರ್ಥರಾದರು. ಅದೇ ರೀತಿ ರಾಜ್ಯ ಆರೋಗ್ಯ ಮಂತ್ರಿ ಹಾಗೂ ಎಲ್.ಡಿ.ಎಫ್. ಅಭ್ಯರ್ಥಿ ಎ.ಬಿ.ಶಣ್ಮುಗದಾಸ್ ರಾಮಚಂದ್ರನ್ ವಿಜಯದ ಅಂತರವನ್ನು 39302 ರಿಂದ ಈ ಬಾರಿ 2180 ಕ್ಕಿಳಿಸಿದ್ದಾರೆ.

ಬಡಗರದಲ್ಲಿ ಸಿಪಿಐ(ಎಂ) ಅಭ್ಯರ್ಥಿ ಪ್ರೊ. ಎ.ಕೆ.ಪ್ರೇಮಜಂ ಕಾಂಗ್ರೆಸ್(ಐ) ಅಭ್ಯರ್ಥಿ ಸುರೇಶ್ ಬಾಬುರವರನ್ನು 59248 ಮತಗಳಿಂದ ಸೋಲಿಸಿದರು. 1996 ರಲ್ಲಿ ಮಾಜಿ ಕೇಂದ್ರ ಮಂತ್ರಿ ಕೆ.ಪಿ.ಉನ್ನಿಕೃಷ್ಣನ್‌ರನ್ನು ಸಿಪಿಐ(ಎಂ)ನ ಓ.ಭರತನ್ 79945 ಮತಗಳಿಂದ ಸೋಲಿಸಿದ್ದರು.

ಕೇರಳದ ಉತ್ತರ ತುದಿಯಲ್ಲಿರುವ ಕಾಸರಗೋಡಿನಲ್ಲಿ ಸಿಪಿಐ(ಎಂ) ಅಭ್ಯರ್ಥಿ ಟಿ.ಗೋವಿಂದನ್ ಮತ್ತೆ ಆಯ್ಕೆಯಾಗಿದ್ದಾರೆ. ಅವರು ಕಾಂಗ್ರೆಸ್(ಐ) ಅಭ್ಯರ್ಥಿಯನ್ನು 48240 ಮತಗಳಿಂದ ಸೋಲಿಸಿದರು. ಇಲ್ಲಿ ಬಿಜೆಪಿ ಅಭ್ಯರ್ಥಿಗೆ 103093 ಮತಗಳು ದೊರೆತವು.

ಮಲಪ್ಪುರಂ ಜಿಲ್ಲೆಯ ಎರಡು ಕ್ಷೇತ್ರಗಳಾದ ಪೊನ್ನಾಣಿ ಹಾಗೂ ಮಂಜೇರಿ ಈ ಬಾರಿಯೂ ಮುಸ್ಲಿಂ ಲೀಗ್ ಪಾಲಾದವು. ಇಡೀ ದಕ್ಷಿಣ ಭಾರತದಲ್ಲಿನ ಏಕೈಕ ಮುಸ್ಲಿಂ ಮಹಿಳಾ ಅಭ್ಯರ್ಥಿ ಸಿಪಿಐನ ಮಿನೂ ಮಮ್ತಾಜ್ 240 217 ಮತಗಳನ್ನು ಪಡೆದು 104244 ಮತಗಳಿಂದ ಸೋತರು.

ಮಂಜೇರಿಯಲ್ಲಿ ಹಿಂದಿನ ಎಂ.ಪಿ.ಗಳಾದ ಇ.ಅಹ್ಮದ್ ಸಿಪಿಐ(ಎಂ) ಅಭ್ಯರ್ಥಿ ಸಲಾವುದ್ದೀನ್‌ರನ್ನು 106069 ಮತಗಳಿಂದ ಸೋಲಿಸಿದರು. ಸಲಾವುದ್ದೀನ್‌ರಿಗೆ 294600 ಮತಗಳು ಸಿಕ್ಕವು. ಸೋಲಿನ ಅಂತರ ಕಳೆದ ಬಾರಿಗಿಂತ ಹೆಚ್ಚಿದೆ.

ಡಿವೈಎಫ್ಐ ಅಧ್ಯಕ್ಷ ಎನ್.ಎನ್.ಕೃಷ್ಣದಾಸ್ ಪಾಲಕ್ಕಾಡ್ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ವಿಜಯದ ಅಂತರವನ್ನು 23069 ರಿಂದ 25022ಕ್ಕೇರಿಸಿದ್ದಾರೆ.

ಈ ಹಿಂದೆ ರಾಷ್ಟ್ರಪತಿ ನಾರಾಯಣನ್ ಪ್ರತಿನಿಧಿಸಿದ್ದ ಒಟ್ಟಪಾಳಂನಲ್ಲಿ ಸಿಪಿಐ(ಎಂ) ನ ಅಭ್ಯರ್ಥಿ ಅಜಯ್‌ಕುಮಾರ್ ಗೆದ್ದಿದ್ದಾರೆ. ಅವರು ಯುಡಿಎಫ್‌ನ ಏಕೈಕ ಮಹಿಳಾ ಅಭ್ಯರ್ಥಿ ಪ್ರೊ ಕೆ.ಕೆ.ವಿಜಯಲಕ್ಷ್ಮಿಯವರನ್ನು 19800 ಮತಗಳಿಂದ ಸೋಲಿಸಿದ್ದಾರೆ.

ತ್ರಿಶೂರ್‌ನಲ್ಲಿ ಸಿಪಿಐನ ವಿ.ವಿ. ರಾಘವನ್ ಮಾಜಿ ಮುಖ್ಯಮಂತ್ರಿ ಕರುಣಾಕರನ್‌ರವರ ಪುತ್ರ ಕೆ.ಮುರುಳೀಧರನ್‌ರವರನ್ನು 18,243 ಮತಗಳಿಂದ ಸೋಲಿಸಿದ್ದಾರೆ.

ಮುಕುಂದಪುರಂನಲ್ಲಿ ಸಿಪಿಐ(ಎಂ)ನ ಪ್ರಮುಖ ಸಿದ್ಧಾಂತಿ ಹಾಗೂ ಚಲನಚಿತ್ರ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಪಿ.ಗೋವಿಂದ ಪಿಳ್ಳೆ ಕೇವಲ 9415 ಮತಗಳಿಂದ ಸೋತರು. ಕಳೆದ ಬಾರಿ ಕಾಂಗ್ರೆಸ್(ಐ) ಅಭ್ಯರ್ಥಿ ಎ.ಸಿ.ಜೋಸ್ ಈ ಸ್ಥಾನವನ್ನು 24757 ಮತಗಳಿಂದ ಗೆದ್ದಿದ್ದರು.

ಮುವತ್ತುಪುಳಾದಲ್ಲಿ ಕಾಂಗ್ರೆಸ್(ಐ) ತನ್ನ ಸ್ಥಾನ ಉಳಿಸಿಕೊಂಡಿದೆ. ಆದರ ವಿಜಯದ ಅಂತರ 121809 ರಿಂದ 113809 ಕ್ಕಿಳಿದಿದೆ. ಇಲ್ಲಿ ಜನತಾದಳದ ಮ್ಯಾಥ್ಯೂಜಾನ್ ಎಲ್.ಡಿ.ಎಫ್. ಅಭ್ಯರ್ಥಿಯಾಗಿದ್ದರು.

ಇಡುಕ್ಕಿಯಲ್ಲಿ ಕಾಂಗ್ರೆಸ್(ಐ) ಅಭ್ಯರ್ಥಿಯ ಗೆಲುವಿನ ಅಂತರ 30140 ರಿಂದ ಈ ಬಾರಿ 6258 ಕ್ಕಿಳಿದಿದೆ.

ಆದರೆ ಅಲ್ಲಪುಳಾದಲ್ಲಿ ಯು.ಡಿ.ಎಫ್. ಅಭ್ಯರ್ಥಿ ಹಾಗೂ ಮಾಜಿ ಸ್ಪೀಕರ್ ಎ.ಎಂ.ಸುಧೀರನ್ ತಮ್ಮ ವಿಜಯದ ಅಂತರವನ್ನು 22949 ರಿಂದ 40647 ಕ್ಕೇರಿಸಿಕೊಂಡಿದ್ದಾರೆ.

ಸಿಪಿಐ(ಎಂ) ಅಭ್ಯರ್ಥಿ ಹಾಗೂ ಮಾಜಿ ಸ್ಪೀಕರ್ ವರ್ಕಳಾ ರಾಧಾಕೃಷ್ಣನ್ ಚಿರ್‍ಯಾಂಕಿಲ್‌ನಲ್ಲಿ ಕಾಂಗ್ರೆಸ್(ಐ) ಪ್ರಧಾನ ಕಾರ್ಯದರ್ಶಿ ಎ.ಎಂ.ಹಸನ್‌ರವರನ್ನು 7542 ಮತಗಳಿಂದ ಸೋಲಿಸಿದರು. ಕಳೆದ ಬಾರಿ ಸಿಪಿಐ(ಎಂ) ನ ಎ.ಸಂಪತ್ ಇಲ್ಲಿ 40,000 ಮತಗಳಿಂದ ಗೆದ್ದಿದ್ದರು. ಇಲ್ಲಿ ಬಿಜೆಪಿಗೆ 47249 ಮತಗಳು ದೊರೆತವು. ತಿರುವನಂತಪುರದಲ್ಲಿ ಬಿಜೆಪಿಗೆ 94303 ಮತಗಳು ದೊರೆತವು.

ಮಾಲಾ, ಚತನೂರು ಹಾಗೂ ವೈಕಾಂನಲ್ಲಿ ಎಲ್.ಡಿ.ಎಫ್. ತನ್ನ ವಿಧಾನಸಭಾ ಸ್ಥಾನಗಳನ್ನು ಉಳಿಸಿಕೊಂಡಿದೆ.

(ಐಎನ್‌ಎಸ್)

	ಗೆದ್ದದ್ದು	96ಕ್ಕೆ ಹೋಲಿಕೆ
ಪಶ್ಚಿಮ ಬಂಗಾಳ		
ಒಟ್ಟು ಸ್ಥಾನಗಳು 42		
ಸಿಪಿಐ(ಎಂ)	24	+1
ಸಿಪಿಐ	3	0
ಆರ್.ಎಸ್.ಪಿ.	4	0
ಫಾರ್ವರ್ಡ್‌ಬ್ಲಾಕ್	2	1
ಎಡರಂಗ ಒಟ್ಟು	33	0
ತೃಣಮೂಲ ಕಾಂಗ್ರೆಸ್	7	+7
ಬಿಜೆಪಿ	1	+1
ಕಾಂಗ್ರೆಸ್	1	8
ಕೇರಳ		
ಒಟ್ಟು ಸ್ಥಾನಗಳು 20		
ಕಾಂಗ್ರೆಸ್	8	+1
ಮುಸ್ಲಿಂ ಲೀಗ್	2	0
ಕೇರಳ ಕಾಂಗ್ರೆಸ್(ಮಣಿ)	1	0
ಯುಡಿಎಫ್ ಒಟ್ಟು	11	+1
ಸಿಪಿಎಂ	6	+1
ಸಿಪಿಐ	2	0
ಆರ್‌ಎಸ್‌ಪಿ	1	0
ಎಲ್‌ಡಿಎಫ್ ಒಟ್ಟು	9	-1
ತ್ರಿಪುರಾ		
ಒಟ್ಟು ಸ್ಥಾನಗಳು 2		
ಸಿಪಿಐ(ಎಂ)	2	
ಕಾಂಗ್ರೆಸ್	0	0
ತಮಿಳುನಾಡು		
ಒಟ್ಟು ಸ್ಥಾನಗಳು 39		
ಎಐಡಿಎಂಕೆ	18	+18
ಪಿಎಂಕೆ	4	+4
ಎಂಡಿಎಂಕೆ	3	+3
ಬಿಜೆಪಿ	3	+3
ಜೆಪಿ	1	+1
ಡಿಎಂಕೆ	5	-12
ಟಿಎಂಸಿ	3	-17
ಸಿಪಿಐ	1	-1
ಕಾಂಗ್ರೆಸ್	1	+1
ಆಂಧ್ರಪ್ರದೇಶ		
ಒಟ್ಟು ಸ್ಥಾನಗಳು 42		
ಕಾಂಗ್ರೆಸ್	22	+1
ತೆಲುಗುದೇಶ	12	-5
ಸಿಪಿಐ	2	-1
ಜನತಾದಳ	1	0
ಬಿಜೆಪಿ	4	+4
ಎಐಎಂಐಎಂ	1	+1
ಅಸ್ಸಾಂ		
ಒಟ್ಟು ಸ್ಥಾನಗಳು 14		
ಕಾಂಗ್ರೆಸ್	10	+5
ಬಿಜೆಪಿ	1	0
ಎಎಸ್‌ಡಿಸಿ	1	
ಯುಎಂಎಫ್	1	
ಪಕ್ಷೇತರ	1	
ಬಿಹಾರ		
ಒಟ್ಟು ಸ್ಥಾನಗಳು 54		
ಬಿಜೆಪಿ	19	+1
ಸಮತಾ	10	+4
ಆರ್‌ಜೆಡಿ	17	+17
ಕಾಂಗ್ರೆಸ್	5	+3
ಆರ್‌ಜೆಪಿ	1	+1
ಜನತಾದಳ	1	-20
(ಒಂದು ಸ್ಥಾನದಲ್ಲಿ ಮತದಾನ ನಡೆದಿಲ್ಲ)		
ಕರ್ನಾಟಕ		
ಒಟ್ಟು ಸ್ಥಾನಗಳು 28		
ಬಿಜೆಪಿ	13	+7
ಲೋಕಶಕ್ತಿ	3	+3
ಕಾಂಗ್ರೆಸ್	9	+4
ಜನತಾದಳ	3	-13



ಒಂದೇ ಬಾರಿ ಸಾಕೆಂದರು ಬಿಜೆಪಿ ಆಳ್ವಿಕೆ ಕಂಡ ಜನ

ಈಬಾರಿ ಅಲ್ಲದಿದ್ದರೆ ಮತ್ತೆಂದೂ ಇಲ್ಲ. ಎಂದು ಗೋಗರೆಯುತ್ತಾ ಜನರ ಸಹಾನುಭೂತಿ ಗಳಿಸುವತ್ತಲೇ ಪ್ರಚಾರವನ್ನು ಕೇಂದ್ರೀಕರಿಸಿದ ಭಾರತೀಯ ಜನತಾಪಕ್ಷ ಈ ಬಾರಿ ಹತ್ತಾರು ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡರೂ ಬೆಹಲಿಗದ್ದುಗೆ ಏರಲು ಇನ್ನೂ ಒಂದಿಷ್ಟು ಕಸರತ್ತು ಮಾಡಬೇಕಾದ ಪರಿಸ್ಥಿತಿಯನ್ನು ಎದುರಿಸುತ್ತಿದೆ.

ಲೋಕಸಭೆಯಲ್ಲಿ ಸರಳ ಬಹುಮತಕ್ಕೆ ಅಗತ್ಯವಾದ ಚಮತ್ಕಾರಿಕ ಸಂಖ್ಯೆ 273 ನ್ನು ತಲುಪಲು, ಅದು ಹತ್ತಾರು ಪಕ್ಷಗಳ ಬೆಂಬಲದ ಹೊರತಾಗಿಯೂ ಬಿಜೆಪಿಗೆ ಸಾಧ್ಯವಾಗಿಲ್ಲದಿರುವುದು ಅದರ ಕೋಮುವಾದಿ ರಾಜಕೀಯವನ್ನು ಭಾರತದ ಜನತೆ ತಿರಸ್ಕರಿಸಿರುವುದರ ಸಂಕೇತವಾಗಿದೆ.

ಈಗ ಸರಳ ಬಹುಮತಕ್ಕೆ 20 ಸ್ಥಾನಗಳಿಂದ ದೂರವಿರುವ ಬಿಜೆಪಿ ವಾಸ್ತವವಾಗಿ ಅದು ಸ್ವಂತವಾಗಿ ಮತ್ತು ಮಿತ್ರ ಪಕ್ಷಗಳೊಂದಿಗೆ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಹಿಂದಿನ ಸೋಲನ್ನ ಅನುಭವಿಸಿರುವುದು ತನಗೆ ದೇಶದೆಲ್ಲೆಡೆ ಅಭೂತಪೂರ್ವ ಬೆಂಬಲವಿದೆ ಎಂಬ ಈ ಪಕ್ಷದ ಬಡಾಯಿ ಎಷ್ಟು ಟೊಳ್ಳು ಎನ್ನುವುದನ್ನು ಸಾಭೀತು ಪಡಿಸುತ್ತದೆ.

ಬಿಜೆಪಿ ಕರ್ನಾಟಕದಲ್ಲಿ 13, ಆಂಧ್ರ ಪ್ರದೇಶದಲ್ಲಿ 4 ಮತ್ತು ತಮಿಳುನಾಡಿನಲ್ಲಿ 3 ಸ್ಥಾನಗಳನ್ನು ಗಳಿಸದೆ ಇಲ್ಲದಿದ್ದರೆ ಈ ಪಕ್ಷದ ಪರಿಸ್ಥಿತಿ ಇನಷ್ಟು ದಯಾನೀಯ ಆಗಿರುತ್ತಿತ್ತು ಎನ್ನುವುದರಲ್ಲಿ ಸಂಶಯವೇ ಇಲ್ಲ. ಮಹಾರಾಷ್ಟ್ರ, ರಾಜಸ್ಥಾನ, ಹರಿಯಾಣ ಮೊದಲಾದ ರಾಜ್ಯಗಳಲ್ಲಿ ಈ ಪಕ್ಷ ಕಳಕೊಂಡ ಸ್ಥಾನಗಳು ದಕ್ಷಿಣದ ಒಂದೆರಡು ರಾಜ್ಯಗಳಲ್ಲಿ ಬಂದಿಲ್ಲವಾದರೆ ಅದರ ಸ್ಥಿತಿ ಅಧೋಗತಿ ಆಗುತ್ತಿತ್ತು ಎನ್ನುವುದರಲ್ಲಿ ಅನುಮಾನವಿಲ್ಲ.

ಮಿತ್ರ ಪಕ್ಷಗಳ 'ಆಸರೆ'ಯಿಲ್ಲದಿದ್ದರಂತು ಈ 250 ರ ಗಡಿಯನ್ನು ತಲುಪುವುದು ಕೂಡಾ ಅದಕ್ಕೆ ಆಗುತ್ತಿರಲಿಲ್ಲ.

ಬಿಜೆಪಿಗೆ ಹಿನ್ನಡೆ ಆಗಿರುವುದರ ರಾಜ್ಯಗಳ ಫಲಿತಾಂಶದ ಒಂದು ಪಕ್ಷಿನೋಟ ಇಲ್ಲಿ ಕೊಡಲಾಗಿದೆ.

ಒಡೆದು ಹೋದ ಶಿವಸೇನೆ-ಬಿ.ಜೆ.ಪಿ. ಬಲೂನು

ಮಹಾರಾಷ್ಟ್ರದಲ್ಲಿ ಆಡಳಿತ ನಡೆಸುತ್ತಿರುವ ಮಹಾರಾಷ್ಟ್ರ ಮರಾಠಿಗರಿಗಷ್ಟೇ ಎಂಬ ಮಣ್ಣಿನಮಗನ ವಾದ ಪ್ರತಿಪಾದಿಸುವ ಕೋಮುವಾದಿ ಶಿವಸೇನೆ ಹಾಗೂ ಹಿಂದೂ ಕೋಮುವಾದಿ ಬಿ.ಜೆ.ಪಿ. ಕೂಟ, ಈ ಬಾರಿ ಲೋಕಸಭೆ ಚುನಾವಣೆಯಲ್ಲಿ ಭಾರೀ ಸೋಲನ್ನು ಅನುಭವಿಸಿದೆ.

ರಾಜ್ಯದಲ್ಲಿ ಒಟ್ಟು48 ಲೋಕಸಭಾ ಕ್ಷೇತ್ರಗಳಿದ್ದು, ಕಳೆದ ಚುನಾವಣೆಯಲ್ಲಿ ಈ ಕೂಟ 33 ಸ್ಥಾನಗಳನ್ನು ಗೆದ್ದಿತ್ತು. ಆದರೆ ಈ ಬಾರಿ ಅದು ಕೇವಲ 11 ಸ್ಥಾನಗಳಿಗೆ ತೃಪ್ತಿಪಡ ಬೇಕಾಗಿದೆ. ಇಲ್ಲಿನ ಕಾಂಗ್ರೆಸ್ ಪಕ್ಷ ಈ ಕೇಸರಿ ಪಡೆಯ ಮೇಲೆ ಸ್ಪಷ್ಟ ಮೇಲುಗೈ ಸಾಧಿಸಿ ಜಯಭೇರಿ ಬಾರಿಸಿದೆ.

ಈ ಸಲ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್, ಸಮಾಜವಾದಿ ಪಕ್ಷ ಮತ್ತು ರಿಪಬ್ಲಿಕನ್ ಪಕ್ಷ(ಆರ್.ಪಿ.ಐ.) ಮೈತ್ರಿ ಮಾಡಿಕೊಂಡಿದ್ದವು. ಸಮಾಜವಾದಿ ಪಕ್ಷಕ್ಕೆ ಒಂದು ಸ್ಥಾನದಲ್ಲಿ ಕೂಡಾ ಗೆಲ್ಲಲು ಸಾಧ್ಯವಾಗದಿದ್ದರೂ ಶಿವಸೇನೆ-ಬಿ.ಜೆ.ಪಿ. ಕೂಟಕ್ಕೆ ಮಣ್ಣು ಮುಕ್ಕಿಸುವ ದಿಸೆಯಲ್ಲಿ ಅಲ್ಪ ಸಂಖ್ಯಾತರು ಹಾಗೂ ದಲಿತರ ಮತಗಳನ್ನು ಕ್ರೋಡೀಕರಿಸುವಲ್ಲಿ ಅದು ತೀರಾ ನೆರವಾಯಿತು.

40 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ ಪಕ್ಷ 30 ಕ್ಷೇತ್ರಗಳಲ್ಲಿ ಜಯ ಸಾಧಿಸಿದೆ. ನಾಲ್ಕರಲ್ಲಿ ಸ್ಪರ್ಧೆಗಿಳಿದಿದ್ದ ಆರ್.ಪಿ.ಐ. 4 ಕ್ಷೇತ್ರಗಳಲ್ಲಿ ಗೆದ್ದಿದೆ. ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದ್ದಿದ್ದ ಮಹಾತ್ಮಗಾಂಧಿ ಮರಿಮೊಮ್ಮಗ, ಸಾಮಾಜಿಕ ಕಾರ್ಯಕರ್ತ ತುಷಾರ್ ಗಾಂಧಿ ಅತ್ಯಂತ ಕಡಿಮೆ ಮತಗಳ ಅಂತರದಿಂದ ಸೋತಿದ್ದಾರೆ.

ಹಿಂದೂ ಮತಾಂಧ ಶಕ್ತಿಗಳಿಗೆ ಒಂದು ನೆಲೆಯಂತಿದ್ದ ಮಹಾರಾಷ್ಟ್ರದ ಜನರು ಆ ಶಕ್ತಿಗಳಿಗೆ ಈ ಚುನಾವಣೆಯಲ್ಲಿ ಪಾಠ ಕಲಿಸಿದ್ದಾರೆ. ಬಹುತೇಕ ಕ್ಷೇತ್ರಗಳಲ್ಲಿ ಬಿ.ಜೆ.ಪಿ. -ಶಿವಸೇನೆ ಅಭ್ಯರ್ಥಿಗಳಿಗೆ ಸೋಲನ್ನು ಉಣ್ಣಿಸಿರುವುದಲ್ಲದೆ ಗೆದ್ದ ಕಡೆಯೂ ಅವರಿಗೆ ಭಾರೀ ಬಹುಮತ ಅಂತರವೇನೂ ಒದಗಿಸಿಲ್ಲ.

ಉದಾಹರಣೆಗೆ ಮುಂಬಯಿ ದಕ್ಷಿಣ ಮಧ್ಯ ಕ್ಷೇತ್ರವನ್ನು ತೆಗೆದುಕೊಳ್ಳೋಣ. ಅಲ್ಲಿ ಶಿವಸೇನೆಯ ಅಭ್ಯರ್ಥಿ ಮೋಹನಟ್ಲೆ ಗೆದ್ದಿದ್ದಾರೆ. ಆದರೆ ಗೆಲುವಿನ ಅಂತರ ಎಷ್ಟು ಗೊತ್ತೇ? ಕೇವಲ 152 ಮತಗಳು. ಅಂದರೆ ಕೂದಲೆಳೆಯ ಅಂತರದಿಂದ ಶಿವಸೇನೆ ಇಲ್ಲಿ ಗೆದ್ದಿದೆ.

ಮಹಾರಾಷ್ಟ್ರ

ಆಳುವ ಕೋಮುವಾದಿ ಶಿವಸೇನೆ-ಬಿ.ಜೆ.ಪಿ. ಕೂಟದ ಬಗ್ಗೆ ಜನರಲ್ಲಿರುವ ಅತೃಪ್ತಿಯ ಮನೋಭಾವದ ತೀವ್ರತೆ ಮೀರಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ.

ಸೋಲಿನ ಆಘಾತ

ತಮ್ಮದು ಅಲುಗಾಡಿಸಲಾಗದ ಭದ್ರ ಮೈತ್ರಿ ಕೂಟ, ಯಾರಿಗೂ ಏನನ್ನೂ ಮಾಡಲಾಗದು ಎಂಬ ಭ್ರಮೆಯಲ್ಲಿ ತೇಲುತ್ತಿದ್ದ ಶಿವಸೇನೆ-ಬಿ.ಜೆ.ಪಿ. ಕೂಟಕ್ಕೆ ಚುನಾವಣೆಯ ಫಲಿತಾಂಶ ಆಘಾತಕಾರಿ ಹೊಡೆತವೇ ಆಗಿದೆ. ಮತ ಎಣಿಕೆಯ ಮೊದಲ ದಿನವಾದ ಮಾರ್ಚ್ 2ರ ಸಂಜೆಯೇ ಚಿತ್ರಣ ಸ್ಪಷ್ಟವಾಗತೊಡಗಿದ್ದು. ಕೇಸರಿ ಪಡೆಯ ವಲಯದಲ್ಲಿ ಮಂಕು ಕವಿದಿತ್ತು.

ಕರಾಳ ಮೌನದ ಗಾಢತೆ ಎಷ್ಟಿತ್ತೆಂದರೆ ಮುಖ್ಯಮಂತ್ರಿ ಮನೋಹರ ಜೋಷಿ ಮತ್ತು ಶಿವಸೇನೆ ಮುಖ್ಯಸ್ಥ ಬಾಳಠಾಕ್ರೆ ಮಾಧ್ಯಮದವರೊಂದಿಗೆ ಮಾತ ನಾಡುವುದನ್ನೇ ತಪ್ಪಿಸಿಕೊಂಡು ಬಿಟ್ಟಿದ್ದರು. ಕೂಟದ ಸೌಧ ಕುಸಿದು ಬೀಳುತ್ತಿರುವ ಬಗ್ಗೆ ಶಿವಸೇನೆ ನಾಯಕ ಠಾಕ್ರೆ ರಿಸೀವ್ ಮಾಡಿದ ಮೊದಲ ಫೋನ್ ಕರೆಯೆಂದರೆ ಬಹುಶಃ ಮಾಜಿ ಮುಖ್ಯ ಚುನಾವಣಾ ಆಯುಕ್ತ ಟಿ.ಎನ್. ಶೇಷನ್ ಅವರದು. ಇನ್ನುಳಿದಂತೆ ಬಹುಹೊತ್ತು ಯಾರೂ ತುಟಿಪಿಟಿಕ್ ಎಂದಿರಲಿಲ್ಲ.

ರಾಜಿನಾಮೆ ನಾಟಕ

ಚುನಾವಣೆ ಫಲಿತಾಂಶಗಳ ವಿವರ ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದಂತೆ ಮಹಾರಾಷ್ಟ್ರದಲ್ಲಿ ಅನುಭವಿಸಿದ ಸೋಲಿನ ಹಿನ್ನೆಲೆಯಲ್ಲಿ ಮನೋಹರ ಜೋಷಿ (ಶಿವಸೇನೆ) ರಾಜಿನಾಮೆ ನೀಡಲಿದ್ದಾರೆ ಎಂಬ ಸುದ್ದಿಯೂ ಪ್ರಸಾರವಾಯಿತು. ಆದರೆ ಇದು ಕೇವಲ ಒಂದು ನಾಟಕ ಎಂಬುದು ಆಮೇಲೆ ಗೊತ್ತಾಯಿತು.

ಜೋಷಿ ರಾಜಿನಾಮೆ ಕೊಡಲು ಮುಂದಾಗಿದ್ದೇನೋ ಹೌದು? ಆದರೆ ಅವರು ರಾಜ್ಯದ ರಾಜ್ಯಪಾಲರಿಗೇನೂ ರಾಜಿನಾಮೆ ಪತ್ರವನ್ನು ಕಳಿಸಿರಲಿಲ್ಲ. ಪಕ್ಷದ ಮುಖ್ಯಸ್ಥ ಬಾಳಠಾಕ್ರೆ ಜೊತೆ ಈ ಪ್ರಸ್ತಾವವನ್ನು ಮುಂದಿಟ್ಟಿದ್ದರು ಅಷ್ಟೆ. ಒಂದು ವೇಳೆ ಜನತೆಯ ವಿಶ್ವಾಸವನ್ನು ಕಳೆದುಕೊಂಡಿದ್ದಕ್ಕೆ ನಿಜವಾಗಿಯೂ ನೈತಿಕತೆಯ ಆಧಾರದಲ್ಲಿ ಪದತ್ಯಾಗ ಮಾಡುವುದಾದರೆ ಜೋಷಿ ತಮ್ಮ ರಾಜಿನಾಮೆ ಪತ್ರವನ್ನು ನೇರವಾಗಿ ರಾಜ್ಯಪಾಲರಿಗೆ ಕಳುಹಿಸುತ್ತಿದ್ದರು. ಹಾಗೇನಾದರೂ ಕಳಿಸಿದ್ದೇ ಆದಲ್ಲಿ ರಾಜ್ಯಪಾಲರು ರಾಜಿನಾಮೆಯನ್ನು ಅಂಗೀಕರಿಸಿಬಿಟ್ಟರೆ ಗತಿಯೇನು ಎಂಬ ಭೀತಿ ಜೋಷಿಯನ್ನು ಕಾಡಿರಬಹುದೇ. 'ಅಕ್ಕಿ ಮೇಲೆ ಪ್ರೀತಿ ನೆಂಟರ ಮೇಲೆ ಇಷ್ಟ' ಎಂಬಂತಾಗಿರಬಹುದು ಅವರ ಸ್ಥಿತಿ ಅಲ್ಲವೇ?

ನೆಲಕಚ್ಚಿದ ಎಚ್.ವಿ.ಪಿ.-ಬಿಜೆಪಿ ಮೈತ್ರಿಕೂಟ

ಪುಟ್ಟದಾದರೂ ರಾಜಕೀಯ ಕಾರಣಗಳಿಗಾಗಿ ಯಾವಾಗಲೂ ರಾಷ್ಟ್ರದ ಗಮನ ಸೆಳೆಯುತ್ತಿರುವ ರಾಜ್ಯ ಹರ್ಯಾಣ. ಅಲ್ಲಿರುವುದು ಬನ್ಸಿಲಾಲ್ ನೇತೃತ್ವದ ಹರ್ಯಾಣ ವಿಕಾಸ್ ಪಕ್ಷ(ಹೆಚ್‌ವಿಪಿ) ಮತ್ತು ಬಿಜೆಪಿ ಮೈತ್ರಿಕೂಟ.

1996 ರ ಚುನಾವಣೆಗಳಲ್ಲಿ ಏಳು ಸ್ಥಾನಗಳಲ್ಲಿ ಗೆದ್ದಿದ್ದ ಈ ಪಕ್ಷಗಳ ಕೂಟ ಈಗ ಕೇವಲ ಎರಡರಲ್ಲಿ ಜಯಗಳಿಸಲಷ್ಟೇ ಶಕ್ತವಾಗಿದೆ. ಅಂದರೆ ಎಚ್.ವಿ.ಪಿ.-ಬಿಜೆಪಿ ಕೂಟ ಹರ್ಯಾಣದಲ್ಲಿ ಪೂರ್ಣಮಣ್ಣು ಮುಕ್ಕಿದೆ. ಎಚ್‌ವಿಪಿಗೆ ಒಂದು, ಬಿಜೆಪಿಗೆ ಒಂದು ಸ್ಥಾನ ಮಾತ್ರ ದಕ್ಕಿದೆ. ಜಯಗಳಿಸಿದ ಈ ಎರಡು ಕ್ಷೇತ್ರಗಳಲ್ಲಿ ಕೂಡ ಗೆದ್ದವರ ಜಯದ ಮತಗಳ ಅಂತರ ಕೂಡಾ ತುಂಬಾ ಜಾಸ್ತಿಯೇನೂ ಇಲ್ಲ.

ಹರ್ಯಾಣ

ಈಚಿನ ಕೆಲವು ತಿಂಗಳಲ್ಲಿ ತಮ್ಮ ನ್ಯಾಯ ಸಮ್ಮತ ಪ್ರಶ್ನೆಗಳನ್ನು ಮುಂದಿಟ್ಟು ಕೊಂಡು ಹೋರಾಟ ನಡೆಸುತ್ತಿದ್ದ ಕಾರ್ಮಿಕರು ಹಾಗೂ ಇತರ ಜನ ಸಮುದಾಯದ ಮೇಲೆ ದಬ್ಬಾಳಿಕೆ ಹರಿಯಬಿಟ್ಟ ಅಪವಿತ್ರ ಮೈತ್ರಿಕೂಟ ಪರಾಜಯದ ಫಲವನ್ನು ಅರ್ಹವಾಗಿಯೇ ಅನುಭವಿಸಿದೆ.

ಹರ್ಯಾಣದಲ್ಲಿ ದೇವಿಲಾಲ್ ಸ್ಥಾಪಿತ ಹರ್ಯಾಣ ಲೋಕದಳ(ರಾಷ್ಟ್ರೀಯ) (ಹೆಚ್ ಎಲ್‌ಡಿ-ಆರ್) ಮತ್ತು ಬಹುಜನ ಸಮಾಜ ಪಕ್ಷ ಐದು ಸ್ಥಾನಗಳಲ್ಲಿ ಜಯಶಾಲಿ ಯಾಗಿದೆ. ಉಳಿದ ಮೂರರಲ್ಲಿ ಕಾಂಗ್ರೆಸ್ ಗೆದ್ದಿದೆ.

ಬಿಕ್ಕಟ್ಟು ಸಂಭವ

ಇದೀಗ ರಾಜ್ಯದಲ್ಲಿ 5 ಸ್ಥಾನ ಗೆದ್ದಿರುವ ಹರ್ಯಾಣ ಲೋಕದಳ ನಾಯಕ ಓಂ ಪ್ರಕಾಶ್ ಚೌತಾಲ ಕೇಂದ್ರದಲ್ಲಿ ಬಿಜೆಪಿ ತನ್ನ ಪಕ್ಷದ ಬೆಂಬಲವನ್ನು ಸಾರಿದ್ದಾರೆ. ಆದರೆ ಅವರು ಇದಕ್ಕೆ ಒಂದು ಶರತ್ತನ್ನು ಒಡ್ಡಿದ್ದಾರೆ ಎನ್ನಲಾಗಿದೆ. ಕೇಂದ್ರದಲ್ಲಿ ಬಿಜೆಪಿಗೆ ಅಧಿಕಾರಕ್ಕೆ ಬಂದರೆ ವಿಹೆಚ್‌ಪಿ ನೇತೃತ್ವದ ಸರಕಾರವನ್ನು ವಜಾ ಮಾಡಬೇಕೆನ್ನುವುದೇ ಈ ಷರತ್ತು ಆಗಿದೆ. ಒಟ್ಟಿನಲ್ಲಿ ಬಿಜೆಪಿ ಹಾಗೂ ಹೆಚ್‌ವಿಪಿ ಮೊದಲೇ ಸೋತು ಸುಣ್ಣ ವಾಗಿರುವುದರ ಜತೆಯಲ್ಲಿ ಇಂಥ ಸನ್ನಿವೇಶ ದಿಂದಾಗಿ ಇನ್ನೂ ಇಕ್ಕಟ್ಟಿನ ಸ್ಥಿತಿಗೆ ತಲುಪಿದೆ. ಮೈತ್ರಿ ಕೂಟದಲ್ಲಿ ಬಿಕ್ಕಟ್ಟು ಉಂಟಾಗಿರುವ ಸಂಭವವೂ ಇದೆ.

ಮರೀಚಿಕೆಯಾದ ಬಿ.ಜೆ.ಪಿ. ವಿಜಯ

ಬಿ.ಜೆ.ಪಿ. ಅಧಿಕಾರದಲ್ಲಿರುವ ರಾಜ್ಯ ರಾಜಾಸ್ತಾನ. ಮರುಳುಗಾಡಿನ ಈ ನಾಡಿನಲ್ಲಿ ಈ ಭಾರೀ ಬಿ.ಜೆ.ಪಿ.ಯ ವಿಜಯೋತ್ಸವ ಬರೀ ಮರೀಚಿಕೆಯಾಗಿ ಉಳಿಯಿತು. ಕಳೆದ ನಾಲ್ಕು ವರ್ಷಗಳಿಂದ ಬಿ.ಜೆ.ಪಿ. ಈ ರಾಜ್ಯದಲ್ಲಿ ಅಧಿಕಾರದಲ್ಲಿದ್ದು ಅದರ ನೀತಿಗಳಿಂದ ರೋಸಿ ಹೋಗಿರುವ ಜನರು ಕೋಮುವಾದಿ ಪಕ್ಷದ ಸಹವಾಸ ಬೇಡಪ್ಪ ಎಂಬ ಸಂದೇಶವನ್ನು ಸ್ಪಷ್ಟವಾಗಿ ಸಾರಿದ್ದಾರೆ.

ರಾಜ್ಯದಲ್ಲಿ ಒಟ್ಟು 25 ಲೋಕಸಭಾ ಸ್ಥಾನಗಳಿದ್ದು ಕಾಂಗ್ರೆಸ್ 18 ಸ್ಥಾನಗಳಲ್ಲಿ ಜಯಶಾಲಿಯಾಗಿದೆ. ಬಿ.ಜೆ.ಪಿ. ಕೇವಲ 5 ಕ್ಷೇತ್ರಗಳಲ್ಲಿ ಗೆದ್ದಿದೆ. ಇದು ಆಡಳಿತ ಪಕ್ಷಕ್ಕೆ ಭಾರೀ ದೊಡ್ಡ ಹೊಡೆತ ಹಾಗೂ ಮುಖಭಂಗವಾಗಿದೆ. ರಾಜ್ಯ ದಲ್ಲಿ ಸೋತ ಬಿ.ಜೆ.ಪಿ. ಪ್ರಮುಖರಲ್ಲಿ ಗವಹಾಟಿ ಹೈಕೋರ್ಟಿನ ಮಾಜಿ ಮುಖ್ಯ ನ್ಯಾಯಾಧೀಶ ಗುಮಾನ್ ಮಲ್ ಲೋಧ ಸೇರಿದ್ದಾರೆ.

ರಾಜಸ್ಥಾನ

ಆಡಳಿತಾರೂಢ ಪಕ್ಷದ ವಿರುದ್ಧ ಜನಾದೇಶ ಬಂದಿದ್ದರೂ ತಮ್ಮ ಸರಕಾರಕ್ಕೇನೂ ಅಪಾಯವಿಲ್ಲ ಎಂದು ರಾಜಾಸ್ಥಾನದ ಮುಖ್ಯಮಂತ್ರಿ ಭೈರವ್‌ಸಿಂಗ್ ಶೆಖಾವತ್ ಹೇಳಿ ದ್ದಾರೆ. ನಿಗದಿಯಂತೆ ಈ ವರ್ಷದಕೊನೆಯಲ್ಲಿ ಅಸೆಂಬ್ಲಿ ಚುನಾವಣೆ ನಡೆಯಲಿದೆಎಂದಿದ್ದಾರೆ.

ತಮ್ಮ ಪಕ್ಷದ ಅಂದರೆ ಬಿ.ಜೆ.ಪಿ.ಯ ಸೋಲಿಗೆ ಕಾರಣವೇನು ಎಂಬುದನ್ನು "ಶೆಖಾವತ್" ವಿಶ್ಲೇಷಿಸಿದ್ದಾರೆ. ಜಾತಿ ಹಾಗೂ ಕೋಮು ಆಧಾರದ ಮೇಲೆ ಮತ ಯಾಚನೆ, ಆಡಳಿತ ಪಕ್ಷದ ಅಭ್ಯರ್ಥಿಗಳಿಗೆ ಸಂಪನ್ಮೂಲದ ಕೊರತೆ, ಪಕ್ಷೇತರರು ಹಾಗೂ ಇತರರಿಂದ ಭಾರೀ ಹಣದ ಥೈಲಿಯ ಬಳಕೆ ಇವು ಕಾರಣಗಳು ಎಂದು ಅವರು ಹೇಳಿದ್ದಾರೆ!

ಅಬ್ಬ! ಎಂಥಾ ಸಾಚಾ ಪಕ್ಷ ನೀಡುವ ಕಾರಣ ಇವು ಅಲ್ಲವೇ? ತನ್ನ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳಲು ಜಾತಿ ಮತ್ತು ಧರ್ಮಗಳನ್ನು ಬಳಸಿಕೊಳ್ಳುವ ಬಿ.ಜೆ.ಪಿ ಗಿಂತಲೂ ಹೇಯ ಧೋರಣೆಯ ಪಕ್ಷ ಬೇರೊಂದು ಇದೆಯೇ? ಎರಡನೇಯದಾಗಿ ಆಡಳಿತ ಪಕ್ಷಕ್ಕೆ ಹಣದ ಕೊರತೆಯೆಂದರೆ ಯಾರಾದರೂ ನಂಬಲೂ ಸಾಧ್ಯವೇ ಇಲ್ಲ. ಆದರೂ ಬಂಡವಾಳಶಾಹಿ ವರ್ಗದ ಹಿತವನ್ನು ಕಾಪಾಡಲು ಕಟಿ ಬದ್ಧವಾಗಿರುವ ಬಿ.ಜೆ.ಪಿ.ಗೆ ಇಂಥ ದುಸ್ಥಿತಿಯೇ? ಖಂಡಿತಾ ಇಲ್ಲ. ಭಾರತೀಯ ಜನತಾ ಪಕ್ಷ ಕೇಂದ್ರದಲ್ಲಿ ಅಧಿಕಾರದ ಗದ್ದುಗೆಗೆ ಬರ ಬೇಕೆಂಬ ಮಹದಾಸೆಯಿಂದ ದೊಡ್ಡ ದೊಡ್ಡ ಉದ್ಯಮಿಗಳು ಆ ಪಕ್ಷಕ್ಕಾಗಿ ಹಣವನ್ನು ನೀರಿನಂತೆ ಹರಿಸುತ್ತಿರುವುದು ಗುಟ್ಟಿನ ವಿಚಾರವೇನೂ ಅಲ್ಲ.

ಒಟ್ಟಿನಲ್ಲಿ ಜನತೆ ನೀಡಿದ ತೀರ್ಪನ್ನು ಒಪ್ಪಿಕೊಳ್ಳಲಾಗದ ಬಿ.ಜೆ.ಪಿ. ತನ್ನ ಹೀನಾಯ ಸೋಲಿಗೆ ಏನೇನೋ ಕುಂಟುನೆಪಗಳನ್ನು ಹುಡುಕುತ್ತಿದೆ.

ರಥಯಾತ್ರೆ ರೂವಾರಿಯ ಮುಗ್ಗರಿಸಿದ ರಥ

ರಥಯಾತ್ರೆ.....

ಇದು ಭಾರತೀಯ ಜನತಾಪಕ್ಷ ದೇಶದಲ್ಲಿ ಹುಟ್ಟು ಹಾಕಿದ ಒಂದು ಸಂಸ್ಕೃತಿ. ಈ ರಥ ಯಾತ್ರೆಗಳು ಸಂಚರಿಸಿದಲ್ಲೆಲ್ಲ ಕೋಮುವಾದದ ಜ್ವಾಲೆ ಹಬ್ಬಿ ಅದೆಷ್ಟೋ ಮುಗ್ಧ ಜನರು ಬಲಿಯಾಗಿದ್ದಾರೆ. ಜನತೆಯ ನಡುವೆ ಅಪನಂಬಿಕೆಯ ಅಪಾಯಕಾರಿ ಗೋಡೆಯನ್ನೇ ನಿರ್ಮಿಸಿದೆ.

ಅಂದ ಹಾಗೆ ಈಗ ಈ ರಥಯಾತ್ರೆಗಳ ಪ್ರಸ್ತಾಪ ಯಾಕೆ ಅಂದಿರಾ? ಬಿಜೆಪಿಯ ಕೋಮುವಾದಿ ರಥಯಾತ್ರೆಗಳ ರೂವಾರಿ ಪ್ರಮೋದ್ ಮಹಾಜನ್ ಎಂಬ ಆ ಪಕ್ಷದ ಒಬ್ಬ ಮಹಾನ್ ನಾಯಕ. ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಈ ಮುಖಂಡನ ರಥದ ಚಕ್ರಗಳೇ ಮುರಿದು ಬಿದ್ದು ಸಂಸತ್ತನ್ನು ತಲುಪಲು ಅವರು ವಿಫಲರಾಗಿದ್ದಾರೆ.

ಪ್ರಮೋದ್ ಮಹಾಜನ್ ಕಾಂಗ್ರೆಸ್ ಅಭ್ಯರ್ಥಿಯಿಂದ ಪರಾಜಿತರಾಗಿದ್ದಾರೆ. ಪ್ರಮೋದ್ ಮಹಾಜನ್ 1996 ರಲ್ಲಿ ಅಧಿಕಾರ ದಲ್ಲಿದ್ದ 13 ದಿನಗಳ ಬಿಜೆಪಿ ಸರಕಾರದಲ್ಲಿ ರಕ್ಷಣಾಮಂತ್ರಿ ಆಗಿದ್ದರು!

ಮುರಿದು ಬಿದ್ದ ತ್ರಿಶೂಲಗಳು:

ಭಜರಂಗದಳ.......

ಈ ಹೆಸರು ಕೇಳುತ್ತಲೇ ಜಾತ್ಯಾತೀತ ಶಕ್ತಿಗಳಿಗೆ ಅಸಹ್ಯ ಎನಿಸುತ್ತದೆ. ಸಂಘ ಪರಿವಾರದ ಒಂದು ಪ್ರಮುಖ ಸಂಘಟನೆಗಳಲ್ಲಿ ಇದು ಒಂದು. 1992 ಡಿಸೆಂಬರ್ 6 ರಂದು ಅಯೋಧ್ಯೆಯ ಬಾಬರಿ ಮಸೀದಿ ಧ್ವಂಸಗೊಳಿಸುವಲ್ಲಿ ಈ ಕಾರ್ಯಪಡೆಯ ಪಾತ್ರವೂ ಪ್ರಮುಖವಾಗಿದೆ.

ಉತ್ತರ ಪ್ರದೇಶದಲ್ಲಿ ಇದರ ನೆಲೆ ಗಟ್ಟಿ ಆದರೆ ಗಟ್ಟಿ ನೆಲೆಯಲ್ಲೇ ಅದರ ಗಟ್ಟಿಕುಳಗಳೇ ಇದೀಗ ಮುಕ್ತಾಯಗೊಂಡ ಚುನಾವಣೆಯಲ್ಲಿ ಸೋತು ಮಣ್ಣುಮುಕ್ಕಿದ್ದಾರೆ.

ಉತ್ತರ ಪ್ರದೇಶದಲ್ಲಿ ಬಿಜೆಪಿ ಕೋಟೆ ಕಳೆದ ಬಾರಿಯಿದ್ದದ್ದಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಗಳಿಸಿದೆಯೇನೋ ಹೌದು ಆದರೆ ಬಿಜೆಪಿಯ ಅಭ್ಯರ್ಥಿಗಳಾಗಿ ಕಣದಲ್ಲಿದ್ದ ಭಜರಂಗದಳದ ಇಬ್ಬರು ನಾಯಕರು ಸೋತಿರುವುದು ಇಲ್ಲಿ ಗಮನಾರ್ಹ. ಭಜರಂಗದಳದ ಪ್ರಮುಖ ಮುಖಂಡ ವಿನಯ ಕಟಿಯಾರ್ ಫೈಜಾಬಾದ್ ಕ್ಷೇತ್ರದಲ್ಲಿ ಸೋತಿದ್ದಾರೆ. ಇದೇ ರೀತಿ ಈ ದೇಶದ ಇನ್ನೊಬ್ಬ ನಾಯಕ ಸತ್ಯದೇವ ಸಿಂಗ್ ಬಲರಾಂಪುರ ಕ್ಷೇತ್ರದಲ್ಲಿ ಪರಾಜಯ ಹೊಂದಿದ್ದಾರೆ.

'13 ದಿನ'ದ ವಿತ್ತಮಂತ್ರಿಗೆ ಸೋಲು

13 ದಿನ ಬಾಳಿಬದುಕಿದ ಅಟಲ್ ಬಿಹಾರಿ ವಾಜಪೇಯಿ ಸರಕಾರದಲ್ಲಿ ಹಣಕಾಸು ಸಚಿವರಾಗಿದ್ದ ಜಸ್ವಂತ್ ಸಿಂಗ್ ಸೋತಿರುವ ಬಿಜೆಪಿ ಪ್ರಮುಖರ ಸಾಲಿನಲ್ಲಿ ಇನ್ನೊಬ್ಬರು. ಅವರು ರಾಜಸ್ಥಾನದ ಚಿತ್ತೋರಗಢ ಕ್ಷೇತ್ರದಲ್ಲಿ ಸೋಲಿನ ಮಾಲೆ ಧರಿಸಿದರು.

ಬಿಜೆಪಿ ಮುಖಂಡರಾದ, ಲೋಕಸಭೆಯ ಮಾಜಿ ಉಪಸ್ಪೀಕರ್ ಸೂರಜ್ಬಾನ್ ಅವರು ಈ ಬಾರಿಯ ಚುನಾವಣೆಯಲ್ಲಿ ಸೋತಿದ್ದಾರೆ.

ತಳಕಚ್ಚಿದ ಕಾನ್ಶಿರಾಂ

ಕೋಮುವಾದಿ ಬಿಜೆಪಿ ಜೊತೆ ಚೆಲ್ಲಾಟವಾಡಿ ರಾಜಕೀಯವಾಗಿ ಅತ್ಯಂತ ಮಹತ್ವದ್ದೆನಿಸಿರುವ ಉತ್ತರ ಪ್ರದೇಶದ ಆಡಳಿತ ಚುಕ್ಕಾಣಿಯನ್ನು ಕೋಮುವಾದಿಗಳ ಕೈಗೊಪ್ಪಿಸಿದ ಅಪಖ್ಯಾತಿಗೆ ಒಳಗಾಗಿರುವ ಬಹುಜನ ಸಮಾಜ ಪಕ್ಷದ(ಬಿಎಸ್‌ಪಿ) ಅಧ್ಯಕ್ಷ ಕಾನ್ಶಿರಾಂ ಅವರೇ ಸ್ವತಃ ಚುನಾವಣೆಯಲ್ಲಿ ಸೋತಿದ್ದಾರೆ.

ದೇಶದ ರಾಜಕೀಯದಲ್ಲಿ ತಾವೇ ನಿರ್ಣಾಯಕ ಪಾತ್ರವಹಿಸಲಿದ್ದೇವೆ ಎಂದು ಆಗಾಗ ಬಡಾಯಿ ಕೊಚ್ಚಿಕೊಳ್ಳುವ ಬಿಎಸ್‌ಪಿ ಖಾತೆಗೆ ಜಮಾ ಆಗಿರುವುದು ಕೇವಲ ಐದು ಸ್ಥಾನಗಳು.

ಹೊಣೆಯೂ ಬಿಜೆಪಿ ದ್ವಿಮುಖ ಧೋರಣೆಯೂ..

ಲೋಕಸಭಾ ಚುನಾವಣೆಗಳಲ್ಲಿ ಎದುರಿಸಿದ ಸೋಲಿನ ಹೊಣೆ ಹೊತ್ತು ಆಯಾ ಪಕ್ಷಗಳ ರಾಜ್ಯ ಸರ್ಕಾರಗಳು ರಾಜಿನಾಮೆ ನೀಡುವ ಕುರಿತು ಬಿಜೇಪಿ ದ್ವಿಮುಖ ನೀತಿಯನ್ನು ಅನುಸರಿಸುತ್ತಿದೆಯೇ?

ಹೌದು ಎಂದು ಯಾವುದೇ ಅನುಮಾನಕ್ಕೆ ಎಡೆಯಿಲ್ಲದಂತೆ ಇದಕ್ಕೆ ಉತ್ತರ ನೀಡಬಹುದು.

ಕರ್ನಾಟಕದಲ್ಲಿ ಜನತಾದಳ ಅನುಭವಿಸಿದ ಪರಾಭವದ ಹಿನ್ನೆಲೆಯಲ್ಲಿ ವಿಧಾನಸಭೆ ವಿಸರ್ಜನೆಯಾಗಿ ಹೊಸ ದಾಗಿ ಚುನಾವಣೆಗಳು ನಡೆಯಬೇಕು ಎಂದು ಬಿಜೆಪಿ ಬೊಂಬ್ಡಾ ಬಜಾಯಿ ಸುತ್ತಿದೆ. ಈ ಆಗ್ರಹವನ್ನು ಬಿ.ಎಸ್. ಯಡಿಯೂರಪ್ಪ ಮತ್ತು ಅನಂತ ಕುಮಾರ್ ಮಂಡಿಸಿದ್ದಾರೆ.

ಆದರೆ, ಅವರದೇ ಪಕ್ಷ ಶಿವಸೇನೆಯೊಂದಿಗೆ ಸೇರಿ ಮಹಾರಾಷ್ಟ್ರದಲ್ಲಿ ನಡೆಸುತ್ತಿರುವ ಸರ್ಕಾರ ಕೂಡ ಪಟೇಲರ ಸರ್ಕಾರ ಎದುರಿಸುತ್ತಿರುವಂತಹ ಇಕ್ಕಟ್ಟನ್ನೇ ಎದುರಿಸುತ್ತಿದೆ.

ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ದೊಡ್ಡ ಪ್ರಮಾಣದಲ್ಲಿ ವಿಜಯ ಸಾಧಿಸಿದ್ದು ಬಿಜೆಪಿ-ಶಿವಸೇನೆ ಭಾರೀ ಪ್ರಮಾಣದ ಸೋಲನ್ನು ಅನುಭವಿಸಿವೆ. ಈ ಸೋಲಿನ ಹೊಣೆ ಹೊತ್ತು ಶಿವಸೇನೆಗೆ ಸೇರಿದ ಮಹಾರಾಷ್ಟ್ರದ ಮುಖ್ಯಮಂತ್ರಿ ಮನೋಹರ ಜೋಷಿ ಅವರು ಸೇನೆಯ ಮುಖ್ಯಸ್ಥ ಬಾಳಾ ಠಾಕರೆಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ.

ಮಂಗಳವಾರ ಬೀಜೇಪಿ ವಕ್ತಾರ ವೆಂಕಯ್ಯನಾಯ್ಡು ಅವರ ಪತ್ರಿಕಾಗೋಷ್ಠಿಯಲ್ಲಿ ಮಹಾರಾಷ್ಟ್ರ ಸರ್ಕಾರ ರಾಜೀನಾಮೆ ನೀಡುತ್ತದೆಯೇ ಎಂಬ ಪ್ರಶ್ನೆ ಎದ್ದಿತ್ತು. ಮಹಾರಾಷ್ಟ್ರ ಸರ್ಕಾರ ರಾಜೀನಾಮೆ ನೀಡುವ ಅಗತ್ಯವಿಲ್ಲ. ರಾಜ್ಯ ಸರ್ಕಾರದ ಸಾಧನೆಗಳ ಕುರಿತು ನೀಡಿದ ಜನಾದೇಶವಲ್ಲ ಈ ಫಲಿತಾಂಶಗಳು. ಹಾಗೆ ರಾಜೀನಾಮೆ ನೀಡಬೇಕಾದರೆ ಅಸ್ಸಾಮ್, ಮಧ್ಯಪ್ರದೇಶ, ತಮಿಳುನಾಡು, ಮುಂತಾದ ಹಲವಾರು ರಾಜ್ಯಗಳು ರಾಜೀನಾಮೆ ನೀಡಬೇಕಾಗುತ್ತದೆ ಎಂಬವಾದವನ್ನು ವೆಂಕಯ್ಯ ನಾಯ್ಡು ಮಂಡಿಸಿದರು.

ಇದೇ ರೀತಿ ರಾಜಸ್ಥಾನದ ಶೆಖಾವತ್ ಸರಕಾರ ಕೂಡ ರಾಜಿನಾಮೆ ನೀಡುವ ಅಗತ್ಯವಿಲ್ಲ ಎಂದು ಬಿಜೆಪಿ ಹೇಳಿದೆ.

ಹೀಗೆ, ಜನಾದೇಶವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ವಿಶ್ಲೇಷಿಸುತ್ತಿರುವ ಬಿಜೆಪಿ ದ್ವಿಮುಖ ಧೋರಣೆಯನ್ನು ತಾಳುತ್ತಿದೆ.

ರಾಜ್ಯಗಳ ಮೇಲೆ ರಾಷ್ಟ್ರಪತಿ ಆಡಳಿತ ಹೇರುವ ಸಂವಿಧಾನದ 356 ನೆಯ ವಿಧಿಯನ್ನು ತಮ್ಮ ಸರ್ಕಾರ (ಕೇಂದ್ರದಲ್ಲಿ ರಚಿಸಬೇಕಿರುವ ಬೀಜೇಪಿ ಮಿತ್ರಕೂಟದ ಸರ್ಕಾರ) ರಾಜಕೀಯ ಉದ್ದೇಶಗಳಿಗಾಗಿ ದುರುಪಯೋಗ ಮಾಡುವುದಿಲ್ಲ ಎಂದು ವೆಂಕಯ್ಯ ನಾಯ್ಡು ಹೇಳಿದ್ದಾರೆ.

ಆದರೆ ನಮ್ಮ ಸರ್ಕಾರ ಮೊಟ್ಟ ಮೊದಲು ಈ ವಿಧಿಯನ್ನು ಬಿಹಾರದ ಮೇಲೆ ಬಳಸುವುದು ನಿಶ್ಚಿತ. ಜಂಗಲ್ ರಾಜ್ಯ ವಿರುವ ಬಿಹಾರ ರಾಷ್ಟ್ರಪತಿ ಆಳ್ವಿಕೆಗೆ ತಕ್ಕ ರಾಜ್ಯ ಎಂದು ಅವರು ಹೇಳಿದ್ದಾರೆ.

ಇಲ್ಲೂ ಬಿಜೆಪಿಯ ದ್ವಿಮುಖ ಧೋರಣೆ ಹೇಗಿದೆ ನೋಡಿ.

ಲೋಕಸಂಚಾರ

ಇರಾಕ್: ಕೊನೆಗೂ ಅಮೆರಿಕನ್ ಯುದ್ಧಕೋರತನಕ್ಕೆ ಕಡಿವಾಣ

ದಕ್ಷಿಣ ಕೋರಿಯಾ ಅಧ್ಯಕ್ಷರ ಅಧಿಕಾರ ಸ್ವೀಕಾರ

ತೀವ್ರ ಆರ್ಥಿಕ ಬಿಕ್ಕಟ್ಟಿನ ನಡುವೆ ದಕ್ಷಿಣ ಕೋರಿಯಾದ ಹೊಸ ಅಧ್ಯಕ್ಷ ಕಿಮ್ ದೇ ಜುಂಗ್ ಫೆಬ್ರವರಿ 25 ರಂದು ಅಧಿಕಾರ ವಹಿಸಿಕೊಂಡರು. ಸ್ಪರ್ಧೆ ಮತ್ತು ಪ್ರಜಾಪ್ರಭುತ್ವದ ಮೂಲಕ ಬಿಕ್ಕಟ್ಟಿಗೀಡಾಗಿರುವ ಆರ್ಥಿಕವನ್ನು ಸುಧಾರಿಸುವುದಾಗಿ ಹಾಗೂ ಕೆಲವೇ ಪರಿವಾರಗಳ ಕಪಿಮುಷ್ಟಿಯಿಂದ ಬಿಡುಗಡೆ ಮಾಡುವುದಾಗಿ ಅವರು ವಚನ ನೀಡಿದರು. ಪ್ರಜಾಪ್ರಭುತ್ವ ಮತ್ತು ಮಾರುಕಟ್ಟೆ ಆರ್ಥಿಕ ಒಟ್ಟೊಟ್ಟಾಗಿ ಸಾಮರಸ್ಯದಿಂದ ಬೆಳೆದಾಗ ರಾಜಕೀಯ ಮತ್ತು ವ್ಯಾಪಾರಿಗಳ ನಡುವಿನ ಶಾಮೀಲು, ಭ್ರಷ್ಟಾಚಾರಕ್ಕೆ ಅವಕಾಶವಿರದು ಎಂಬುದು ಅವರ ಆಶಯ. ಅದು ಈಡೇರುತ್ತದೋ ಇಲ್ಲವೋ, ಉದಾರೀಕರಣವಾದಿಗಳು ಮಾದರಿಯಾಗಿ ತೋರಿಸುತ್ತಿದ್ದ ದಕ್ಷಿಣ ಕೋರಿಯಾದ ವ್ಯವಸ್ಥೆಯೇ ಇಂತಹ ಶಾಮೀಲಿಗೆ, ಭ್ರಷ್ಟಾಚಾರಕ್ಕೆ ಅವಕಾಶ ನೀಡಿತ್ತು ಎಂಬುದಂತೂ ಸ್ಪಷ್ಟವಾಗಿದೆ.

ಈ ನಡುವೆ ಕಿಮ್ ಡೆಂಗ್ ಎಲ್‌ರವರನ್ನು ಪ್ರಧಾನ ಮಂತ್ರಿಯಾಗಿ ನೇಮಿಸಿರುವುದಕ್ಕೆ ವ್ಯಾಪಕ ವಿರೋಧ ವ್ಯಕ್ತಗೊಂಡಿದೆ. ಇವರು ಸಂಪ್ರದಾಯಶರಣ ರಾಜಕೀಯ ಪಂಥದವರು ಎಂಬುದು ಈ ವಿರೋಧಕ್ಕೆ ಕಾರಣ.

ಪಾಕಿಸ್ತಾನದಲ್ಲಿ ಮತ್ತೆ ಸ್ಫೋಟ, ಗಲಭೆಗಳು

ಫೆಬ್ರವರಿ 28 ರಂದು ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದಿನಲ್ಲಿ ಮತ್ತೆ ಒಂದು ಬಾಂಬ್ ಸ್ಫೋಟ ನಡೆಯಿತು. ಕಳೆದ ಕೆಲವು ದಿನಗಳಲ್ಲಿ ಇದು ಏಳನೇ ಸ್ಫೋಟವೆಂದು ಹೇಳಲಾಗಿದೆ. ಇವುಗಳಲ್ಲಿ ಒಟ್ಟು 50 ಜನಗಳು ಪ್ರಾಣಕಳೆದುಕೊಂಡಿದ್ದಾರೆ.

ಈ ನಡುವೆ ಪಾಕಿಸ್ತಾನದ ಸರಕಾರ ಐದನೇ ಜನಗಣತಿ ಮಾರ್ಚ್ 2 ರಂದು ಆರಂಭಿಸಿರುವುದನ್ನು ವಿರೋಧಿಸಿ ದೇಶದ ಹಲವೆಡೆ ಗಲಭೆಗಳು ನಡೆದಿವೆ. ಬಲೂಚಿಸ್ತಾನ ಮತ್ತು ಸಿಂಧ್‌ಗಳಲ್ಲಿ ವ್ಯಾಪಕ ಪ್ರತಿಭಟನೆ ವ್ಯಕ್ತಗೊಂಡಿದೆ. ತಮ್ಮ ಸ್ವಂತಿಕೆಯನ್ನು ಅಳಿಸಿ ಹಾಕಲು ಈ ಜನಗಣತಿಯನ್ನು ಬಳಸಿಕೊಳ್ಳಲಾಗುತ್ತಿದೆ ಎಂಬುದು ಇವರ ಭಯ.

ಪಾಕಿಸ್ತಾನದ ವಾಯುವ್ಯ ಪ್ರಾಂತ್ಯ 'ಪಾಖ್ತೂನ್ಖ್ವಾ' ಎಂದು ನಾಮಕರಣ ಮಾಡಬೇಕೆಂದು ಅಲ್ಲಿನ ಅವಾಮಿ ನ್ಯಾಶನಲ್ ಪಾರ್ಟಿಯ ಬೇಡಿಕೆಯನ್ನು ಒಪ್ಪಿಕೊಳ್ಳಲಿಲ್ಲ ಎಂಬ ಕಾರಣಕ್ಕೆ ಈ ಪಕ್ಷ ಪಾಕಿಸ್ತಾನದ ಆಳುವ ಪಕ್ಷ ಪಾಕಿಸ್ತಾನ ಮುಸ್ಲಿಂ ಲೀಗ್‌ನೊಂದಿಗೆ ಹೊಂದಿದ್ದ ಒಂಭತ್ತು ವರ್ಷಗಳ ಮೈತ್ರಿಗೆ ತೀವ್ರ ಧಕ್ಕೆ ಬಂದಿದೆ ಎಂದು ತಿಳಿದುಬಂದಿದೆ.

ಅಧ್ಯಕ್ಷರಾಗಿ ಕ್ಯಾಸ್ಟ್ರೋ ಪುನರಾಯ್ಕೆ



ಇತ್ತೀಚೆಗೆ ದೇಶವ್ಯಾಪಿ ಚುನಾವಣೆಗಳಲ್ಲಿ ಆಯ್ಕೆಯಾದ ಕ್ಯೂಬಾದ ಸಂಸತ್ತು ಫೆಬ್ರವರಿ24 ರಂದು ತನ್ನ ಮೊದಲ ಸಭೆ ನಡೆಸಿತು. ಇದರಲ್ಲಿ ಫಿಡೆಲ್ ಕ್ಯಾಸ್ಟ್ರೋರವರನ್ನು ಅಧ್ಯಕ್ಷರಾಗಿ ಪುನರಾಯ್ಕೆ ಮಾಡಲಾಯಿತು.

ಮಾರ್ಚ್ 3 ರಂದು ವಿಶ್ವಸಂಸ್ಥೆಯ ಭದ್ರತಾ ಸಮಿತಿ ಒಂದು ನಿರ್ಣಯವನ್ನು ಅಂಗೀಕರಿಸಿ(ನಿರ್ಣಯ ಸಂಖ್ಯೆ 1154) ಫೆಬ್ರವರಿ 23 ರಂದು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನನ್‌ರವರು ಇರಾಕ್‌ಗೆ ಭೇಟಿ ನೀಡಿ ಅಧ್ಯಕ್ಷ ಸದ್ದಾಂರನ್ನು ಭೇಟಿ ಮಾಡಿ ಅಲ್ಲಿಯ ಪ್ರಧಾನಿ ತಾರೀಕ್ ಅಜೀಜ್‌ರೊಂದಿಗೆ ಮಾಡಿದ ಒಪ್ಪಂದವನ್ನು ಈ ನಿರ್ಣಯದ ಮೂಲಕ ಅನುಮೋದಿಸಲಾಗಿದೆ. ಬಾಗ್ದಾದ್‌ನಲ್ಲಿ ಅಧ್ಯಕ್ಷರ ನಿವಾಸದಲ್ಲಿ ಇದೆಯೆನ್ನಲಾದ ರಾಸಾಯನಿಕ ಶಸ್ತ್ರಾಸ್ತ್ರಗಳ ಸ್ಥಳಗಳನ್ನು ಪರೀಕ್ಷಿಸುವ ವಿಷಯದಲ್ಲಿ ಉಂಟಾದ ವಿವಾದವನ್ನು ಪರಿಹರಿಸಲು ಅನ್ನಾನ್ ರವರು ಇರಾಕ್‌ಗೆ ವಿಶೇಷ ಭೇಟಿ ನೀಡಿದ್ದರು.

ಅಮೆರಿಕಾ ಮತ್ತು ಬ್ರಿಟನ್ ಈ ವಿವಾದವನ್ನು ನೆವ ಮಾಡಿಕೊಂಡು ಇರಾಕ್ ಮೇಲೆ ಎರಗಲು ಸರ್ವಸಿದ್ಧತೆ ನಡೆಸಿದ್ದು ಇಡೀ ವಿಶ್ವ ಈ ಬಗ್ಗೆ ಆತಂಕಗೊಂಡಿತ್ತು. ಈ ಸನ್ನಿವೇಶದಲ್ಲಿ ಕೋಫಿ ಅನ್ನನ್‌ರ ಭೇಟಿ ಹಾಗೂ ಅದರ ಫಲಶ್ರುತಿ ಅಮೆರಿಕಾ ಹಾಗೂ ಬ್ರಿಟನ್ನಿನ ಆಳರಸರಿಗೆ ನಿರಾಸೆಯುಂಟು ಮಾಡಿದರೂ ಭದ್ರತಾ ಸಮಿತಿಯ ಇತರ 13 ಸದಸ್ಯರೂ ಸೇರಿದಂತೆ ಇಡೀ ವಿಶ್ವ ನಿಟ್ಟುಸಿರು ಬಿಡುವಂತಾಯಿತು.

ಕೋಫಿ ಅನ್ನಾನ್‌ರವರು ಸಹಿ ಹಾಕಿದ ಒಪ್ಪಂದದಲ್ಲಿ ಮುಖ್ಯ ತಿದ್ದುಪಡಿ ತರಲು ಬ್ರಿಟನ್ ಹಾಗೂ ಅಮೆರಿಕ ಮತ್ತೆ ಪ್ರಯತ್ನ ನಡೆಸಿದವು. ಇರಾಕ್ ಶಸ್ತ್ರಾಸ್ತ್ರ ಪರೀಕ್ಷಣೆಗೆ ಅವಕಾಶ ನೀಡದಿದ್ದರೆ ಅದರ ಮೇಲೆ ಬಲ ಪ್ರಯೋಗದ ಅಂಶವನ್ನು ಈ ನಿರ್ಣಯದಲ್ಲಿ ಸೇರಿಸಲು ಬ್ರಿಟನ್, ಅಮೆರಿಕಾ ಪ್ರಯತ್ನಿಸಿದವು. ಆದರೆ ಭದ್ರತಾ ಸಮಿತಿಯ ಉಳಿದ ಮೂರು ಶಾಶ್ವತ ಸದಸ್ಯರಾದ ಚೀಣಾ, ಫ್ರಾನ್ಸ್ ಹಾಗೂ ರಶ್ಯಾ ಇದಕ್ಕೆ ಒಪ್ಪಲಿಲ್ಲ. ಇದರಿಂದಾಗಿ ಕೊನೆಗೂ ಅಮೆರಿಕಾ, ಬ್ರಿಟನ್ ಅನ್ನನ್‌ರವರ ಒಪ್ಪಂದವನ್ನು ಒಪ್ಪಬೇಕಾಗಿ ಬಂತು. ಈ ಒಪ್ಪಂದದ ಉಲ್ಲಂಘನೆಯಾದರೆ 'ಅತ್ಯಂತ ತೀವ್ರ ಪರಿಣಾಮ ಎದುರಿಸಬೇಕಾದೀತು' ಎಂದಷ್ಟೇ ಈಗ ಸೇರಿಸಲಾಗಿದೆ. ಅಂತಹ ಸಂದರ್ಭದಲ್ಲಿ ಅಮೆರಿಕಾ ಬಲಪ್ರಯೋಗಿಸ ಬೇಕೇ, ಬೇಡವೇ ಎಂಬುದನ್ನು ವಿಶ್ವಸಂಸ್ಥೆಯ ಭದ್ರತಾ ಸಮಿತಿ ನಿರ್ಧರಿಸುತ್ತದೆ ಎಂದು ಹೆಚ್ಚಿನ ಸದಸ್ಯರ ಅಭಿಪ್ರಾಯ. ಅಲ್ಲದೆ ಈ ತಪಾಸಣೆಗಾಗಿ ಒಂದು ವಿಶೇಷ ಗುಂಪು ರಚಿಸುವ, ಅದರ ಜತೆಗೆ ಅನ್ನನ್‌ರವರು ಆರಿಸಿದ ರಾಜತಾಂತ್ರಿಕರ ಒಂದು ಗುಂಪು ಹೋಗುವುದು ಎಂದೂ ಈ ನಿರ್ಣಯದಲ್ಲಿ ಹೇಳಲಾಗಿದೆ. ಈ ಪ್ರಕಾರ ಕೋಫಿ ಅನ್ನನ್ ರವರು ಅಮೆರಿಕಾದಲ್ಲಿ ಶ್ರೀಲಂಕಾದ ರಾಯಭಾರಿ ಧನಪಾಲರವರನ್ನು ಈ ತಂಡದ ಮುಖ್ಯಸ್ಥರಾಗಿ ನೇಮಿಸಿದ್ದಾರೆ. ವಿಶ್ವಸಂಸ್ಥೆಯಲ್ಲಿ ಹಿಂದೆ ಭಾರತದ ರಾಯಭಾರಿಯಾಗಿದ್ದ ಪ್ರಕಾಶ್ ಶಾಹರವರನ್ನು ಇರಾಕ್‌ನಲ್ಲಿ ತನ್ನ ವಿಶೇಷ ಪ್ರತಿನಿಧಿಯಾಗಿ ನೇಮಿಸಿದ್ದಾರೆ. ಇವೆಲ್ಲದರಿಂದ ಅಮೆರಿಕಾ ಹಾಗೂ ಬ್ರಿಟನ್ ಖಿನ್ನಗೊಂಡಿವೆ-ಇರಾಕ್ ಮೇಲೆ ಧಾಳಿ ಮಾಡುವ ಅವಕಾಶ ತಪ್ಪಿಹೋಯಿತು ಎಂದು!

ಕೋಫಿ ಅನ್ನನ್‌ರ ಒಪ್ಪಂದವನ್ನು ತಿದ್ದುಪಡಿ ಮಾಡುವ ಅಮೆರಿಕಾ, ಬ್ರಿಟನ್ ಪ್ರಯತ್ನಕ್ಕೆ ಅಮೆರಿಕಾದೊಳಗೂ ಭಾರೀ ಪ್ರತಿಭಟನೆ ವ್ಯಕ್ತವಾಯಿತು. ಫೆಬ್ರವರಿ 28 ರಂದು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಒಂದು ಬೃಹತ್ ಯುದ್ಧ-ವಿರೋಧಿ ರ್‍ಯಾಲಿ ನಡೆಯಿತು.





ಸ್ಯಾನ್ ಫ್ರಾನ್ಸಿಸ್ಕೋನಲ್ಲಿ ಪ್ರತಿಭಟನೆ 'ಇರಾಕಿಗೆ ಬಾಂಬು ಹಾಕಬೇಡಿ, ಕೆನ್‌ಸ್ಟಾರ್‌ಗೆ ಬಾಂಬುಹಾಕಿ' 'ದಿಗ್ಬಂಧನ ಕೊಲ್ಲುತ್ತದೆ' ಎಂಬ ಫಲಕ ಹೊತ್ತ ಪ್ರದರ್ಶಕರು.

'ನಾಚಿಕೆಗೇಡು'

ಯುರೋಪು, ಅಮೆರಿಕಾಗಳಲ್ಲಿರುವ ಭಾರತೀಯ ಎಡಪಂಥೀಯರ ವೇದಿಕೆ ಅಧ್ಯಕ್ಷ ಕ್ಲಿಂಟನ್‌ಗೆ ಒಂದು ಬಹಿರಂಗ ಪತ್ರ ಬರೆದು 'ಶ್ರೀಯುತ ಕ್ಲಿಂಟನ್‌ರವರೇ, ನಿಮ್ಮಲ್ಲಿ ಸಭ್ಯತೆಯ ಭಾವನೆಯೇನಾದರೂ ಇದ್ದರೆ ಇರಾಕಿಗಳನ್ನು ಅವರಷ್ಟಕ್ಕೇ ಬಿಟ್ಟುಬಿಡಿ. ನಿಮ್ಮ ಹಾಗೂ ನಿಮ್ಮ ಹಿಂದಿನ ಜಾರ್ಜ್‌ಬುಶ್‌ರವರ ಕೈಗಳಲ್ಲಿ ಅವರು ಸಾಕಷ್ಟು ಸಂಕಟ ಪಟ್ಟಿದ್ದಾರೆ' ಎಂದು ಹೇಳಿದೆ. 1991 ರ ಯುದ್ಧ ಬಹಳಷ್ಟು ಜನಗಳನ್ನು ಸಾಯಿಸಿದೆ. ಯುದ್ಧಾನಂತರ ಹೇರಿದ ನಿರ್ಬಂಧಗಳು ಸುಮಾರು 10 ಲಕ್ಷ ಇರಾಕಿಗಳು ಸಾಯುವಂತೆ ಮಾಡಿದೆ. ಇದರಲ್ಲಿ ಸುಮಾರು 6 ಲಕ್ಷ 5 ವರ್ಷಕ್ಕಿಂತ ಕೆಳಗಿನ ಮಕ್ಕಳು. ಈ ವಿಶ್ವದ ನಾಗರೀಕರಾಗಿ ನಾವು ವಿಶ್ವಸಂಸ್ಥೆಯನ್ನು ಭ್ರಷ್ಟಗೊಳಿಸುತ್ತಿರುವುದರ ಬಗ್ಗೆ ಆತಂಕ ಪಡಬೇಕಾಗುತ್ತದೆ. ಇಡೀ ವಿಶ್ವದ ಜನಗಳನ್ನು ಪ್ರತಿನಿಧಿಸಬೇಕಾದ ಮಾನವಕುಲದ ದೀರ್ಘಕಾಲದ ಸಮಸ್ಯೆಗಳನ್ನು, ತಿಕ್ಕಾಟ- ಯುದ್ಧಗಳನ್ನು ತಡೆಯಬೇಕಾದ ಒಂದು ಸಂಸ್ಥೆ ತದ್ವಿರುದ್ಧವಾಗಿ ಯುದ್ಧ ಆರಂಭಿಸಲು, ಮಾನವಕುಲದ ಸಂಕಟಗಳನ್ನು ಹೆಚ್ಚಿಸುವ ಉದ್ದೇಶದಿಂದ ಒಂದು ಬಲಿಷ್ಟ ದೇಶದ ವಿದೇಶಾಂಗ ನೀತಿಯ ಸಾಧನವಾಗಿ ಬಳಕೆಯಾಗುವುದು ನಿಜಕ್ಕೂ ನಾಚಿಕೆಗೇಡು ಎಂದು ಈ ವೇದಿಕೆ ಸಾರಿದೆ.

ಇಸ್ರೇಲ್ ಕಮ್ಯುನಿಸ್ಟ್ ಪಕ್ಷದ ಖಂಡನೆ

ಇಸ್ರೇಲ್ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಒಂದು ಹೇಳಿಕೆ ಹೊರಡಿಸಿ ಕ್ಲಿಂಟನ್ ಆಡಳಿತದ ಯುದ್ಧಕೋರತನವನ್ನು ಬಲವಾಗಿ ಖಂಡಿಸಿದೆ. ಸದ್ದಾಂ ಹುಸೇನರನ್ನು ಅಧಿಕಾರದಿಂದ ಇಳಿಸಲು ಹೀಗೆ ಮಾಡುತ್ತಿದ್ದೇವೆಂಬುದು ಕ್ಲಿಂಟನ್‌ರ ಗೋಸುಂಬೆತನದ ಪ್ರತೀಕ. ಏಕೆಂದರೆ ತಮ್ಮ ಜನಗಳನ್ನು ದಮನ ಮಾಡುವ ಹಲವು ಸರ್ವಾಧಿಕಾರಿಗಳನ್ನು ಅವರು ಬೆಂಬಲಿಸುತ್ತಾ ಬಂದಿದ್ದಾರೆ. ವಾಸ್ತವವಾಗಿ ಇರಾಕಿನ ಮೇಲಿನ ಧಾಳಿಯಿಂದ ಅವರು ಸದ್ದಾಂರನ್ನು ಬಲಪಡಿಸುತ್ತಾರಷ್ಟೇ ಎಂದು ಅದು ಹೇಳಿದೆ. ಈ ಹಿಂದೆ ಇಸ್ರೇಲಿ ಕಮ್ಯುನಿಸ್ಟ್ ಪಕ್ಷ ಇರಾಕಿನ ಕುವೈತಿ ಆಕ್ರಮಣ ಹಾಗೂ ಇರಾಕಿನ ವಿರುದ್ಧ ಕ್ಷಿಪಣಿ ಆಕ್ರಮಣಗಳನ್ನು ಖಂಡಿಸಿತ್ತು. ಇಸ್ರೇಲಿನ ನೆತಾನ್ಯಾಹು ಸರಕಾರ ಕೂಡಾ ಅಮೆರಿಕದ ಯುದ್ಧಕೋರತನದಲ್ಲಿ ಭಾಗಿಯಾಗಿದೆ ಎಂದೂ ಅದು ಖಂಡಿಸಿದೆ.

'ನಾವ ಒಟ್ಟಾಗಿ ಯುದ್ಧಭಾವೋನ್ಮಾದವನ್ನು ಉದ್ರೇಕಿಸುವ ವಿರುದ್ಧ, ಇರಾಕಿನ ಮೇಲೆ ಅಮೆರಿಕಾದ ಆಕ್ರಮಣದ ವಿರುದ್ಧ, ಇಸ್ರೇಲಿ ಸರಕಾರ ಪ್ಯಾಲೆಸ್ಟೀನ್‌ನಲ್ಲಿ ನೆಲೆಗೊಳಿಸುವುದರ ವಿರುದ್ಧ, ಇಸ್ರೇಲ್ ಹಾಗೂ ಪ್ಯಾಲೆಸ್ಟೀನ್ ನಡುವೆ ಶಾಂತಿಗಾಗಿ ಹಾಗೂ ಮಧ್ಯಪೂರ್ವದಲ್ಲಿ ಎಲ್ಲಾ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳನ್ನು ನಾಶಗೊಳಿಸುವುದಕ್ಕಾಗಿ ಹೋರಾಡೋಣ" ಎಂದು ಇಸ್ರೇಲ್ ಕಮ್ಯುನಿಸ್ಟ್ ಪಕ್ಷ ಇಸ್ರೇಲಿ ಸಾರ್ವಜನಿಕರು, ಯೆಹೂದಿ ಹಾಗೂ ಅರಬ್ ನಾಗರೀಕರಿಗೆ ಕರೆ ನೀಡಿದೆ.

ದಲೈಲಾಮಾಗೆ ಈಗ ಮಾತುಕತೆ ಬೇಕಾಯಿತೆ?

ಟಿಬೇಟಿನಲ್ಲಿ ಪಾಳೆಯಗಾರಿ-ವಿರೋಧಿ ಕ್ರಾಂತಿ ನಡೆದಾಗ ಓಡಿಬಂದ ದಲೈಲಾಮಾ ಇದುವರೆಗೆ ಸಾಮ್ರಾಜ್ಯಶಾಹಿಗಳ ನೆರವಿನಿಂದ ಟಿಬೆಟ್‌ನ 'ಸ್ವಾತಂತ್ರ್ಯ'ಕ್ಕಾಗಿ ಹೋರಾಡುತ್ತೇನೆ ಎನ್ನುತ್ತಿದ್ದವರು ಈಗ ಚೀನಾದೊಂದಿಗೆ ಈ ಬಗ್ಗೆ ಮಾತುಕತೆ ನಡೆಸಲು ತಾನು ಸಿದ್ಧ ಎನ್ನುತ್ತಿದ್ದಾರೆ. ಆದರೆ ಚೀಣಾ ಸರಕಾರ ಇದನ್ನು ತಿರಸ್ಕರಿಸಿದೆ. 'ಅಂತರ್‍ರಾಷ್ಟ್ರೀಯ ಸನ್ನಿವೇಶ ತನ್ನ ಪರವಾಗಿದೆ ಎಂದು ನಂಬಿದ್ದಾಗ ಚೀಣಾದ ಕೇಂದ್ರ ಸರಕಾರದಿಂದ ಎಲ್ಲಾ ಸಂಪರ್ಕಗಳನ್ನು ಕಡಿದುಕೊಂಡಿದ್ದ ಆತ ಈಗ ಪರಿಸ್ಥಿತಿ ತನ್ನ ವಿರುದ್ಧ ಹೋಗುತ್ತಿದೆ ಎಂದು ಕಂಡಾಗ ಮಾತುಕತೆ ನಡೆಸಲು ಮುಂದಾಗಿದ್ದಾರೆ" ಎಂದು ಚೀಣೀ ವಾರ್ತಾಸಂಸ್ಥೆ ಕ್ಸಿನ್‌ಹುವಾ ಟಿಪ್ಪಣಿ ಮಾಡಿದೆ. ಇತ್ತೀಚೆಗೆ 'ಸ್ವಾತಂತ್ರ್ಯ'ದ ಮಾತು ಬಿಟ್ಟು 'ಸ್ವಾಯತ್ತತೆ' ಮಾತನಾಡುತ್ತಿರುವ ದಲೈಲಾಮಾಗೆ ಚೀಣಾ ಸರಕಾರದೊಂದಿಗೆ ಮಾತುಕತೆ ನಡೆಸುವ ಅವಕಾಶವಿದ್ದಾಗ ಅದನ್ನು ಕಳೆದುಕೊಂಡರು ಎಂದು ಟಿಪ್ಪಣಿ ಮಾಡಿರುವ ಈ ಸುದ್ದಿ ಸಂಸ್ಥೆ ಟಿಬೇಟಿನ ಸ್ವಾಯತ್ತತೆಯ ಪ್ರಶ್ನೆಯ ಬಗ್ಗೆ ದಲೈಲಾಮಾ ಇಬ್ಬಂದಿತನ ವ್ಯಕ್ತಪಡಿಸುತ್ತಿದ್ದಾರೆ ಎಂದಿದೆ. ಇದುವರೆಗೆ ಟಿಬೇಟ್ ಸ್ವತಂತ್ರವಾಗಿ ತನ್ನ ಪಾಳೆಯಗಾರಿ ಹಿಡಿತದಲ್ಲಿ ಮತ್ತೆ ಬರಬೇಕೆಂದು ಬಯಸುತ್ತಿದ್ದ ದಲೈಲಾಮ ಅಮೆರಿಕಾ, ಪಾಶ್ಚಿಮಾತ್ಯ ದೇಶಗಳ ಆಳರಸರಲ್ಲಿ ಈ ಬಗ್ಗೆ ಆಸಕ್ತಿ ಕಮ್ಮಿಯಾಗುತ್ತಿರುವುದನ್ನು ಕಂಡು ಹಾಂಗ್‌ಕಾಂಗ್, ತೈವಾನ್‌ಗಳಿಗೆ ಕೊಡಬೇಕೆಂದಿರುವ ವಿಶೇಷ ಸ್ಥಾನಮಾನವನ್ನು ಟಿಬೇಟಿಗೂ ನೀಡಬೇಕೆಂದು ಗೋಗರೆಯುತ್ತಿದ್ದಾರೆ. ಟಿಬೆಟ್ ಈಗಾಗಲೇ ಚೀಣಾದ ಒಂದು ದೊಡ್ಡ ಸ್ವಾಯತ್ತ ಪ್ರದೇಶ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ದಿಲ್ಲಿ, ಕಲ್ಕತ್ತಾಗಳಲ್ಲಿ ಅಮೆರಿಕನ್ ಯುದ್ಧಕೋರತನದ ವಿರುದ್ಧ ಸಮರಧೀರ ಪ್ರದರ್ಶನ

ಸಿಪಿಐ(ಎಂ) ಹಾಗೂ ಸಿಪಿಐನ ದಿಲ್ಲಿ ಘಟಕಗಳ ಕರೆಯ ಮೇರೆಗೆ 2000 ಕಾರ್ಮಿಕರು, ಮಹಿಳೆಯರು, ಯುವಜನ, ವಿದ್ಯಾರ್ಥಿಗಳು, ಅಧ್ಯಾಪಕರು ಚಾಣಕ್ಯಪುರಿಯಲ್ಲಿ ಫೆಬ್ರವರಿ 23 ರಂದು ಒಂದು ಸಮರಧೀರ ಮತಪ್ರದರ್ಶನ ನಡೆಸಿದರು. ಇರಾಕಿನ ಮೇಲೆ ಧಾಳಿ ನಡೆಸುವ ಅಮೆರಿಕನ್ ಪ್ರಯತ್ನಗಳನ್ನು ವಿರೋಧಿಸಿ ಅಮೆರಿಕನ್ ರಾಯಭಾರಿ ಕಚೇರಿಯತ್ತ ಸಾಗುತ್ತಿದ್ದ ಮೆರವಣಿಗೆಯನ್ನು ತಡೆದು ಪೋಲೀಸರು ಲಾಠಿ ಪ್ರಹಾರ ಮಾಡಿದರೂ ಲೆಕ್ಕಿಸದೆ ಈ ಮತಪ್ರದರ್ಶನ ನಡೆಯಿತು. ಇರಾಕನ್ನು ಮಣಿಸುವ ಅಮೆರಿಕನ್ ಪ್ರಯತ್ನ ಮೂರನೇ ಜಗತ್ತಿನ ದೇಶಗಳಿಗೆ ಅಪಾಯಕಾರಿ, ಆರ್ಥಿಕ ದಿಗ್ಬಂಧನದಿಂದ ಇರಾಕಿ ಜನತೆ ಅನುಭವಿಸುತ್ತಿರುವ ಸಂಕಟಗಳು ಅಮೆರಿಕಾ ತಾನು ಮಾನವಹಕ್ಕುಗಳ ಪ್ರತಿಪಾದಕ ಎಂಬ ಬೊಗಳೆಯನ್ನು ಬಯಲಿಗೆಳೆದಿದೆ ಎಂದು ಸಿಪಿಐ(ಎಂ) ಪೊಲಿಟಬ್ಯೂರೋ ಸದಸ್ಯರಾದ ಪ್ರಕಾಶ ಕಾರಟ್ ಹಾಗೂ ಸಿಪಿಐ ಕೇಂದ್ರ ಸೆಕ್ರೆಟಾರಿಯಾಟ್ ಸದಸ್ಯರಾದ ಅತುಲ್ ಕುಮಾರ್ ಅಂಜನ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು.

ಸಂಯುಕ್ತ ರಂಗ ಸರಕಾರದ ದೃಢ ನಿಲುವು

1991 ರಲ್ಲಿ ಇರಾಕ್ ಮೇಲೆ ಅಮೆರಿಕಾ ಧಾಳಿ ನಡೆಸಿದ ಸಂದರ್ಭದಲ್ಲಿ ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಬೆಂಬಲಿತ ಚಂದ್ರಶೇಖರ್ ಸರ್ಕಾರ ಅಮೆರಿಕನ್ ಯುದ್ಧವಿಮಾನಗಳಿಗೆ ಇಂಧನ ಪೂರೈಕೆಗೆ ಸೌಲಭ್ಯ ಒದಗಿಸಿತ್ತು. ಈ ಬಾರಿಯೂ ಅಮೆರಿಕನ್ ಸರಕಾರ ಗುಜ್ರಾಲ್ ಸರಕಾರಕ್ಕೆ ಇಂತಹ ಸೌಲಭ್ಯ ಒದಗಿಸಲು ಕೇಳಿತ್ತು. ಆದರೆ ಸಂಯುಕ್ತ ರಂಗ ಸರಕಾರ ಇದಕ್ಕೆ ಒಪ್ಪಲಿಲ್ಲ. ಎಡಪಕ್ಷಗಳ ಬೆಂಬಲದಿಂದಾಗಿ ಸಂಯುಕ್ತ ರಂಗ ಸರಕಾರ ಇಂತಹ ದೃಢ ನಿಲುವು ತಳೆದಿದೆ ಎಂದು ಪ್ರಕಾಶ್ ಕಾರಟ್ ಹೇಳಿದರು. ಭಾರತ-ಅಮೆರಿಕಾ ಮಿಲಿಟರಿ ಸಹಕಾರ ಒಪ್ಪಂದವನ್ನು ರದ್ದುಪಡಿಸಬೇಕು ಎಂದೂ ಅವರು ಒತ್ತಾಯಿಸಿದರು.

ಕಲ್ಕತ್ತೆಯಲ್ಲಿ ಫೆಬ್ರವರಿ 24 ರಂದು ಅಮೆರಿಕನ್ ಮಾಹಿತಿ ಕೇಂದ್ರದ ಎದುರು ಒಂದು ಬೃಹತ್ ಮತ ಪ್ರದರ್ಶನ ನಡೆಯಿತು. ವಿದ್ಯಾರ್ಥಿ-ಯುವಜನ ದೊಡ್ಡ ಸಂಖ್ಯೆಯಲ್ಲಿ ಇದರಲ್ಲಿ ಭಾಗವಹಿಸಿದ್ದರು. ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಅನಿಲ್ ಬಿಸ್ವಾಸ್‌ರವರು ಅಮೆರಿಕಾ ಜನತೆಯೇ ಇರಾಕಿಗೆ ಬೆದರಿಕೆ ಹಾಕಿರುವುದರ ಬಗ್ಗೆ ಅಸಂತೋಷ ವ್ಯಕ್ತಪಡಿಸಿರುವುದನ್ನು ನೆನಪಿಸಿದರು. ಸದ್ಯಕ್ಕೆ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನನ್‌ರ ರಾಜತಾಂತ್ರಿಕ ಮುತುವರ್ಜಿಯಿಂದಾಗಿ ಪರಿಸ್ಥಿತಿ ತಿಳಿಯಾಗಿದ್ದರೂ ಅಮೆರಿಕಾ ಮತ್ತೆ ಇಂತಹ ಪ್ರಯತ್ನ ಮಾಡಬಹುದಾದ್ದರಿಂದ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ಮುಂದುವರಿಯಬೇಕು ಎಂದರು. ಎಡರಂಗ ಕಲ್ಕತ್ತಾ ಜಿಲ್ಲಾ ಸಮಿತಿ ಈ ಪ್ರತಿಭಟನೆಯನ್ನು ಸಂಘಟಿಸಿತ್ತು.



ಶ್ರೀಕೃಷ್ಣ ಆಯೋಗದ ವರದಿಯ ಪ್ರಕಟಣೆಯಲ್ಲಿ ವಿಳಂಬವೇಕೆ?

ಪೊಲಿಟ್ ಬ್ಯೂರೋ ಪ್ರಶ್ನೆ

ಬಾಬ್ರಿ ಮಸೀದಿ ಧ್ವಂಸದ ನಂತರ 1992-93 ರಲ್ಲಿ ಮುಂಬೈಯಲ್ಲಿ ನಡೆದ ಕೋಮುಗಲಭೆಗಳು ಹಾಗೂ ಸರಣಿ ಸ್ಫೋಟಗಳ ತನಿಖೆ ನಡೆಸಿದ ಶ್ರೀ ಕೃಷ್ಣ ಆಯೋಗದ ವರದಿಯನ್ನು ತಕ್ಷಣ ಪ್ರಕಟಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗ್ರಹಪಡಿಸಿದೆ. ಮುಂಬೈಯನ್ನು ನಡುಗಿಸಿದ ಅತ್ಯಂತ ಕೆಟ್ಟ ಕೋಮುಗಲಭೆಗಳನ್ನು ಯೋಜಿಸಿದ ಅಪರಾಧಿಗಳು ಯಾರು ಎಂದು ತಿಳಿಯುವ ಹಕ್ಕು ಸಾರ್ವಜನಿಕರಿಗೆ ಇದೆ. ಆಡಳಿತದಲ್ಲಿನ ಕುಂದುಕೊರತೆಗಳು, ಪೋಲೀಸರ ಪಾತ್ರವನ್ನು ಗುರುತಿಸಲು, ಎಲ್ಲಕ್ಕೂ ಮಿಗಿಲಾಗಿ ನ್ಯಾಯ ಪಡೆಯಲು ಇದು ಅಗತ್ಯ. ಪಾಪಿಗಳು ತಮ್ಮ ಕೃತ್ಯದ ಫಲವುಣ್ಣುವಂತೆ ಮಾಡಬೇಕಾದ, ಅಪರಾಧಿಗಳನ್ನು ಬಯಲಿಗೆಳೆಯಬೇಕಾದ ಸಮಯವೀಗ ಬಂದಿದೆ ಎಂದು ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣರವರೇ ಹೇಳಿದ್ದಾರೆ. ಇದನ್ನು ಸಿಪಿಐ(ಎಂ) ಒಪ್ಪುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಮಹಾರಾಷ್ಟ್ರದ ಬಿಜೆಪಿ-ಶಿವಸೇನಾ ಸರಕಾರ ಆರಂಭದಿಂದಲೂ ಈ ತನಿಖಾ ಆಯೋಗದ ಕೆಲಸಕ್ಕೆ ಅಡಚಣೆಗಳನ್ನು ಒಡ್ಡುತ್ತಾ ಬಂತು. ಬಾಬ್ರಿ ಮಸೀದಿ ಧ್ವಂಸದ ನಂತರ ನಡೆದ ಭೀಕರ ಕೋಮುಗಲಭೆಗಳ ಬಗ್ಗೆ ತನಿಖೆಯನ್ನು ವಿಳಂಬಗೊಳಿಸುವ, ದುರ್ಬಲಗೊಳಿಸುವ ಉದ್ದೇಶದಿಂದ ಅದು ತನಿಖೆಯ ವ್ಯಾಪ್ತಿಯನ್ನು ನಂತರ ನಡೆದ ಸರಣಿ ಸ್ಫೋಟಗಳಿಗೂ ವಿಸ್ತರಿಸಿತು. ಜನವರಿ 1996 ರಲ್ಲಿ ಈ ತನಿಖೆಯನ್ನೇ ರದ್ದು ಮಾಡಲು ಆ ಸರಕಾರ ನಿರ್ಧರಿಸಿತ್ತು. ಸಾರ್ವಜನಿಕ ಒತ್ತಡದಿಂದಾಗಿ ಆಯೋಗ ಮತ್ತೆ ಕೆಲಸ ಮಾಡುವಂತಾಯಿತು. ಈಗ ದೀರ್ಘಕಾಲದಿಂದ ಕಾಯುತ್ತಿದ್ದ ವರದಿ ಬಂದರೂ ಅದನ್ನು ಪ್ರಕಟಿಸುವ ಬಗ್ಗೆ ಬಿಜೆಪಿ-ಶಿವಸೇನೆ ಸರಕಾರ ದಿವ್ಯ ಮೌನ ತಳೆದಿದೆ.

ಆಗ ನಡೆದ ಕೋಮು ಗಲಭೆಗಳಲ್ಲಿ ತಮ್ಮ ಪಾತ್ರವನ್ನು ಬಹಳಷ್ಟು ಮರೆ ಮಾಡ ಬೇಕಾದ ಅಗತ್ಯ ಬಿಜೆಪಿ, ಶಿವಸೇನೆಗಿದೆ ಎಂಬುದು ಸ್ಪಷ್ಟ. ವರದಿಯನ್ನು ಪ್ರಕಟಿ ಸುವಲ್ಲಿನ ವಿಳಂಬವೇ ಇತ್ತೀಚಿನ ವರ್ಷ ಗಳಲ್ಲಿನ ಈ ಅತ್ಯಂತ ಹೇಯ ಕೋಮು ದಂಗೆಯಲ್ಲಿ ಈ ಮಂದಿ ಸಿಲುಕಿಕೊಂಡಿರು ವುದನ್ನು ದೃಢಪಡಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ತಕ್ಷಣ ಈ ವರದಿಯನ್ನು ಪ್ರಕಟಿಸಬೇಕು ಹಾಗೂ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳ ಬೇಕು ಎಂದು ಆಗ್ರಹಪಡಿಸಿದೆ.

ಹರ್ಯಾಣದಲ್ಲಿ ಕಾರ್ಮಿಕರ ಮೇಲೆ ಬರ್ಬರ ಪೋಲೀಸ್ ಗೋಳೀಬಾರ್:

ಸಿಐಟಿಯು ಖಂಡನೆ

ಹರ್ಯಾಣದ ರೇವಾರಿಯಲ್ಲಿ ಧರುಹರನ್ ಪಶುಪತಿ ನೂಲುವ- ನೇಯುವ ಮಿಲ್‌ನ ಕಾರ್ಮಿಕರ ಮೇಲೆ ಪೋಲೀಸರ ಬರ್ಬರ ಗೋಳೀಬಾರಿನಲ್ಲಿ 8 ಜನರ ಹತ್ಯೆಯಾಗಿದ್ದು, 100 ಕ್ಕೂ ಹೆಚ್ಚು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ಸಿಐಟಿಯು ಇದನ್ನು ಬಲವಾಗಿ ಖಂಡಿ ಸುತ್ತಾ ಈ ಘಟನೆಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದೆ.

ಮ್ಯಾನೇಜ್‌ಮೆಂಟ್ ಬಯಸಿದಂತೆ ಪೋಲೀಸರು ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ತಲೆಕೆಟ್ಟವರಂತೆ ಹೊರ ಗೆಳೆದು ತಂದು ಕಾರ್ಖಾನೆಯ ಗೇಟಿನ ಹೊರಗೆಸೆದರು. ನಂತರ ಸಿಕ್ಕಾಪಟ್ಟೆ ಗೋಳೀಬಾರು ನಡೆಸಿದರು. ಆಳುವ ಹೆಚ್‌ವಿಪಿ-ಬಿಜೆಪಿ ಸರಕಾರದ ಪೋಷಣೆಯಲ್ಲಿ ಪೋಲೀಸ್ ಆಡಳಿತ ಮತ್ತು ಮ್ಯಾನೇಜ್‌ಮೆಂಟ್‌ಗಳ ನಡುವಿನ ಶಾಮೀಲನ್ನು ಇದು ಬಯಲಿಗೆಳೆದಿದೆ ಎಂದು ಸಿಐಟಿಯು ಹೇಳಿದೆ.

ಹರ್ಯಾಣದಲ್ಲಿನ ಈ ಕಾಡು ರಾಜ್ಯಭಾರವನ್ನು ತಕ್ಷಣವೇ ನಿಲ್ಲಿಸಬೇಕು ಇಲ್ಲವಾದರೆ ಅದರ ದುಷ್ಪರಿಣಾಮಗಳಿಗೆ ರಾಜ್ಯಸರಕಾರವೇ ಹೊಣೆಯಾಗುತ್ತದೆ ಎಂದು ಸಿಐಟಿಯು ಎಚ್ಚರಿಸಿದೆ. ಸರಕಾರ ತಕ್ಷಣ ಈ ಘಟನೆಯ ಅಪರಾಧಿಗಳನ್ನು ಬಂಧಿಸಬೇಕು, ಲೇವಾರಿಯ ಜಿಲ್ಲಾ ಪೋಲೀಸ್ ಅಧಿಕಾರಿಗಳನ್ನು ಅಮಾನತು ಗೊಳಿಸಬೇಕು ಹಾಗೂ ಗೋಳಿಬಾರಿನಲ್ಲಿ ಸತ್ತ, ಗಾಯಗೊಂಡವರ ಕುಟುಂಬಗಳಿಗೆ ಸಾಕಷ್ಟು ಪರಿಹಾರ ನೀಡಬೇಕು ಎಂದು ಸಿಐಟಿಯು ಆಗ್ರಹಪಡಿಸಿದೆ.

ಎಸ್ ಎಫ್.ಐ.ನ ಕೆ.ಎನ್.ಉಮೇಶ್ ಗೆ ಚಿನ್ನದ ಪದಕ



ಅಭ್ಯಾಸ ಮತ್ತು ಹೋರಾಟ ಇದು ಎಸ್.ಎಫ್.ಐ.ನ ಸಂಘಟನೆಯ ಮೂಲ ಘೋಷಣೆ. ಅದನ್ನು ಪುಷ್ಟೀಕರಿಸುವಂತೆ ಎಸ್.ಎಫ್.ಐ.ನ ರಾಜ್ಯಾಧ್ಯಕ್ಷರಾದ ಕೆ.ಎನ್.ಉಮೇಶ್ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಕಾನೂನು ಸ್ನಾತಕೋತ್ತರ ಪದವಿ ಪಡೆದು ಕಾರ್ಮಿಕ ಕಾನೂನು ಹಾಗೂ ಆಡಳಿತ ಕಾನೂನುಗಳಲ್ಲಿ ಅತ್ಯಧಿಕ ಅಂಕಗಳಿಸಿ 2 ಚಿನ್ನದ ಪದಕ ಪಡೆದು ಎಸ್.ಎಫ್.ಐ.ನ ಮೆರಗು ಹೆಚ್ಚಿಸಿದ್ದಾರೆ. ಎಲ್.ಎಲ್.ಎಮ್.ನಲ್ಲಿ ಅವರು ಮಂಡಿಸಿದ ಪ್ರೌಢಪ್ರಬಂಧ 'ಬೆಂಗಳೂರು ನಗರದ ಪವರ್‌ಲೂಂ ಕಾರ್ಮಿಕರ ಸ್ಥಿತಿಗತಿಗಳು' ಈ ಪ್ರಬಂಧ ಪವರ್‌ಲೂಂ ಕಾರ್ಮಿಕರ ನೈಜ ಬದುಕಿನ ಬಗ್ಗೆ ಬೆಳಕು ಚೆಲ್ಲುವ ಒಂದು ಮಾರ್ಗದರ್ಶಿ ಕೈಪಿಡಿಯಾಗಿದೆ.

ಸಂಘಟನೆ-ಹೋರಾಟ ವಿದ್ಯಾರ್ಥಿಗಳ ಶೈಕ್ಷಣಿಕ ಯಶಸ್ಸಿಗೆ ತೊಡಕು ಎಂಬ ಅಭಿಪ್ರಾಯವೊಂದು ವಿದ್ಯಾರ್ಥಿ ವಲಯದಲ್ಲಿ ಚಾಲ್ತಿಯಲ್ಲಿದೆ. ಆದರೆ ತುಮಕೂರಿನ ಕಾರ್ಮಿಕ ಕುಟುಂಬವೊಂದರಲ್ಲಿ ಜನಿಸಿದ ಕೆ.ಎನ್.ಉಮೇಶ್ ವಿದ್ಯೋದಯ ಕಾನೂನು ಕಾಲೇಜಿನ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ, ಎಸ್.ಎಫ್.ಐ.ನ ಜಿಲ್ಲಾ ಅಧ್ಯಕ್ಷರಾಗಿ, ರಾಜ್ಯ-ಉಪಾಧ್ಯಕ್ಷರಾಗಿದ್ದರ ಜೊತೆಗೆ ವರದಕ್ಷಿಣೆ ವಿರೋಧಿ ವೇದಿಕೆಯ ಸಂಸ್ಥಾಪಕ ಕಾರ್ಯದರ್ಶಿಯೂ ಆಗಿದ್ದದ್ದು, ಎಸ್.ಎಫ್.ಐ.ನ ಧ್ಯೇಯವಾಕ್ಯ 'ಅಭ್ಯಾಸ ಮತ್ತು ಹೋರಾಟ'ವನ್ನು ಸಾರ್ಥಕ ಗೊಳಿಸಿದ್ದಾರೆ. ಉಮೇಶ್‌ರನ್ನು ವಿದ್ಯಾರ್ಥಿ ಸಮುದಾಯದ ಪರವಾಗಿ ಅಭಿನಂದಿಸಿರುವ ಎಸ್.ಎಫ್.ಐ. ರಾಜ್ಯಸಮಿತಿ, ಸಂಘಟನೆ ಶೈಕ್ಷಣಿಕ ತೊಡಕು, ವಿದ್ಯಾರ್ಥಿಗಳಿಗೆ ರಾಜಕೀಯ ಬೇಡ ಎಂಬ ಪೊಳ್ಳುವಾದಗಳ ಹರಿಕಾರರು ಈ ಸಾಧನೆಯನ್ನು ಗಮನಿಸುವುದೊಳಿತು ಎಂದಿದೆ.

ಡಿ.ವೈ.ಎಫ್.ಐ, ಜನವಾದಿ ಮಹಿಳಾ ಸಂಘಟನೆಗಳ ರಾಜ್ಯ ಸಮಿತಿಗಳ ಜೊತೆಗೆ ದುಡಿಯುವ ಜನತೆಯ ಪತ್ರಿಕೆಯಾದ ಐಕ್ಯರಂಗವೂ ಕೆ.ಎನ್.ಉಮೇಶ್‌ರವರನ್ನು ಅಭಿನಂದಿಸಿದೆ.

'ಈ ಬಾರಿ..' ಕರ್ನಾಟಕದಲ್ಲಿ

ಪುಟ 3 ರಿಂದ

ಜನತಾದಳದ ಭಿನ್ನಮತದಿಂದಾಗಿಯೇ ಎಂದು ದಳದ ಕಾರ್ಯಕರ್ತರ ಆರೋಪವಾಗಿದೆ. ಇದು ದಳದ ಹಿರಿಯ ಮುಖಂಡರಿಗೆ ಒಂದು ಸವಾಲಾಗಿದೆ.

ಬೆಂಗಳೂರು ದಕ್ಷಿಣ

ಮತ್ತೊಮ್ಮೆಬಿಜೆಪಿಯ ಅನಂತಕುಮಾರ್ ವಾಜಪೇಯಿಯ ಹೆಸರಿನಲ್ಲಿ ಮತ ಪಡೆದು ಆಯ್ಕೆಯಾಗಿದ್ದಾರೆ. ಕಾಂಗ್ರೆಸ್‌ನ ಡಿ.ಪಿ.ಶರ್ಮ ಅವರ ಸ್ಪರ್ಧಿಯಾದರೆ, ದಳದ ಮಂತ್ರಿ ವಿ. ಸೋಮಣ್ಣ 3 ನೇ ಸ್ಥಾನ ಪಡೆದಿರುವುದಕ್ಕೆ ಆಳುವ ಜನತಾದಳ ಜನಸಾಮಾನ್ಯರ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ವೆನ್ನುವುದರ ಜೊತೆಗೆ ಕೆಲವರು ಲೋಕಶಕ್ತಿ ಸೇರಿರುವುದೂ ಕಾರಣವೆನ್ನಲಾಗಿದೆ

ಬೆಂಗಳೂರು ಉತ್ತರ

ಅಪಾರ ಅಲ್ಪಸಂಖ್ಯಾತರಿರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಜಾಫರ್ ಷರೀಫ್ ಜಯಗಳಿಸಿ ಬಿಜೆಪಿ-ಲೋಕಶಕ್ತಿಯ ಮೈತ್ರಿ ಅಭ್ಯರ್ಥಿ ಜೀವರಾಜ್ ಆಳ್ವರನ್ನು ಪರಾಭವಗೊಳಿಸಿ ಕೋಮುವಾದಿಗಳ ಆಸೆಗೆ ತಣ್ಣೀರೆರಚಿದ್ದಾರೆ. ಕಳೆದ ಬಾರಿಯ ಸಂಸದ ಸಿ.ನಾರಾಯಣಸ್ವಾಮಿಯವರು ಒಳ್ಳೆಯ ಕೆಲಸ ಮಾಡಿದ್ದರೂ ಜನತೆಯಲ್ಲಿ ಅವರ ಬಗ್ಗೆ ಒಳ್ಳೆ ಅಭಿಪ್ರಾಯವಿದ್ದರೂ 3 ನೇ ಸ್ಥಾನಗಳಿಸಿರುವುದು ಜನತಾದಳದ ದೌರ್ಬಲ್ಯದ ಲಕ್ಷಣವಾಗಿದೆ.

ಚಿಕ್ಕಬಳ್ಳಾಪುರ

ರಾಜ್ಯ ಮಂತ್ರಿಗಳಂತೆ ಸಂಯುಕ್ತರಂಗದ ಕೇಂದ್ರ ಮಂತ್ರಿ ಆರ್.ಎಲ್.ಜಾಲಪ್ಪ ಅಧಿಕಾರ ಅನುಭವಿಸಿ ಜನತಾದಳ ತೊರೆದು ಕಾಂಗ್ರೆಸೇರಿ ಜಯಗಳಿಸಿದ್ದಾರೆ. ರಾಜ್ಯಕೃಷಿ ಮಂತ್ರಿ ಜನತಾದಳದ ಬೈರೇಗೌಡ ಪ್ರಬಲ ಸ್ಪರ್ಧೆ ನೀಡಿದ್ದರೆ, ಲೋಕಶಕ್ತಿಯ ಚಿತ್ರತಾರೆ ಜಯಂತಿ 3 ನೇ ಸ್ಥಾನ ಪಡೆದಿದ್ದಾರೆ. ಕೆ.ವಿ.ಪಿ.-ಬಿ.ಎಸ್. ಪಿ ಮೈತ್ರಿಕೂಟ ಬಹುತೇಕ ಕ್ಷೇತ್ರಗಳಲ್ಲಿ ಗಣನೀಯ ಮತಗಳಿಸಿ ನಾಲ್ಕನೇ ಸ್ಥಾನಗಳಿಸಿದೆ.

ಕೋಲಾರ (ಮೀ)

ವಿಷಯಾಧಾರಿತ ಚುನಾವಣಾ ಪ್ರಚಾರ ನಡೆದ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಕೆ.ಎಚ್. ಮುನಿಯಪ್ಪ ಸತತ ಮೂರನೇ ಬಾರಿಗೆ ಸಂಸತ್ ಪ್ರವೇಶಿಸಿದ್ದಾರೆ. 'ಈ ಬಾರಿ ಬಿಜೆಪಿ', 'ವಾಜಪೇಯಿ ಆಳಲಿ ಈ ದೇಶ, ಕೋಲಾರದ ಜನತೆ ನಿಮಗೆ ಆಶೀರ್ವದಿಸುತ್ತಾರೆ', 'ಗೆಲುವು ನಮ್ಮದೆ' ಎಂದು ತಿಳಿದಿದ್ದ ಬಿಜೆಪಿಯ ಹನುಮಪ್ಪರನ್ನು ಜನ ಸೋಲಿಸಿದ್ದಾರೆ. ಜೊತೆಗೆ ಬಿಜೆಪಿಯನ್ನು ಹಿಮ್ಮೆಟ್ಟಿಸುವಲ್ಲಿ ಸಿಪಿಐ(ಎಂ) ನಾಲ್ಕನೆ ಸ್ಥಾನಗಳಿಸಿದರೂ ಯಶಸ್ವಿಯಾಗಿದೆ. ಜನತಾದಳ 2ನೇ ಸ್ಥಾನಕ್ಕೇ ಮತ್ತೊಮ್ಮೆ ತೃಪ್ತಿಪಡಬೇಕಾಯಿತು.

ಜನತಾದಳದ ಮುಖಂಡರಿಗೆ ಈ ಕ್ಷೇತ್ರದ ಪ್ರಯೋಗ ಒಂದು ಕಲಿಯತಕ್ಕ ಪಾಠವೆಂದೇ ಹೇಳಬಹುದು. ಎಡ ಪಕ್ಷಗಳ ಜೊತೆಯಲ್ಲಿ ಸ್ಥಾನ ಹೊಂದಾಣಿಕೆ ಮಾಡಿಕೊಂಡು ಇಡೀ ರಾಜ್ಯದಲ್ಲಿ ಸಂಯುಕ್ತವಾಗಿ ಚುನಾವಣಾ ಪ್ರಚಾರ ಕೈಗೊಂಡಿದ್ದರೆ ಬಿಜೆಪಿ-ಲೋಕಶಕ್ತಿ ಮೈತ್ರಿಕೂಟವನ್ನು ಹಿಮ್ಮೆಟ್ಟಿಸಲು ಸಾಧ್ಯವಾಗುತ್ತಿತ್ತು.

ಸಂಗ್ರಹ: ಎಂ.ಜಯರಾಮು

STATEMENT OF THE OWNERSHIP ETC. OF THE WEEKLY NEWSPAPER "AIKYARANGA"

Form IV
(see Rule 8)

1. Place of Publication	: 12,8th cross, S.R.Nagar Bangalore 560 027
2. Periodicity of Publication	: Weekly
3. Printer's Name (Whether Citizen of India? If Foreigner, State the Country of Origin) Address:	: P.Ramachandra Rao : India : 12, 18th Cross, S.R.Nagar, Bangalore-560027
4. Publisher's Name (Whether Citizen of India? if foreigner, State the Country of Origin) Address Bangalore-560027	: P.Ramachandra Rao : Indian : 12, 18th Cross, SR. Nagar,
5. Editor's Name (Whether Citizen of India? If Foreigner, State the Country of Origin) Address	: P.Ramachandra Rao : Indian : 12, 18th Cross, S.R.Nagar, Bangalore
6. Name and addresses of individuals who own the Newspaper and partners or shareholders holding more than one percent of the total capital.	: Karnataka State Committee Communist Party of India (Marxist) 12, 18th Cross, S.R.Nagar, Bangalore-560 027

1. P.Ramachandra Rao hereby declare that the particulars given above are true to the best of my knowledge and belief

Sd/-

P.Ramachandra Rao
Publisher


Date: 28.2.1998

ವಾರದ ವ್ಯಂಗ್ಯ ಚಿತ್ರಗಳು

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಉನ್ನಿ



'ದಿ ಹಿಂದು'ನಲ್ಲಿ ಸುರೇಂದ್ರನ್



KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿ ರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27